

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -21 | Issue-01 | January 2024 | ₹ 10/-




ಜನವರಿ 19, 2024 ರಂದು ಬೆಂಗಳೂರಿನ ರಾಜಭವನದಲ್ಲಿ ರಾಜ್ಯ ಸಂಸ್ಥೆ ಏರ್ಪಡಿಸಿದ್ದ ರಾಜ್ಯ ಪುರಸ್ಕಾರ ರ್‍ಯಾಲಿಯ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕರ್ನಾಟಕ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಡಾ॥ ಎಂ.ಸಿ. ಸುಧಾಕರ್ ಅವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಸನ್ಮಾನಿಸಿ ಗೌರವಿಸಿದರು.

ಕರ್ನಾಟಕ ಸರ್ಕಾರದ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಸಚಿವರಾದ ಶ್ರೀ ಎನ್.ಎಸ್. ಬೋಸರಾಜು, ಡಾ॥ ರಿತೇಶ್ ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ಶ್ರೀಮತಿ ಸಿಂಧು ರೂಪೇಶ್, ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ರಾಜ್ಯ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಶ್ರೀ ಎಂ.ಎ. ಖಾಲಿದ್, ಶ್ರೀ ಟಿ. ಪ್ರಭಾಕರ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಜನವರಿ 26, 2024ರಂದು ಬೀದರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಗುರುನಾನಕ್ ಪಬ್ಲಿಕ್ ಶಾಲೆಯ ಸ್ಕೌಟ್ಸ್‌ಗಳಿಗೆ ಮಾನ್ಯ ಅರಣ್ಯ ಜೈವಿಕ ಹಾಗೂ ಪರಿಸರ ವಿಜ್ಞಾನ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಅವರು ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರಾದ ಶ್ರೀ ರಹೀಮ್ ಖಾನ್, ಜಿಲ್ಲಾಧಿಕಾರಿಗಳಾದ ಶ್ರೀ ಗೋವಿಂದ ರೆಡ್ಡಿ, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಚನ್ನಬಸವಣ್ಣ ಹಾಗು ಶ್ರೀ ಚಂದ್ರಕಾಂತ್ ಶಾಬಾದ್‌ಕರ್, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಡಾ. ಹೆಚ್.ಬಿ. ಭರಶೆಟ್ಟಿ, ಜಿಲ್ಲಾಕಾರ್ಯದರ್ಶಿ, ಶ್ರೀಮತಿ ನಾಗರತ್ನ ಪಾಟೀಲ್, ಡಿ.ಓ. ಉಪಸ್ಥಿತರಿದ್ದರು.

ಜನವರಿ 26, 2024 ರಂದು ರಾಯಚೂರು ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ದಿನಾಚರಣೆಯ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಜಹೀರಾಬಾದ್ ಸರ್ಕಾರಿ ಪ್ರೌಢಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ॥ ಶರಣಪ್ರಕಾಶ್ ಆರ್. ಪಾಟೀಲ್ ಅವರು ನಗದು ರೂ. 5000/–ಗಳನ್ನು, ಪ್ರಶಸ್ತಿ ಪತ್ರ ಹಾಗೂ ಬಹುಮಾನವನ್ನು ನೀಡಿ ಗೌರವಿಸಿದರು.





ಫೆಬ್ರವರಿ 08 ರಿಂದ 12, 2024ರ ವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಶಾಹೀನ್ ಶಿಕ್ಷಣ ಸಂಸ್ಥೆ, ಬೀದರ್ ಇವರ ಸಹಯೋಗದಲ್ಲಿ ಬೀದರ್‌ನಲ್ಲಿ ಏರ್ಪಡಿಸಿರುವ ಕಲ್ಯಾಣ ಕರ್ನಾಟಕ ಜಾಂಬೂರೇಟ್ ಬಗ್ಗೆ ಪೂರ್ವ ಸಿದ್ಧತಾ ಸಭೆಯು ಫೆಬ್ರವರಿ 22 ರಂದು ಬೀದರ್‌ನಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಎ. ಖಾಲೀದ್, ಶಾಹೀನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಅಬ್ದುಲ್ ಖದೀರ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರುಮ್ಮ ಸಿದ್ದಾರಡ್ಡಿ, ಎ.ಎಸ್.ಸಿ. ಶ್ರೀ ಸಿ.ಬಿ. ಪಾಟೀಲ್ ಓಕಳೆ, ಜಿಲ್ಲಾ ಕಾರ್ಯದರ್ಶಿ ಡಾ. ಹೆಚ್.ಬಿ. ಭರಶೆಟ್ಟಿ, ಎ.ಎಸ್.ಓ.ಸಿ. ಶ್ರೀಮತಿ ಮಲ್ಲೇಶ್ವರಿ ಜೂಜಾರೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 21 Issue : 01 January 2024

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಡಾ॥ ಗೊ.ರು. ಚನ್ನಬಸಪ್ಪನವರು ಭಾವೈಕ್ಯತೆ ಬಗ್ಗೆ ಮಾಡಿದ ಭಾಷಣ ...05

ಹಿಮಾಲಯ ವೃಕ್ಷಮಣಿ (ಹೆಚ್.ಡಬ್ಲ್ಯೂ.ಬಿ) ತರಬೇತಿ ಶಿಬಿರದ ವರದಿ ...08

ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ 'ಕಲ್ಯಾಣ ಕರ್ನಾಟಕ ಜಾಂಬೋರೇಟ್' ...10

ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ ...11

ರಾಜ್ಯಪುರಸ್ಕಾರ ರ್‍ಯಾಲಿ ...13

43ನೇ ರಾಜ್ಯ ಮಟ್ಟದ ಕಬ್-ಬುಲ್‌ಬುಲ್ ಉತ್ಸವ ...15

ಸುತ್ತೋಲೆ ...17

ಜಿಲ್ಲಾ ವಾರ್ತೆಗಳು ...18


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್–ಗೈಡ್ ಬಂಧುಗಳಿಗೆ

ಜನವರಿ ತಿಂಗಳಿನಲ್ಲಿ ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮಗಳು, ಚಟುವಟಿಕೆಗಳನ್ನು ನಡೆಸಿದ ಹೆಗ್ಗಳಿಕೆ ನಮ್ಮ ಸಂಸ್ಥೆಗಿದೆ. ಪ್ರಮುಖವಾಗಿ ತರಬೇತಿ ವಿಭಾಗದಲ್ಲಿ ಸಮಾಧಾನಕರ ಸಾಧನೆಯಾಗಿದೆ. ಉಪನ್ಯಾಸಕರ ಮತ್ತು ಶಿಕ್ಷಕರಿಗೆ ಆಯೋಜಿಸುವ ಮೂಲತರಬೇತಿ ಶಿಬಿರಗಳು ಮುಂದುವರೆದು ಯಶಸ್ವಿಯಾಗುತ್ತಿರುವುದರಿಂದ ಚಳುವಳಿಗೆ ಉತ್ತಮ ಆಶಾಭಾವನೆ ಮೂಡಿಸಿದೆ. ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ರಾಜ್ಯಾದ್ಯಂತ ಪ್ರತಿಯೊಂದು ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ನಮ್ಮ ಮಕ್ಕಳು ಜವಾಬ್ದಾರಿಯನ್ನು ಅರಿತು ಉತ್ಸಾಹದಿಂದ ಭಾಗವಹಿಸಿದ್ದಾರೆ. ವೈವಿಧ್ಯಮಯ ಚಟುವಟಿಕೆಗಳ ಮೂಲಕ ಸಾರ್ವಜನಿಕರಿಗೆ, ವಾಹನ ಚಾಲಕರಿಗೆ, ಮೋಟಾರು ವಾಹನಗಳ ಸವಾರರಿಗೆ ಮಹತ್ವದ ಸಂದೇಶಗಳನ್ನು ಸಾರಿದ್ದಾರೆ. ಇಂತಹ ಅಭೂತಪೂರ್ವ ಅವಕಾಶವನ್ನು ಕಲ್ಪಿಸಿಕೊಟ್ಟ ರಾಜ್ಯ ಪೋಲೀಸ್ ಮತ್ತು ಸಾರಿಗೆ ಇಲಾಖೆಗೆ ನಾನು ಚಿರಋಣಿ.

ಜನವರಿ 12 ರಂದು ವಿವೇಕಾನಂದ ಜಯಂತಿ ಅಂಗವಾಗಿ ರಾಜ್ಯ ಸಂಸ್ಥೆಯನ್ನೊಳಗೊಂಡು ಎಲ್ಲ ಜಿಲ್ಲೆಗಳಲ್ಲಿ ಯುವ ದಿನಾಚರಣೆಯನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಿದ್ದಾರೆ. ರಾಜ್ಯದಲ್ಲಿ ಯುವಶಕ್ತಿಗೆ ಪೂರಕವಾದ ಪರಿಸರ ಸಂರಕ್ಷಣೆ, ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನದಂಥ ಕಾರ್ಯಕ್ರಮಗಳನ್ನು ವಿವಿಧ ಯುವ ಸಂಘಟನೆಗಳು ಸೇರಿ ಒಟ್ಟಿಗೆ ಆಚರಿಸುವ ಪ್ರಯತ್ನದ ಸಲುವಾಗಿ, ಆ ದಿನ NCC, NSS, ಸೇವಾದಳ, ನೆಹರು ಯುವ ಕೇಂದ್ರ, ಯೂತ್ ರೆಡ್‌ಕ್ರಾಸ್ ಅಸೋಷಿಯೇಷನ್, ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಜನರಲ್ ತಿಮ್ಮಯ್ಯ ಅಕಾಡೆಮಿ ಮತ್ತು ಇನ್ನಿತರ ಸಂಸ್ಥೆಗಳ ಪ್ರತಿನಿಧಿಗಳ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಹಲವು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ನಮ್ಮ ಹೊಸ ದೃಷ್ಟಿಕೋನಕ್ಕೆ ಈ ಸಭೆ ಭರವಸೆದಾಯಕವಾಗಿದೆ.

ಈ ಸಾಲಿನ ರಾಜ್ಯ ಪುರಸ್ಕಾರ ಪತ್ರಗಳ ವಿತರಣಾ ಸಮಾರಂಭವನ್ನು ರಾಜಭವನದಲ್ಲಿ ಆಯೋಜಿಸಲು ಜನವರಿ 19 ರಂದು ಗೌರವಾನ್ವಿತ ರಾಜ್ಯಪಾಲರು ಸಮಯ ನೀಡಿದ್ದರು. ಅದೇ ದಿನ ಗೌರವಾನ್ವಿತ ಪ್ರದಾನ ಮಂತ್ರಿಗಳು ಬೆಂಗಳೂರಿನಲ್ಲಿದ್ದ ಕಾರಣ, ಮಾನ್ಯ ರಾಜ್ಯಪಾಲರ ಗೌರವ ಉಪಸ್ಥಿತಿ ನಮಗೆ ಲಭಿಸಲಿಲ್ಲವಾದರೂ, ರಾಜಭವನದಲ್ಲಿ ಸಮಾರಂಭ ನಡೆಸಲು ಎಲ್ಲಾ ರೀತಿಯ ವ್ಯವಸ್ಥೆಗಳ ಜೊತೆಗೆ, ಮಕ್ಕಳಿಗೆ ಸ್ಫೂರ್ತಿಧಾಯಕ ಸಂದೇಶವನ್ನು ಕಳುಹಿಸಿಕೊಟ್ಟ ರಾಜ್ಯಪಾಲರಿಗೆ ನಾನು ಆಭಾರಿಯಾಗಿದ್ದೇನೆ. ನಮ್ಮ ಆಹ್ವಾನವನ್ನು ಸ್ವೀಕರಿಸಿ, ಮಾನ್ಯ ಸಚಿವರುಗಳಾದ ಡಾ. ಎಂ.ಸಿ.ಸುಧಾಕರ್ ಮತ್ತು ಶ್ರೀ ಎನ್.ಎಸ್.ಬೋಸರಾಜು ಅವರು ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಾದ ಡಾ. ರಿತೀಶ್ ಕುಮಾರ್ ಸಿಂಗ್ ಮತ್ತು ಶ್ರೀಮತಿ ಸಿಂಧು ರೂಪೇಶ್ ಅವರುಗಳು ಬಂದು ಭಾಗವಹಿಸಿದ್ದರಿಂದ ಸಮಾರಂಭಕ್ಕೆ ಶೋಭೆ ಬಂತು. ಅವರೆಲ್ಲರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಸಮಾರಂಭದ ಯಶಸ್ಸಿಗೆ ಸಹಕಾರ ನೀಡಿದ ರಾಜ್ಯ ಸಂಸ್ಥೆಯ ಮತ್ತು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳಿಗೆ ಹಾಗೂ ಸಂಸ್ಥೆಯ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳು. ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ಪಡೆದಿರುವ ಎಲ್ಲ ಸ್ಕೌಟ್ಸ್–ಗೈಡ್ಸ್‌ಗಳಿಗೆ ನನ್ನ ಶುಭಾಶಯಗಳು. ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತೇನೆ.

ಜನವರಿ 26 ಭಾರತದ ಸಂವಿಧಾನ ಜಾರಿಗೆ ಬಂದ ದಿನ. ನಮ್ಮದು ಬಹುದೊಡ್ಡ ಲಿಖಿತ ಸಂವಿಧಾನ. ಯಾವುದೇ ತಾರತಮ್ಯವಿಲ್ಲದೆ, ಸರ್ವರಿಗೂ ಸ್ವಾತಂತ್ರ್ಯ, ಸರ್ವಧರ್ಮ ಸಮನ್ವಯ, ವೈವಿಧ್ಯತೆಯಲ್ಲಿ ಏಕತೆ, ಕಾನೂನಿನ ಸಮಾನತೆಯಂಥ ಹಲವು ವಿಶಿಷ್ಟತೆಗಳಿಂದ ಕೂಡಿರುವ ನಮ್ಮ ಸಂವಿಧಾನದ ತತ್ವಗಳನ್ನು ನಮ್ಮ ಮಕ್ಕಳಿಗೆ ತಿಳಿಸುವ ಕೆಲಸ ಮಾಡೋಣ. ರಾಜ್ಯಾದ್ಯಂತ ಹಲವು ಜಿಲ್ಲೆಗಳಲ್ಲಿ ಅಲ್ಲಿನ ಜಿಲ್ಲಾಡಳಿತಗಳು ಸ್ಕೌಟ್ಸ್ ಗೈಡ್ಸ್ ಮಕ್ಕಳಿಗೆ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಅವಕಾಶ ಕೊಟ್ಟಿದ್ದು, ನಮ್ಮ ಮಕ್ಕಳು ಉತ್ಸುಕತೆಯಿಂದ ಪಾಲ್ಗೊಂಡಿದ್ದಾರೆ. ಬೆಂಗಳೂರಿನ ಮಾಣಿಕ್ ಷಾ ಪೆರೇಡ್ ಮೈದಾನದಲ್ಲಿ ನಡೆದ ಪಥಸಂಚಲನದಲ್ಲಿ ಆರ್.ಟಿ.ನಗರ ಪಬ್ಲಿಕ್ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿ ಮೆಚ್ಚುಗೆ ಗಳಿಸಿದ್ದಾರೆ. ಆ ಶಾಲೆ ಮತ್ತು ಆಡಳಿತ ಮಂಡಳಿಗೆ ಹಾಗೂ ಮಕ್ಕಳಿಗೆ ಅಭಿನಂದನೆಗಳು.

ಜನವರಿ 5 ರಂದು ತಮಿಳುನಾಡಿನ ತಿರುಚಿನಾಪಳ್ಳಿಯಲ್ಲಿ ನಡೆದ 20ನೇ ಅಖಿಲ ಭಾರತ ರೈಲ್ವೇಸ್ ಜಾಂಬೋರೇಟ್ ಹಾಗೂ ಜನವರಿ 15 ರಂದು ಸಿಕ್ಕಿಂನಲ್ಲಿ ಆಯೋಜಿಸಿದ್ದ ಈಶಾನ್ಯ ರಾಜ್ಯಗಳ ಜಾಂಬೋರಿಯಲ್ಲಿ ನಾನು ಭಾಗವಹಿಸಿದ್ದೆ. ಅಲ್ಲಿ ಚಳುವಳಿಯ ಬಗ್ಗೆ ಇರುವ ಉತ್ಸಾಹ ಮತ್ತು ವಿಶ್ವಾಸಾರ್ಹತೆ ನನಗೆ ಸಂತೋಷ ತಂದಿದೆ.

ಇನ್ನು ಜನವರಿ 22 ರಿಂದ 26ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ನಡೆದ 43ನೇ ರಾಜ್ಯ ಮಟ್ಟದ ಕಬ್ ಬುಲ್‌ಬುಲ್ ಉತ್ಸವ ಯಶಸ್ವಿಯಾಗಿ ನಡೆಯಿತು. ಅವಿಸ್ಮರಣೀಯವಾಗಿರುವ ಪ್ರಪ್ರಥಮ 'ವಿಶ್ವ ಸ್ಕೌಟ್ಸ್ ಮತ್ತು ಗೈಡ್ಸ್ ಸಾಂಸ್ಕೃತಿಕ ಜಾಂಬೋರಿ'ಯ ಸವಿನೆನಪಿಗೆ ಮಂಗಳೂರಿನ ಪಿಳಕುಳದ ನಮ್ಮ ಸಂಸ್ಥೆಯ ಆವರಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ಒಂದು ಸುಂದರ ಸಭಾಭವನವನ್ನು ನಿರ್ಮಿಸಿದ್ದು, ಜನವರಿ 26, 2024 ರಂದು ಅದರ ಉದ್ಘಾಟನೆಯಾಗಿದೆ. ಈ ಮಹತ್ ಕಾರ್ಯಕ್ಕೆ ಕಾರಣರಾದ ಡಾ. ಮೋಹನ್ ಆಳ್ವ ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಮೂಡಬಿದಿರೆಯಲ್ಲಿ ಆಳ್ವಾಸ್ ಶಿಕ್ಷಣ ಸಂಸ್ಥೆಯ ಸಹಯೋಗದೊಂದಿಗೆ ನಡೆದ ಸಾಂಸ್ಕೃತಿಕ ಜಾಂಬೋರಿ ಚರಿತ್ರೆ ಸೃಷ್ಟಿಸಿದೆ. ಈಗ ಬೀದರ್‌ನಲ್ಲಿ ಫೆಬ್ರವರಿ 8 ರಿಂದ 12ರವರೆಗೆ ಇದೇ ಮೊದಲ ಬಾರಿಗೆ 'ಕಲ್ಯಾಣ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್' ಅನ್ನು ಆಯೋಜಿಸುವ ಅವಕಾಶ ಲಭಿಸಿದ್ದು ಸಿದ್ದತೆಗಳು ನಡೆದಿವೆ. ಬೀದರ್‌ನ ಪ್ರತಿಷ್ಠಿತ ಶಾಹಿನ್ ಶಿಕ್ಷಣ ಸಂಸ್ಥೆ ಈ ಉತ್ಸವದ ಆತಿಥ್ಯ ವಹಿಸಿದೆ. ಆ ಸಂಸ್ಥೆಯ ಮುಖ್ಯಸ್ಥರೂ, ನಮ್ಮ ಚಳುವಳಿಯ ಪ್ರೋತ್ಸಾಹಕರೂ ಆದ ಡಾ. ಅಬ್ದುಲ್ ಖದೀರ್ ಅವರಿಗೆ ತುಂಬು ಹೃದಯದ ಧನ್ಯವಾದಗಳು. ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಂದ ಸುಮಾರು 2000 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಮತ್ತು ಶಿಕ್ಷಕ–ಶಿಕ್ಷಕಿಯರು ಭಾಗವಹಿಸಲಿದ್ದಾರೆ. ಇದಕ್ಕೆ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಸರ್ಕಾರ ಹಾಗೂ ಶಿಕ್ಷಣ ಇಲಾಖೆಗೆ ನಮ್ಮ ಸಂಸ್ಥೆ ಆಬಾರಿಯಾಗಿದೆ. ಮೂಡಬಿದಿರೆಯಂತೆಯೇ ಅಚ್ಚುಕಟ್ಟಾದ ವ್ಯವಸ್ಥೆಗಳೊಂದಿಗೆ ಆಯೋಜನೆಗೊಳ್ಳುತ್ತಿರುವ ಈ ಜಾಂಬೋರಿಗೆ ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ರಾಜ್ಯದಲ್ಲಿ ಎಲ್ಲರ ಸಹಕಾರದೊಂದಿಗೆ ನಮ್ಮ ಚಳುವಳಿಗೆ ಒಂದು ಹೊಸ ರೂಪ ಮತ್ತು ಶಕ್ತಿ ಬರುತ್ತಿದೆ. ಆಕರ್ಷಣೆ ಪಡೆದುಕೊಳ್ಳುತ್ತಿದೆ. ಬೆಳವಣಿಗೆಗೆ ಉತ್ತಮ ವಾತಾವರಣ ಸೃಷ್ಟಿಯಾಗುತ್ತಿದೆ. ಅದರ ಪರಿಣಾಮವಾಗಿ ಸರ್ಕಾರ ನಮ್ಮ ಮೇಲೆ ಭರವಸೆ ಇಡುವಂತಾಗಿದೆ. ರಾಜ್ಯಾದ್ಯಂತ ಅನೇಕ ಸಾರ್ವಜನಿಕ ಸಮಾರಂಭಗಳಿಗೆ ನಮ್ಮ ಸೇವೆಯನ್ನು ಪಡೆಯುತ್ತಿರುವುದು, ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳ ಕಾರ್ಯಕ್ರಮಗಳಿಗೆ ನಮಗೆ ನೀಡುತ್ತಿರುವ ಆಮಂತ್ರಣ, ಕೆಲವು ಶಾಲೆಗಳು ಸಂಪೂರ್ಣ ಸ್ಕೌಟ್–ಗೈಡ್ ಶಾಲೆಗಳೆಂದು ಘೋಷಣೆಯಾಗುತ್ತಿರುವುದು, ಇವೆಲ್ಲವೂ ಚಳುವಳಿಯ ಬೆಳವಣಿಗೆಗೆ ಪೂರಕವಾಗುತ್ತಿವೆ ಎಂದು ಭಾವಿಸಿದ್ದೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ವ್ಯರ್ಥ ಮಾಡಬೇಡಿ ಅನ್ನ
ಹಸಿದವರಿಗದೇ ಚಿನ್ನ

ಜನವರಿ 10, 2024 ರಂದು ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಿದ್ದ

**"ಹಿಮಾಲಯ ವೃಕ್ಷಮಣಿ (ಹೆಚ್.ಡಬ್ಲ್ಯೂ.ಬಿ)" ತರಬೇತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ**

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಾನಪದ ವಿದ್ವಾಂಸರೂ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಹಾಗೂ ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಪ್ರಕಟಣೆಗಳ ವಿಭಾಗದ ಗೌರವ ಅಧ್ಯಕ್ಷರಾದ

# ಡಾ॥ ಗೊ.ರು.ಚನ್ನಬಸಪ್ಪನವರು ಭಾವೈಕ್ಯತೆ ಬಗ್ಗೆ ಮಾಡಿದ ಭಾಷಣ

"ಜನಿಸಿದಾಗ ಜನ್ಮಭೂಮಿ, ದುಡಿಯುವಾಗ ಮಾತೃಭೂಮಿ, ಪಡೆಯುವಾಗ ಪುಣ್ಯಭೂಮಿ, ಮಡಿಯುವಾಗ ರುದ್ರಭೂಮಿ"- ಇದೊಂದು ಅರ್ಥಪೂರ್ಣ ಮಾತು. ಈ ಮಾತಿನಂತೆ ಜನ್ಮಭೂಮಿ, ಮಾತೃಭೂಮಿ, ಪುಣ್ಯಭೂಮಿ – ಈ ಶಬ್ದಗಳ ಅರ್ಥವೇನೇ ಇದ್ದರೂ, ಪ್ರಸ್ತುತ ಪರಿಸ್ಥಿತಿಯಲ್ಲಿ "ರುದ್ರಭೂಮಿ" ಎಂಬ ಶಬ್ದವಂತೂ ಅನ್ವರ್ಥವಾಗಿದೆ. ನಾವು ನಿಂತ ನೆಲವನ್ನೆಲ್ಲ ರುದ್ರಭೂಮಿಯನ್ನಾಗಿ ಮಾಡುವ ಅವಸರ ಈಗ ಜಗತ್ತಿನ ಎಲ್ಲೆಲ್ಲೂ ಕಂಡು ಬರುತ್ತಿದೆ. ಹಾಗಾಗಿ "ಶಾಂತಿಭೂಮಿ" ಎನ್ನುವುದು ಒಂದು ಭ್ರಾಂತಿ ಎನಿಸಿದೆ.

ಇಂತಹ ಆತಂಕದ ಸನ್ನಿವೇಶದಲ್ಲಿ "ಸೇವೆಯೇ ನಮ್ಮ ಉಸಿರು. ಶಾಂತಿ ಸೌಹಾರ್ದಗಳೇ ನಮ್ಮ ಸಂಕಲ್ಪ" ಎಂದು ದೀಕ್ಷೆ ವಹಿಸಿರುವ ಮತ್ತು ಭವಿಷ್ಯದ ಒಂದು ಆಶಾಕಿರಣವಾಗಿರುವ ಸ್ಕೌಟ್ಸ್-ಗೈಡ್ಸ್ ಬಂಧುಗಳ ಈ ಶಿಬಿರವನ್ನು ಉದ್ದೇಶಿಸಿ ನಾಲ್ಕು ಮಾತು ಆಡಬೇಕೆಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಅಪೇಕ್ಷಿಸಿದ್ದಾರೆ. ಆದರೆ, ನಾನೀಗ "ರುದ್ರಭೂಮಿ"ಗೆ ಹತ್ತಿರದಲ್ಲಿದ್ದೇನೆ ಎಂಬುದನ್ನು ಅವರು ಮರೆತಂತೆ ಕಾಣುತ್ತದೆ. ಜೊತೆಗೆ ನಮ್ಮ ಕೊಂಡಜ್ಜಿ ಷಣ್ಮುಖಪ್ಪನವರ ಕರೆ ಬೇರೆ.

ಬಹುಶಃ ನಿಮಗೆಲ್ಲ ಬೇಸರ ಉಂಟಾಗುವಷ್ಟು ಸಲ ನಾನು ಬಂದಿರಬೇಕು. ನಿಮ್ಮನ್ನು ಕುರಿತು ಹೊಸತೇನನ್ನೂ ಹೇಳುವ ಸ್ಥಿತಿಯಲ್ಲಿ ನಾನಿಲ್ಲ. ಈ ಸಂಸ್ಥೆಯೊಡನೆ ನನಗಿರುವ ದೀರ್ಘಕಾಲದ ಸಂಬಂಧದಿಂದಾಗಿ ಕರೆದಾಗಲೆಲ್ಲ ಬರುತ್ತಲೇ ಇದ್ದೇನೆ.

ಈ ಶಿಬಿರಕ್ಕೆ ಸಂಬಂಧಿಸಿಯೋ ಏನೋ ನನಗೆ ಅಂತರ್ಜಾಲದಲ್ಲಿ ಬಂದ ಒಂದು ಟಿಪ್ಪಣಿಯಲ್ಲಿ, "The Bharath Scouts and Guides foster Unity involving the youth in various National Integration Activities such as Integration Camps, Cultural Exchange, Community Development Projects, Melas, Camporees and Jamborees" ಎಂದಿದ್ದುದನ್ನು ನೋಡಿದೆ.

ಇಂದಿನ ಈ ಶಿಬಿರದ ನಿರ್ದಿಷ್ಟ ಉದ್ದೇಶದ ಬಗೆಗೆ ನನಗೆ ಸ್ಪಷ್ಟಕಲ್ಪನೆ ಇಲ್ಲದೆ, ಶಿಬಿರದಲ್ಲಿ ಪಾಲುಗೊಳ್ಳುವವರು ಯಾರು ಎಂದು ಕೇಳಿದಾಗ "ಎಲ್ಲ ಪ್ರೌಢ ಹಂತದವರೇ" ಎಂದು ಶ್ರೀ ಷಣ್ಮುಖಪ್ಪನವರು ಹೇಳಿದರು. ಹಾಗೆಯೇ ಪ್ರಸ್ತಾಪಿತ ಟಿಪ್ಪಣಿಯಲ್ಲಿದ್ದ "National Integration" ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು, ರಾಷ್ಟ್ರೀಯ ಭಾವೈಕ್ಯತೆ ಕುರಿತಂತೆಯೇ ಒಂದು ಕಿರುಟಿಪ್ಪಣಿ ಮಾಡಿಕೊಂಡು ಬಂದು ನಿಮ್ಮ ಮುಂದೆ ನಿಂತಿದ್ದೇನೆ.

ಸ್ವತಂತ್ರ ಭಾರತವು ಅಂಗೀಕರಿಸಿರುವ ಸಂವಿಧಾನ ಶಾಸನಕ್ಕೆ ಅನುಗುಣವಾಗಿ, ದೇಶದ ಎಲ್ಲ ಧರ್ಮೀಯರೂ ಸಮದೃಷ್ಟಿ, ಸಮಭಾವ, ಸೌಹಾರ್ದತೆಯಿಂದ ಬದುಕಿ ಮಾನವ ಘನತೆ ಮತ್ತು ಸಮಾನತೆಗಳನ್ನು ಕಾಪಾಡಿಕೊಂಡು ಹೋಗುವ ಒಂದು ಸಾಮರಸ್ಯದ ವಾತಾವರಣ ಮೂಡಿಸುವುದೇ ರಾಷ್ಟ್ರೀಯ ಭಾವೈಕ್ಯತೆ.

ಬಂಧುಗಳೇ, ನಾನು ಮುಂದಿನ ಮಾತುಗಳನ್ನು ಆಡುವ ಮುನ್ನ ಒಂದು ಮಾತು. ನಾನು ನಿಮ್ಮ ಮುಂದೆ ಹೀಗೆ ನಿಂತು ಅನೇಕ ಸಲ ಮಾತನಾಡಿರುವುದರಿಂದ, ಹಿಂದೆ ಆಡಿದ ಮಾತುಗಳ ಪುನರಾವರ್ತನೆ ಆಗುವ ಸಾಧ್ಯತೆ ಇದೆ. ಅದಕ್ಕೆ ನನ್ನ ವೃದ್ಧಾಪ್ಯವೂ ಒಂದು ಕಾರಣ. ಏನಿದ್ದರೂ ನಿಮ್ಮ ಕ್ಷಮೆಯಿರಲಿ.

ಅಷ್ಟಕ್ಕೂ ಸೃಷ್ಟಿಯ ಇಡೀ ಪ್ರಕೃತಿಯ ನಡೆಯೇ ಪುನರಾವರ್ತನೆ. ಅದೇ ಸೂರ್ಯೋದಯ. ಅದೇ ಅಸ್ತಮಾನ. ನಾವು ನೋಡುವ ನೋಟ, ಮಾಡುವ ಮಾಟ, ಆಡುವ ಆಟ, ಉಣ್ಣುವ ಊಟ, ಓಡುವ ಓಟ, ಮಾಡುವ ಪಾಠ, ನೀಡುವ ಕಾಟ, ಇವುಗಳಲ್ಲಿ ಪುನರಾವರ್ತನೆ ಅನಿವಾರ್ಯ. ನಿನ್ನೆ ಹೇಳಿದ್ದು ಪುನರಾವರ್ತನೆ ಆಗಬಾರದೆಂದು, ನಿನ್ನೆ ಹೇಳಿದ 4+4=8 ಎಂಬುದನ್ನು ಇಂದು 4+4=10 ಎನ್ನಲಾಗುವುದಿಲ್ಲ. ಹೆಚ್ಚೇನು, ನಮ್ಮ ಚಳವಳಿಗೆ ಸಂಬಂಧಿಸಿರುವ ಸಮವಸ್ತ್ರ, ಶಿಬಿರ, ಸಮಾವೇಶ, ಜಾಂಬೂರಿ ಎಲ್ಲವೂ ಪುನರಾವರ್ತನೆಗಳೇ. ಪುನರಾವರ್ತನೆ ನಮ್ಮ ಪ್ರಜ್ಞಾಜಾಗೃತಿಗೆ ಪ್ರೇರಣೆ.

ಇರಲಿ, ಪ್ರಸ್ತುತಕ್ಕೆ ಬರೋಣ. ಈ ರಾಷ್ಟ್ರೀಯ ಭಾವೈಕ್ಯತೆ ಎನ್ನುವುದು ಇದುವರೆಗೆ ಕೇವಲ ನುಡಿಯ ಬೆಡಗಾಗಿದ್ದು, ನಮ್ಮ ನಡೆಯಲ್ಲಿ ಕಾಣದಿರುವ ಕಾರಣದಿಂದಲೇ ನಾವು ಮತ್ತೆ-ಮತ್ತೆ ಆ ಬಗೆಗೆ ಚಿಂತನೆ ನಡೆಸಬೇಕಾಗಿದೆ. ರಾಷ್ಟ್ರೀಯ ಭಾವೈಕ್ಯತೆ ಕುರಿತ ನನ್ನ ಇಂದಿನ ಮಾತುಗಳೂ ಅಂತಹ ಮರುಚಿಂತನೆಯಲ್ಲದೆ ಬೇರೆಏನಲ್ಲ.

ಇಲ್ಲಿಗೆ 150 ವರ್ಷಗಳ ಹಿಂದೆ ಹೆಚ್.ಜಿ. ವೆಲ್ಸ್ ಎಂಬ ಚಿಂತಕ ಹೇಳಿರುವ ಒಂದು ಮಾತಿದೆ. "Human History is becoming a gambling between the Teacher and the Traitor", ಈ ಮಾತು ಅಂದಿಗಿಂತ ಇಂದು ಹೆಚ್ಚು ಸತ್ಯವೆನಿಸಿದೆ. ಅಂದರೆ, "ಮಾನವ ಜನಾಂಗದ ಚರಿತ್ರೆ ಬೋಧಕ ಮತ್ತು ಬಾಧಕರ ನಡುವಿನ ಜೂಜಾಗುತ್ತಿದೆ". ಸಾಧಿಸುವ ಬದಲಾಗಿ ಬಾಧಿಸುವ ಕೆಲಸವೇ ಹೆಚ್ಚಾಗಿ ನಡೆಯುತ್ತಿದೆ.

ನಾನು ಆಗಾಗ ಹೇಳುತ್ತಿರುವಂತೆ, ನಮ್ಮ ದೇಶವನ್ನು ಈಗ ನವಗ್ರಹಗಳು ಕಾಡುತ್ತಿವೆ. ಈ ನವಗ್ರಹಗಳು ನಮ್ಮ ಶಾಸ್ತ್ರ-ಪುರಾಣಗಳಲ್ಲಿ ಪ್ರಸ್ತಾಪಗೊಂಡಿರುವ ನವಗ್ರಹಗಳಲ್ಲ. ನಮ್ಮ ವಿಕೃತ ಬುದ್ಧಿವಂತಿಕೆಯಿಂದ ನಾವೇ ಸೃಷ್ಟಿಸಿರುವ ನವಗ್ರಹಗಳು. ಅವುಗಳೆಂದರೆ,

1. ವ್ಯಕ್ತಿ ಚಾರಿತ್ರ್ಯದ ದಾರಿದ್ರ್ಯ – Indigence of Individual Character
2. ಜಾಗತೀಕರಣದ ಜೂಜು – Gambling of Globalisation
3. ಹಣ ಮತ್ತು ಅಧಿಕಾರದ ಹುಚ್ಚು – Madness after Money & Power
4. ಬುದ್ಧಿಜೀವಿಗಳ ಮೂರ್ಖತನ – Stupidity of Intellectuals
5. ನಿಸರ್ಗದ ದುರ್ಬಳಕೆ – Misuse of Natural Resources
6. ಮತಾಂಧತೆಯ ಮತಿಭ್ರಮಣೆ – Fanaticism of Religion
7. ರಾಜಕೀಯ ಅನಾಯಕತ್ವ – Anarchy in Politics
8. ಧರ್ಮದ ಅಪವ್ಯಾಖ್ಯಾನ – Misinterpretation of Religion
9. ಆಧ್ಯಾತ್ಮಿಕತೆಯ ಅಭಾವ – Lack of Spirituality

ಈ ಅನಿಷ್ಟಗಳ ಧಾಳಿಯಲ್ಲಿ ಭಾವೈಕ್ಯತೆ ಎನ್ನುವುದು ಬರಿಯ ಭ್ರಮೆಯಾಗಿ ಬಿಟ್ಟಿದೆ. ಇದರಿಂದಾಗಿ ನಮ್ಮ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ, ಔದ್ಯಮಿಕ ಮತ್ತು ರಾಜಕೀಯ – ಹೀಗೆ ಎಲ್ಲಾ ವ್ಯವಸ್ಥೆಗಳಲ್ಲೂ

ಸ್ವಾರ್ಥದ ಸಿಕ್ಕು, ಸ್ಥಾನದ ಸೊಕ್ಕು, ಹಮ್ಮಿನ ಹಠ, ಆಸೆಯ ಪಾಚಿ, ಕೀರ್ತಿಯ ಹುಚ್ಚು, ಭಯೋತ್ಪಾದನೆ, ಭ್ರಷ್ಟಾಚಾರ, ಇಂತಹ ಅವಗುಣಗಳೆಲ್ಲ ಜನಜೀವನದ ನರ-ನಾಡಿಗಳನ್ನು ಕಿತ್ತುತಿನ್ನುತ್ತಿವೆ.

ನಾವು ನಾಗರಿಕತೆಯ ಬೆನ್ನುಹತ್ತಿದ್ದೇವೆ. ಅದನ್ನು ನಾವು ಹೇಗಾದರೂ ಪಡೆಯಬಹುದು. ಸಾಲ ಬೇಕಾದರೂ ತರಬಹುದು. ಆದರೆ ಭಾವೈಕ್ಯತೆ ಹಾಗಲ್ಲ. ನಾಗರಿಕತೆ ಕೇವಲ ಅನುಕರಣೆ. ಭಾವೈಕ್ಯತೆ ಪೂರ್ಣಸಾಧನೆ. ನಾಗರಿಕತೆಗೆ ಇರುವ ಮೌಲ್ಯ ಮಾರುಕಟ್ಟೆಯದು. ಆದರೆ, ಭಾವೈಕ್ಯತೆಯ ಮೌಲ್ಯ ಆತ್ಮಸಾಕ್ಷಿಯದು.

ನಮ್ಮ ಬದುಕು ಬಹುಮಟ್ಟಿಗೆ ಬಾಹ್ಯ ಸನ್ನಿವೇಶದ ಸುಳಿಗೆ ಸಿಕ್ಕಿ ಅನೇಕ ವೇಳೆ ದರಿದ್ರವಾಗುತ್ತದೆ. ದಿಗ್ಭ್ರಮೆಗೊಳ್ಳುತ್ತದೆ, ದುರ್ಭರವಾಗುತ್ತದೆ. ನಡೆಯುವ ಹಾದಿಯಲ್ಲಿ ನಿರಾಸೆಯ ಕತ್ತಲು ಕವಿಯುತ್ತದೆ. ಅಂತಹ ಸಂದರ್ಭಗಳಲ್ಲಿ ವಾಸ್ತವವಾಗಿ ಪ್ರಜ್ಞಾವಂತರು ದಾರಿದೀಪವಾಗಬೇಕು. ನೇರ ಬೆಳಕಾಗಬೇಕು. ಜನ ಸಮುದಾಯದಲ್ಲಿ ಜೀವನ ವಿಶ್ವಾಸ ಮೂಡಿಸಬೇಕು. ರಾಷ್ಟ್ರೀಯ ಭಾವೈಕ್ಯತೆ ಎಂದರೆ ಬೇರೆ ಮತ್ತೇನೂ ಅಲ್ಲ. ರಾಷ್ಟ್ರದ ಜನತೆಯ ನಡೆ ಮತ್ತು ನುಡಿಗಳಲ್ಲಿ ಸಮನ್ವಯ ಸಾಧಿಸುವುದು.

ಈ ಸಮನ್ವಯ ಪ್ರಜ್ಞೆಯಿಲ್ಲದೆ, ನಾವು ಮಾನವರಾಗಿಯೂ ಮೃಗ ಲಕ್ಷಣ ಮೈಗೂಡಿಸಿಕೊಂಡಿದ್ದೇವೆ. ಹಾಗಾಗಿ ಈ ಭೂಮಿ ಮಾನವ ಗ್ರಹವಾಗದೆ Animal Planet ಆದಂತಿದೆ, ಸಹಸ್ರಾರು ವರ್ಷಗಳಿಂದ ನಾವು ನಾಗರಿಕರಾಗಿ ಬೆಳೆದಿದ್ದೇವೆ. ಈಗಂತೂ ವೈಜ್ಞಾನಿಕವಾಗಿ ಅದ್ಭುತ ಪ್ರಗತಿ ಸಾಧಿಸಿದ್ದೇವೆ, ಎಂದು ಹೇಳಿಕೊಳ್ಳುತ್ತಿದ್ದರೂ, ಭಯ ಮತ್ತು ಆತಂಕಗಳ ಅಡಿಯಲ್ಲೇ ಇದ್ದೇವೆ. ಭದ್ರವಾದ ಬಂಗಲೆಗಳನ್ನು ಕಟ್ಟಿಕೊಂಡು ಐದಾರು ಬಗೆಯ ಬೋಲ್ಟು ಹಾಕಿಕೊಂಡು ಮಲಗಿದರೂ ನಿಶ್ಚಿಂತೆಯಿಂದ ನಿದ್ದೆಮಾಡುವ ಸ್ಥಿತಿಯಲ್ಲಿಲ್ಲ. ಇದಕ್ಕೆ ಏನು ಕಾರಣ? ನಮ್ಮಲ್ಲೇ ನಮಗೆ ವಿಶ್ವಾಸವಿಲ್ಲ, ಇನ್ನೊಬ್ಬರನ್ನು ನಂಬುವುದಿಲ್ಲ.

ಇಂದು ನಮ್ಮ ದೇಶದ ಅಷ್ಟೇ ಅಲ್ಲ, ಜಗತ್ತಿನ ಎಲ್ಲಾ ಕಡೆ ಅಹಂಕಾರ ಮತ್ತು ಸೇಡಿನ ಹಠಗಳು ಭೀಕರ ನೃತ್ಯ ನಡೆಸಿವೆ. ಇದನ್ನು ಅಡಗಿಸಿ, ಶಾಂತಿ-ಸಹನೆಗಳನ್ನು ಅರಳಿಸುವ ಕೆಲಸವನ್ನು ಪ್ರಜ್ಞಾವಂತರು ಮಾಡಬೇಕು. ಇದಕ್ಕಾಗಿ ಒಂದು ಧರ್ಮ ಯುದ್ಧವೇ ನಡೆಯಬೇಕಾಗಿದೆ. ನಾನು ಹೇಳುವ “ಧರ್ಮಯುದ್ಧ” ಧರ್ಮದ ಹೆಸರಿನಲ್ಲಿ ವಿಶ್ವದ ನಾನಾ ಕಡೆ ನಡೆಯುತ್ತಿರುವ ವಿನಾಶಕಾರಿ ಹಿಂಸಾತ್ಮಕ ಯುದ್ಧದಂತಲ್ಲ. ನಾನು ಹೇಳುವ ಧರ್ಮಯುದ್ಧಕ್ಕೆ ಬೇಕಾಗಿರುವುದು ರಕ್ತಹರಿಸುವ, ಜೀವ ಕಳೆಯುವ ಶಸ್ತ್ರಾಸ್ತ್ರಗಳಲ್ಲ. ಬೇಕಾಗಿರುವುದು ಸಹನೆಯ ಸೌಹಾರ್ದಾಸ್ತ್ರ. ಈ ಯುದ್ಧದಲ್ಲಿ ಮದ್ದುಗುಂಡುಗಳ ಗದ್ದಲವಿರುವುದಿಲ್ಲ. ನಮ್ಮ ನಡೆ-ನುಡಿಗಳ ಶುದ್ಧಿಯಷ್ಟೆ. ಅದೊಂದು ಸದ್ದಿಲ್ಲದ ಯುದ್ಧ. ಅದರ ಆಶಯ ವ್ಯಕ್ತಿ ಚಾರಿತ್ರ್ಯ, ಸಮಾಜ ಸ್ವಾಸ್ಥ್ಯ, ರಾಷ್ಟ್ರ ಸಮಗ್ರತೆ.

ವಾಸ್ತವವಾಗಿ ಈ ಧರ್ಮಯುದ್ಧ ಧರ್ಮಗುರುಗಳು ನಡೆಸಬೇಕಾದದ್ದು. ಆದರೆ, ನಮ್ಮ ದುರಾದೃಷ್ಟವೆಂಬಂತೆ ಒಂದೊಂದು ಧರ್ಮದ ಧರ್ಮಗುರುಗಳೂ ತಮ್ಮ-ತಮ್ಮ ಪ್ರತಿಷ್ಠೆಗಾಗಿ, ಆಯಾಧರ್ಮದ ಅನುಯಾಯಿಗಳಲ್ಲೂ ಭಿನ್ನದೃಷ್ಟಿ ಬೆಳೆಯುವಂತೆ ಮಾಡಲಾಗುತ್ತಿದೆ. ವಿಶ್ವದಲ್ಲಿ ನೂರಾರು ಧರ್ಮಗಳಿವೆ. ಅವೆಲ್ಲವುಗಳ ಅಂತಿಮ ಆಶಯ ಜನ ಕ್ಷೇಮವಲ್ಲದೆ ಬೇರೆಯಲ್ಲ.

**ಕೇವಲ ಉದಾಹರಣೆಗಾಗಿ ವಿಶ್ವದ ಕೆಲವು ಪ್ರಮುಖ ಧರ್ಮಗಳ ಸೂಕ್ತಿಗಳನ್ನು ಗಮನಿಸಿ :**

- ವ್ಯಕ್ತಿಯ ವಿಕಾಸವನ್ನು ದೈವಭಕ್ತಿ ಮತ್ತು ವಾತ್ಸಲ್ಯಗಳಿಂದ ಸಾಧಿಸಬೇಕು ಎನ್ನುತ್ತದೆ ಹಿಂದೂಧರ್ಮ.
- ದ್ವೇಷ ಸಾಧನೆಗೆ ಬದಲಾಗಿ ಪ್ರೀತಿ-ವಾತ್ಸಲ್ಯಗಳಿಂದ ಗೆಲ್ಲಬೇಕು ಎನ್ನುತ್ತದೆ ಬೌದ್ಧಧರ್ಮ.
- ಕಾಯಾ, ವಾಚಾ, ಮನಸಾ ಯಾವ ರೂಪದಲ್ಲೇ ಆಗಲಿ, ಹಿಂಸೆ ಸಲ್ಲದು ಎನ್ನುತ್ತದೆ ಜೈನಧರ್ಮ.
- ಯಾರನ್ನೂ ಪರಕೀಯವೆಂದು ಭಾವಿಸದೆ, ಎಲ್ಲರೂ ತನ್ನವರು ಎಂದು ತಿಳಿಯಬೇಕೆನ್ನುತ್ತದೆ ಗ್ರೀಕ್‌ಧರ್ಮ.
- ಖಡ್ಗ ಹಿಡಿದವರೆಲ್ಲ ಖಡ್ಗದಿಂದಲೇ ನಾಶಹೊಂದುತ್ತಾರೆ ಎನ್ನುತ್ತದೆ ಯಹೂದಿ ಧರ್ಮ.
- ಹಣ ಮತ್ತು ಸಮಯವನ್ನು ದುರ್ವ್ಯಯ ಮಾಡುವವನು ಸೈತಾನ ಎನ್ನುತ್ತದೆ ಇಸ್ಲಾಂ ಧರ್ಮ.
- ಬೆವರು ಹರಿಸದೆ ಉಣ್ಣುವ ಹಕ್ಕು ಯಾರಿಗೂ ಇಲ್ಲ ಎಂದು ಹೇಳುತ್ತದೆ ಕ್ರೈಸ್ತ ಧರ್ಮ.
- ಪರಸ್ಪರ ಪ್ರೀತಿಸಿದರೆ, ಸಮಾಜದಲ್ಲಿ ಕಲಹಗಳೇ ಇರುವುದಿಲ್ಲ ಎನ್ನುತ್ತದೆ ತಾವೋ ಧರ್ಮ.
- ಜಗತ್ತೇ ಒಂದು ಕುಟುಂಬ ಎಂಬುದನ್ನು ನಾವು ಮರೆಯಬಾರದು ಎನ್ನುತ್ತದೆ ಷಿಂಟೋ ಧರ್ಮ.
- ತನ್ನ ಸಂಪಾದನೆಯಲ್ಲಿ ಅಗತ್ಯವಿರುವ ಮಿಕ್ಕವರಿಗೂ ಹಂಚಬೇಕು ಎನ್ನುತ್ತದೆ ಸಿಖ್ ಧರ್ಮ.
- ಜಾತಿ, ಮತ ಭೇದ-ಭಾವ ಸಲ್ಲದು /ಅಸ್ಪೃಶ್ಯತೆ ಅಮಾನವೀಯ ಎನ್ನುತ್ತದೆ ಸೂಫಿ ಧರ್ಮ.
- ದೇವರು ಒಬ್ಬನೇ, ಧರ್ಮ ಒಂದೇ ಎಂದು ಸಾರುತ್ತದೆ ಬಹಾಯಿ ಧರ್ಮ.
- ಸೃಷ್ಟಿಯ ಕೊಡುಗೆಯಾದ ಇಹದ ಬದುಕು ಅತ್ಯಂತ ಮುಖ್ಯವಾದುದು ಎನ್ನುತ್ತದೆ ಚಾರ್ವಾಕ ಧರ್ಮ.
- ಸಕಲ ಜೀವ ರಾಶಿಗಳಿಗೆಲ್ಲ ಲೇಸನ್ನೇ ಬಯಸಬೇಕು ಎಂದು ಸಾರುತ್ತದೆ ಶರಣ ಧರ್ಮ.

ಹೀಗೆ, ದೈವಭಕ್ತಿ, ಜೀವದಯೆ, ಶ್ರಮದ ದುಡಿಮೆ, ಸಮಾನ ಹಂಚಿಕೆ, ಸಾತ್ವಿಕ ನಡೆ-ನುಡಿ, ಆಧ್ಯಾತ್ಮಿಕ ಚಿಂತನೆ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಸಾರಿರುವ ವಿಶ್ವದ ಯಾವ ಧರ್ಮವೂ ಜೀವ ವಿರೋಧಿಯಲ್ಲ. ಒಂದು ವೇಳೆ ಯಾವುದಾದರೂ ಧರ್ಮದಲ್ಲಿ ಅಂತಹ ಜೀವ ವಿರೋಧಿ ಅಸಂಗತಗಳು, ಅಂಧಶ್ರದ್ಧೆಗಳು, ಅವಿಚಾರಗಳು ಕಂಡು ಬಂದರೆ, ಅವು ನಿಶ್ಚಿತವಾಗಿ ನಂತರದ ಧರ್ಮಾಂಧ ಶಕ್ತಿಗಳು ನಡೆಸಿದ ಪ್ರಕ್ಷಿಪ್ತತೆಯೇ ವಿನಃ ಮೂಲ ಧರ್ಮಗಳಲ್ಲಿ ಯಾವುದೇ ದೋಷಗಳಿಲ್ಲ. ಹಾಗೆ ಯಾವುದಾದರೂ ಧರ್ಮ ವೈಚಾರಿಕ ಒರೆಗಲ್ಲಿಗೆ ನಿಲ್ಲದಿದ್ದರೆ, ಜನ ಜೀವನದ ಶಾಂತಿ-ಸಮಾಧಾನಗಳಿಗೆ ವಿರೋಧವಾಗಿದ್ದರೆ ಅದು ಧರ್ಮವೇ ಅಲ್ಲ.

ರಾಷ್ಟ್ರೀಯ ಭಾವೈಕ್ಯತೆ ಕುರಿತ ಈ ಚಿಂತನೆಯಲ್ಲಿ ನಾನು ಧರ್ಮವನ್ನೇ ಕುರಿತು ಹೆಚ್ಚು ಪ್ರಸ್ತಾಪ ಮಾಡಿದೆನೆಂದು ಕಾಣುತ್ತದೆ. ಅದಕ್ಕೆ ಕಾರಣವಿದೆ. ಯಾವುದೇ ದೇಶವು ಧರ್ಮವನ್ನು ಬಿಟ್ಟುತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುವುದಿಲ್ಲ. ಇಲ್ಲಿ ಧರ್ಮವೆಂದರೆ ದೇವರು, ಪೂಜೆ, ಹರಕೆ, ಇತ್ಯಾದಿ ಶಾಸ್ತ್ರಾಚಾರಣೆಗಳಲ್ಲ. ಅವೆಲ್ಲ ನಾಮಾಂಕಿತವಾಗಿರುವ ಧರ್ಮಗಳ ಅನುಯಾಯಿಗಳ ನಂಬಿಕೆ ಮತ್ತು ಪದ್ಧತಿಗಳಿರಬಹುದು. ಆದರೆ, ನಿಜವಾದ ಧರ್ಮದ ಅರ್ಥವೆಂದರೆ, ವ್ಯಕ್ತಿಗಳ ಸಾತ್ವಿಕ ನಡೆ-ನುಡಿ, ಪರಸ್ಪರ ಪ್ರೀತಿ-ವಿಶ್ವಾಸ, ಸ್ನೇಹ-ಸೌಹಾರ್ದ, ಶ್ರಮದ ದುಡಿಮೆ, ಸಮಾನ ಹಂಚಿಕೆ ಮತ್ತು ರಾಷ್ಟ್ರಪ್ರಜ್ಞೆ, ಈ ಧರ್ಮ ಉಳಿದೆಲ್ಲ ನಾಮಾಂಕಿತ ಧರ್ಮಗಳ ಅನುಯಾಯಿಗಳಿಗೂ ಅಗತ್ಯವಾದ ಧರ್ಮ. ಈ ದೃಷ್ಟಿಯಿಂದ “ರಾಷ್ಟ್ರೀಯ ಭಾವೈಕ್ಯತೆ”ಯೇ ಒಂದು ಧರ್ಮ. ಆ ಧರ್ಮ ಪರಿಪಾಲನೆಗೆ ಅಗತ್ಯವಾದ ಪ್ರಜ್ಞಾ ಜಾಗೃತಿಯ ಒಂದು ಆಶಯ ಈ ಚಿಂತನೆ.

ಮಾನವ ಜನಾಂಗದ ಮೂಲಭೂತ ಭಾವೈಕ್ಯತೆಯನ್ನು, ಸಮುದಾಯದ ವಿವೇಕಪೂರ್ಣ ವಿಕಾಸವನ್ನು ಪರಸ್ಪರ ವಿಶ್ವಾಸದ ಸಂಬಂಧವನ್ನು ಕೇವಲ ರಾಜಕೀಯ, ಆರ್ಥಿಕ ಯೋಜನೆಗಳಿಂದಾಗಲೀ, ಕೈಗಾರಿಕೆಗಳ ಸ್ಥಾಪನೆಯಿಂದಾಗಲೀ, ಕಟ್ಟುನಿಟ್ಟಿನ ಕಾನೂನು ಜಾರಿಯಿಂದಾಗಲೀ ಸಾಧಿಸಲಾಗುವುದಿಲ್ಲ. ಅದು ಮಾನವನ ಮನಸ್ಸಿನಲ್ಲಿರುವ ತಪ್ಪು ತಿಳುವಳಿಕೆಯ ನಿವಾರಣೆಯಿಂದ, ಸಮುದಾಯದ ರೀತಿ–ನೀತಿಗಳ ಆಳವಾದ ಅರಿವಿನಿಂದ ಮತ್ತು ಅಂತಃಕರಣ ಪೂರ್ಣವಾದ ಪ್ರಜ್ಞಾಜಾಗೃತಿಯಿಂದ ಮಾತ್ರ ಸಾಧ್ಯ.

ನಾವು ಯಾವುದೇ ಧರ್ಮದವರಾಗಿರಲಿ, ಯಾವುದೇ ಪಕ್ಷ–ಪಂಥದವರಾಗಿರಲಿ, ಯಾವುದೇ ಭಾಷೆ–ಪ್ರದೇಶದವರಾಗಿರಲಿ, ನಮ್ಮ ಅಭ್ಯಾಸ–ಹವ್ಯಾಸಗಳೇನೇ ಇರಲಿ, ರಾಷ್ಟ್ರಹಿತ ದೃಷ್ಟಿಯಿಂದ ನಾವು ಭಾವೈಕ್ಯಗೊಳ್ಳಬೇಕು.

ಮಧುರ ಸಂಗೀತ ಹೊಮ್ಮಿಸುವ ವೀಣೆಯತಂತಿ ಬಿಗಿಯಾದರೆ ಹರಿದು ಹೋಗುತ್ತವೆ. ಸಡಿಲವಾದರೆ ದನಿ ಹೊಮ್ಮುವುದಿಲ್ಲ. ಅದನ್ನು ಹದವರಿತು ಮಧ್ಯಮ ಸ್ಥಿತಿಯಲ್ಲಿ ಸಂಯೋಜಿಸಿದರೆ, ಆಗ ವೀಣೆ ಇಂಪಾದ ದನಿ ನೀಡುತ್ತದೆ. ಹಾಗೆಯೇ, ನಮ್ಮ ವಿಚಾರಗಳೂ ಸಹ. ನಮ್ಮ ಪದ್ಧತಿ–ಪರಂಪರೆಗಳೂ ನಮ್ಮ ಬದುಕಿನ ವೀಣೆಯ ತಂತಿಗಳು. ಅವು ಬಿಗಿಯಾಗಬಾರದು. ಕಾಲದ ಶೃತಿಗೆ ತಕ್ಕಂತೆ ಮಧ್ಯಮ ಸ್ಥಿತಿಯಲ್ಲಿರಬೇಕು.

ಸಾಮಾನ್ಯವಾಗಿ ವ್ಯಕ್ತಿಯ ಹಾರೈಕೆ–ಹಂಬಲಗಳು, ಕನಸು–ಕಲ್ಪನೆಗಳು, ತಾಳ್ಮೆ–ತಲ್ಲಣಗಳು, ಕಣ್ಣೀರು–ನಗೆಗಳು ಅಲಕ್ಷ್ಯಕ್ಕೆ ಒಳಗಾದಾಗ, ಅವನ ಲಜ್ಜೆ–ನಿರ್ಲಜ್ಜೆಗಳು, ದೃತಿ–ಹೊಯ್ದಾಟಗಳು, ಪ್ರಶಂಸೆ–ಪ್ರತೀಕಾರಗಳು, ಶೀಲ–ಅಶ್ಲೀಲಗಳು ಅಸಹ್ಯದ ಅಂಚು ಮುಟ್ಟಿದಾಗ ಸಮಾಜದ ಸ್ವಾಸ್ಥ್ಯಕೆಡುತ್ತದೆ. ಆದ್ದರಿಂದ ವ್ಯಕ್ತಿಯ ದೌರ್ಬಲ್ಯ – ಪ್ರಾಬಲ್ಯಗಳನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು, ಅವನನ್ನು ಸುತ್ತಣ ಪರಿಸರಕ್ಕೆ ಸಲ್ಲುವಂತಹ ವ್ಯಕ್ತಿಯನ್ನಾಗಿ ಪರಿವರ್ತಿಸಿದರೆ ರಾಷ್ಟ್ರೀಯ ಭಾವೈಕ್ಯತೆ ಸುಲಭ ಸಾಧ್ಯವಾಗುತ್ತದೆ.

ಮಾನವ ಸಮಾಜ ಶಾಸ್ತ್ರತಜ್ಞರ ಪ್ರಕಾರ, 2ನೆಯ ಮಹಾ ಯುದ್ಧದ ನಂತರ, ಮಾನವೀಯತೆ ಎನ್ನುವುದೇ ಒಂದು ದುರ್ಭರ ಸಂದಿಗ್ಧತೆಗೆ ಒಳಗಾದಂತೆ ಕಾಣುತ್ತದೆ. ಪರಿಣಾಮವಾಗಿ ಐದು ಬಗೆಯ ಅವನತಿಗಳುಂಟಾಗಿವೆ. ಅವೆಂದರೆ, ರಾಜಕೀಯ ಅಭದ್ರತೆ (Political Instability), ಜನಾಂಗೀಯ ಬಿಕ್ಕಟ್ಟು (Ethnic Tension), ಶಸ್ತ್ರಾಸ್ತ್ರಗಳ ಘರ್ಷಣೆ (Armed Conflicts), ಸಾಮಾಜಿಕ ಛಿದ್ರತೆ (Disintegration of Society) ಮತ್ತು ಆಧ್ಯಾತ್ಮಿಕತೆಯ ನಷ್ಟ (Loss of Spirituality).

ಈ ಅವನತಿಗಳಿಂದಾಗಿ ಮಾನವ–ಮಾನವ ಸಂಬಂಧಗಳೇ ನುಚ್ಚು–ನೂರಾಗಿವೆ. ಬಿಚ್ಚಿ ಬೇರಾಗಿವೆ. ಹಾಗಾಗಿ ರಾಷ್ಟ್ರ ನೆಮ್ಮದಿಯ ಭರವಸೆಯೇ ಸೊರಗಿಹೋಗಿದೆ.

ನಾನು ಮೊದಲೇ ಹೇಳಿದಂತೆ, ಸಮುದಾಯದ ಅಸ್ವಸ್ಥತೆಗೆ ಮೂಲಕಾರಣ, ವ್ಯಕ್ತಿಗಳ ದೌರ್ಬಲ್ಯ, ದುರಾಸೆ, ಅತಿರೇಕ, ಅಹಂಕಾರ ಮತ್ತು ಅವಿವೇಕಗಳು. ಆದ್ದರಿಂದ ಭಾವೈಕ್ಯತೆಯ ಕಾರ್ಯ ಮೊದಲು ವ್ಯಕ್ತಿ ನಿರ್ಮಾಣದಿಂದ ನಡೆಯಬೇಕು.

ಅಂತಹ ವ್ಯಕ್ತಿ ನಿರ್ಮಾಣದ ಕೆಲಸ ನಿಮ್ಮಂತಹ ಸ್ಕೌಟ್–ಗೈಡ್ ಸಿದ್ಧಾಂತ ಬದ್ಧರಿಂದ, ವಿಶೇಷವಾಗಿ ಶಿಕ್ಷಕ ವರ್ಗದಿಂದ ಪರಿಣಾಮಕಾರಿಯಾಗಿ ನಡೆಯಲು ಸಾಧ್ಯವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶುದ್ಧ ವ್ಯಕ್ತಿಗಳ ನಿರ್ಮಾಣವೆಂದರೆ ಶುದ್ಧ ಸಮಾಜವನ್ನು ನಿರ್ಮಿಸಿದಂತೆ. ಶುದ್ಧ ಸಮಾಜದ ಉಸಿರೇ ಭಾವೈಕ್ಯತೆ.

ಇಂದಿನ ಅತ್ಯಂತ ಅವಸರದ ಅಗತ್ಯವೆಂದರೆ, ರಾಷ್ಟ್ರೀಯ ಭಾವೈಕ್ಯತೆ. ದೇವರು–ಧರ್ಮಗಳ ಹೆಸರಿನಲ್ಲಿ ದೇಶ–ಭಾಷೆಗಳ ನೆಪದಲ್ಲಿ, ಪದ್ಧತಿ–ಪರಂಪರೆಗಳ ಕಾರಣದಲ್ಲಿ ನಾವು ಎಷ್ಟರ ಮಟ್ಟಿಗೆ ಕಾದಾಡುವುದನ್ನು ನಿಲ್ಲಿಸುತ್ತೇವೆಯೋ, ಅಷ್ಟರ ಮಟ್ಟಿಗೆ ರಾಷ್ಟ್ರೀಯ ಭಾವೈಕ್ಯತೆ ಸಾಧ್ಯವಾಗುತ್ತದೆ.

❑❑

## ಅಭಿನಂದನೆಗಳು

ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರೂ ಹಾಗೂ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವ ಅವರಿಗೆ **'ಶ್ರೇಷ್ಠ ಕನ್ನಡಿಗ'** ಪ್ರಶಸ್ತಿ ಲಭಿಸಿದೆ.

ಹಾವೇರಿ ಜಿಲ್ಲೆ ಶಿಗ್ಗಾಂವಿಯಲ್ಲಿ ಜನವರಿ 28, 2024ರಂದು ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರ 64ನೇ ಹುಟ್ಟು ಹಬ್ಬದ ಪ್ರಯುಕ್ತ 'ಗಂಗಮ್ಮ ಬೊಮ್ಮಾಯಿ ಟ್ರಸ್ಟ್' ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ಬೊಮ್ಮಾಯಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಡಾ. ಎಂ. ಮೋಹನ್ ಆಳ್ವ ಅವರಿಗೆ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.



## ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳ

# "ಹಿಮಾಲಯ ವೃಕ್ಷಮಣಿ (ಹೆಚ್.ಡಬ್ಲ್ಯ್ಯೂ.ಬಿ)" ತರಬೇತಿ ಶಿಬಿರದ ವರದಿ



ಜನವರಿ 04, 2024 ರಿಂದ 10ರ ವರೆಗೆ ಡಾ॥ ಆನಿಬೆಸೆಂಟ್ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್, ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳ ಹಿಮಾಲಯ ವೃಕ್ಷಮಣಿ (ಹೆಚ್.ಡಬ್ಲ್ಯ್ಯೂ.ಬಿ) ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 6 ವಿಭಾಗಗಳಿಂದ ಒಟ್ಟು 210 ಶಿಕ್ಷಕ–ಶಿಕ್ಷಕಿಯರು, ಉಪನ್ಯಾಸಕ–ಉಪನ್ಯಾಸಕಿಯರು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಭಾಗವಹಿಸಿ ತರಬೇತಿ ಪಡೆದರು.

ಶಿಬಿರದಲ್ಲಿ ಕಬ್ ವಿಭಾಗಕ್ಕೆ ಶ್ರೀಮತಿ ಸಿ. ಸಂಧ್ಯಾರಾಣಿ ಎಲ್.ಟಿ (ಕಬ್), ಸ್ಕೌಟ್ ವಿಭಾಗಕ್ಕೆ ಶ್ರೀ ಕೆ.ಜಿ. ಗೋಪಾಲಕೃಷ್ಣ, ಎಲ್.ಟಿ. (ಸ್ಕೌ), ಶ್ರೀ ಟಿ.ಸಿ. ಗಂಗಾಧರ್, ಎಲ್.ಟಿ. (ಸ್ಕೌ) ಮತ್ತು ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ. (ಸ್ಕೌ), ರೋವರ್ ವಿಭಾಗಕ್ಕೆ ಶ್ರೀ ಎ.ವಿ. ರಾಜೇಶ್, ಎಲ್.ಟಿ. (ರೋ) ಹಾಗೂ ರೇಂಜರ್ ವಿಭಾಗಕ್ಕೆ ಡಾ. ಎಸ್. ಶುಭಾ, ಎಲ್.ಟಿ. (ರೇಂ), ಗೈಡ್ ವಿಭಾಗಕ್ಕೆ ಡಾ. ಕೃಪಾ ವಿಜಯ್, ಎಲ್.ಟಿ. (ಗೈ), ಶ್ರೀಮತಿ ಎಂ. ರತ್ನ, ಎಲ್.ಟಿ. (ಗೈ) ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಗೌರಬಾಯಿ, ಎಲ್.ಟಿ. (ಬುಲ್‌ಬುಲ್) ಇವರುಗಳು ನಾಯಕರಾಗಿ ಕಾರ್ಯನಿರ್ವಹಿಸಿದರು.

ಜನವರಿ 8, 2024 ರಂದು ಹೊರಸಂಚಾರ ಕಾರ್ಯಕ್ರಮವನ್ನು ಬಾಶೆಟ್ಟಿಹಳ್ಳಿ ಗ್ರಾಮಕ್ಕೆ ಕೈಗೊಳ್ಳಲಾಯಿತು ಮತ್ತು ಜನವರಿ 9, 2024 ರಂದು ಸಂಜೆ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ನಡೆಸಲಾಯಿತು.

ಜನವರಿ 4, 2024 ರಂದು ಮೂಲಭೂತ ತತ್ವಗಳು ಬಗ್ಗೆ ಮತ್ತು ಜನವರಿ 7, 2024 ರಂದು ಸಮಾಜ ಸೇವೆ ಹಾಗೂ ಸಮುದಾಯ ಅಭಿವೃದ್ಧಿ ಯೋಜನೆ ಬಗ್ಗೆ ಶ್ರೀ ಸಿ.ಎಸ್. ರೆಡ್ಡಿ, ಎಲ್.ಟಿ. (ಸ್ಕೌ) ಮತ್ತು ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಇವರು ಶಿಬಿರಾರ್ಥಿಗಳಿಗೆ ಅತಿಥಿ ಉಪನ್ಯಾಸಕರಾಗಿ ಆಗಮಿಸಿ ಪಾಠ ಪ್ರವಚನವನ್ನು ಮಾಡಿದರು. ಜನವರಿ 6, 2024 ರಂದು ರಾಜ್ಯ ಸಹಾಯಕ ರಾಜ್ಯ ಆಯುಕ್ತರು (ಸ್ಕೌ) ಮತ್ತು ಪ್ರಕಟನಾ ಸಮಿತಿಯ ಸಹ ಸಂಪಾದಕರಾದ ಶ್ರೀ ಎನ್. ಶ್ರೀನಿವಾಸನ್‌ರವರು ಎಲ್.ಟಿ. (ಸ್ಕೌ) ಇವರು ಶಿಬಿರಾರ್ಥಿಗಳಿಗೆ ಅತಿಥಿ ಉಪನ್ಯಾಸಕರಾಗಿ ಆಗಮಿಸಿದ್ದರು.

ಜನವರಿ 10, 2024 ರಂದು ಬೆಳಿಗ್ಗೆ 7 ಗಂಟೆಗೆ ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಈ ದಿನ ಮುಂಜಾನೆ 11 ಗಂಟೆಗೆ ಶಿಬಿರದ ಸಮಾರೋಪ ಸಮಾರಂಭ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್–ಗೈಡ್ಸ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರೋಪ ಸಮಾರಂಭದಲ್ಲಿ ಜಾನಪದ ಸಾಹಿತಿಗಳು ಹಾಗೂ ರಾಜ್ಯ ಸಂಸ್ಥೆಯ ಪ್ರಕಟನಾ ಸಮಿತಿಯ ಗೌರವ ಅಧ್ಯಕ್ಷರಾದ, ನಾಡೋಜ ಡಾ. ಗೊ.ರು. ಚನ್ನಬಸಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಶಿಬಿರಾರ್ಥಿಗಳಿಗೆ ತಮ್ಮ ಭಾಷಣದ ಮೂಲಕ ಮಕ್ಕಳ ಬೆಳವಣಿಗಾಗಿ ಶ್ರಮಿಸಲು ಕರೆ ನೀಡಿದರು. ಮತ್ತೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬಿ. ಷಣ್ಮುಖಪ್ಪರವರು

ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಉಪಯುಕ್ತ ಸೇವಾ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ತಂಡ ಮಟ್ಟದಲ್ಲಿ ಆಯೋಜಿಸುವ ಮೂಲಕ ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆ ಮಾಡಬೇಕೆಂದು ಕೋರಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ದಳಮಟ್ಟದಲ್ಲಿ ಸೇವಾ ಕಾರ್ಯಕ್ರಮಗಳನ್ನು ಕೈಗೊಂಡು ಮಕ್ಕಳಲ್ಲಿ ಸೇವಾ ಮನೋಭಾವ ಬೆಳೆಸಿರಿ, ಜೊತೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಚಟುವಟಿಕೆಗಳ ಮೂಲಕ, ದೈವಭಕ್ತಿ, ರಾಷ್ಟ್ರಭಕ್ತಿ, ವಿಶ್ವಭ್ರಾತೃತ್ವ, ಶಿಸ್ತು, ಸಹಬಾಳ್ವೆ, ಸ್ವಾವಲಂಬಿತನದಂತಹ ಉದಾತ್ತ ಗುಣಗಳನ್ನು ಬೆಳೆಸುವಂತೆ ಶಿಬಿರಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ಗೈ) ವಯಸ್ಕ ಸಂಪನ್ಮೂಲ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ನಾಗೇಶ್ ಆರ್. ಶಿವಪೂರ್ ಎಲ್.ಟಿ. (ಸ್ಕೌ) ಮತ್ತು ರಾಜ್ಯ ತರಬೇತಿ ಆಯುಕ್ತರು (ಸ್ಕೌ) ಮತ್ತು ಶ್ರೀಮತಿ ಕೆ.ವಿ. ಶಾಮಲ, ಎಲ್.ಟಿ. (ಗೈ) ಮತ್ತು ರಾಜ್ಯ ತರಬೇತಿ ಆಯುಕ್ತರು (ಗೈ) ಉಪಸ್ಥಿತರಿದ್ದರು.










# ಸೌಟ್ಸ್ ಮತ್ತು ಗೈಡ್ಸ್ ವತಿಯಿಂದ ಫೆ. 8 ರಿಂದ 'ಕಲ್ಯಾಣ ಕರ್ನಾಟಕ ಜಾಂಬೊರೇಟ್: ಡಾ.ಖದಿರ್



ಸಂಜೆವಾಣಿ ವಾರ್ತೆ

ಬೀದರ್:ಜ.27: ಕಲ್ಯಾಣ ಕರ್ನಾಟಕದಲ್ಲೇ ಪ್ರಪ್ರಥಮ ಬಾರಿಗೆ ಸೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಘಟಕ ಹಾಗೂ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ವತಿಯಿಂದ ನಗರದ ಶಾಹೀನ್ ಪದವಿಪೂರ್ವ ವಿಜ್ಞಾನ ಕಾಲೇಜು ಆವರಣದಲ್ಲಿ ಫೆ. 8 ರಿಂದ 12 ರ ವರೆಗೆ ಜಾಂಬೊರೇಟ್ ಹಮ್ಮಿಕೊಳ್ಳಲಾಗಿದೆ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನ ಜಿಲ್ಲಾ ಉಪಾಧ್ಯಕ್ಷ ಡಾ. ಅಬ್ದುಲ್ ಖದಿರ್ ತಿಳಿಸಿದರು

ಈ ಕುರಿತು ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು,ಕೊಪ್ಪಳ,ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಮೂರು ಸಾವಿರಕ್ಕೂ ಹೆಚ್ಚು ಸೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ ಸೌಟ್ಸ್ ಅಂಡ್ ಗೈಡ್ಸ್ ಮುಖ್ಯಸ್ಥರು ಜಾಂಬೊರೇಟ್‌ನಲ್ಲಿಪಾಲ್ಗೊಳ್ಳಲಿದ್ದಾರೆ. ಪ್ರತಿ ದಿನ ಬೆಳಿಗ್ಗೆ 6.30 ರಿಂದ ರಾತ್ರಿ 8 ರ ವರೆಗೆ ಸಾಹಸಮಯ, ಸಾಂಸ್ಕೃತಿಕ ಚಟುವಟಿಕೆ, ಯೋಗ, ಧ್ಯಾನ, ಜಾಥಾ, ಪಥ ಸಂಚಲನ, ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ,ಜಿಲ್ಲೆಯ ಜಾತ್ರೆಗಳ > ಸನ್ನಿವೇಶ ಪ್ರದರ್ಶನ, ಜಿಲ್ಲಾ ವೈಭವ, ದೈಹಿಕ ಶಿಕ್ಷಣದ ಪ್ರದರ್ಶನ, ಲೋಕಲ್ ಟ್ಯಾಲೆಂಟ್ ಶೋ ಮೊದಲಾದ ಚಟುವಟಿಕೆಗಳು ನಡೆಯಲಿವೆ ಎಂದರು.

ಭಾರತ್ ಸ್ಕೌಟ್ಸ್‌ಮತ್ತುಗೈಡ್ಸ್‌ನಜಿಲ್ಲಾ ಮುಖ್ಯ ಆಯುಕ್ತರಾದ ಡಾ ಗುರಮ್ಮ ಸಿದ್ದಾರೆಡ್ಡಿ ಮಾತನಾಡಿ, ಈ ಕಲ್ಯಾಣ ಕರ್ನಾಟಕ ಜಾಂಬೋರೇಟ್ ಭಾರತ್ ಸ್ಕೌಟ್ಸ್ ' ಮತ್ತು ಗೈಡ್ಸ್ ಕರ್ನಾಟಕ ರಾಜ್ಯದ ಪ್ರಧಾನ ಆಯುಕ್ತರಾದಂತಹ ಶ್ರೀ.ಪಿ.ಜಿ.ಆರ್.ಸಿಂಧ್ಯಾ ಅವರ ನೇತೃತ್ವದಲ್ಲಿ ನಡೆಯಲಿದೆ.

ಸಿದ್ಧಾರೂಢ ಮಠದ ಡಾ. ಶಿವಕುಮಾರಸ್ವಾಮೀಜಿ ಜಾಂಬೋರೇಟ್ ಉದ್ಘಾಟಿಸುವರು ಅರಣ್ಯ, ಪರಿಸರ, ಜೈವಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್, ಸಣ್ಣ ನೀರಾವರಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಎನ್.ಎಸ್.

ಭೋಸರಾಜು,ನಿವೃತ್ತಲೋಕಾಯುಕ್ತ ಸಂತೋಷಹೆಗಡೆ,ಸೇಡಂನ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ,ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಅಜಯ್ ಸಿಂಗ್, ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ, ಅರವಿಂದಕುಮಾರ ಅರಳಿ, ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ, ಸೌಟ್ಸ್ ಮತ್ತು ಗೈಡ್ಸ್ ರಾಷ್ಟ್ರ ರಾಜ್ಯ ಹಾಗೂ ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ಗಣ್ಯರು ಭಾಗವಹಿಸುವರು ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನ ಕಲ್ಯಾಣ ಕರ್ನಾಟಕ ವಿಭಾಗದ ಸಂಯೋಜಕಿ ಮಲ್ಲೇಶ್ವರಿ ಜುಜಾರೆ ಮಾತನಾಡಿ, ಮೆಹಂದಿ,ರಂಗೋಲಿ, ಪೇಪರ್ ಕಟ್ಟಿಂಗ್, ಕ್ಲೈಮಾಡಲಿಂಗ್, ಪಯೋನಿರಿಂಗ್ ಮಾಡೆಲ್ಸ್, ಬೆಂಕಿ ಇಲ್ಲದೇ ಅಡುಗೆ ತಯಾರಿಕೆ, ತರಕಾರಿ ಮಾದರಿ,ರಸಪ್ರಶ್ನೆಸ್ಪರ್ಧೆ, ಸೋಲಾರ್ ತಂತ್ರಜ್ಞಾನ,□ಅಗ್ನಿ ಸುರಕ್ಷತಾ ಕ್ರಮಗಳ ಮಾಹಿತಿ, ಬಿದರಿ, ಕಲೆ, ಸಿ.ಪಿ.ಆರ್, ಸುಸ್ಥಿರ ಅಭಿವೃದ್ಧಿಗಳ ತರಬೇತಿ, ಕಲರ್ ಪಾರ್ಟಿ, ಜಾನಪದ ನೃತ್ಯ, ದೇಶಭಕ್ತಿ ನೃತ್ಯ, ಏರೋಬಿಕ್ ಡ್ಯಾನ್ಸ್, ಸರ್ವಧರ್ಮ•ಪ್ರಾರ್ಥನೆಮೊದಲಾದವು ಜಾಂಬೊರೇಟ್ನ ಭಾಗವಾಗಿರಲಿವೆ. ವಿವಿಧ ಚಟುವಟಿಕೆಗಳು ಯುವಕ, ಯುವತಿಯರಲ್ಲಿ ಶಿಸ್ತು, ದೈಹಿಕ, ಮಾನಸಿಕ,ಸಾಮಾಜಿಕ,ನೈತಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ನೆರವಾಗಲಿವೆ ಎಂದು ಹೇಳಿದರು. ಶಹಾಪುರ ಗೇಟ್ ಸಮೀಪದ ಶಾಹೀನ್ ಕಾಲೇಜಿನಲ್ಲಿ ಈಗಾಗಲೇ ಚಟುವಟಿಕೆಗಳಿಗೆ ವೇದಿಕೆ, ಪ್ರತಿನಿಧಿಗಳಿಗೆ ಊಟ, ಕುಡಿಯುವ ನೀರು, ವಸತಿ, ಸಾರಿಗೆ ವ್ಯವಸ್ಥೆ ಮತ್ತಿತರ ಸಿದ್ಧತಾ ಕಾರ್ಯಗಳು ಭರದಿಂದ ನಡೆದಿವೆ ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಾಂಬೊರೇಟ್ ಕಾರ್ಯದರ್ಶಿ ಡಾ.ಎಚ್.ಬಿ.ಭರಶೆಟ್ಟಿ, ಕ್ಯಾಂಪ್ ನಾಯಕ ರಮೇಶ ತಿಬಶೆಟ್ಟಿ, ಕ್ಯಾಂಪ್ ನಾಯಕಿ ಜೈಶೀಲಾ ಸುದರ್ಶನ್, ಜಿಲ್ಲಾ ಸಂಘಟಕಿ ನಾಗರತ್ನ ಪಾಟೀಲ ಹಾಗೂ ಇತರರಿದ್ದರು.

# ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ



ಜನವರಿ 12, 2024ರಂದು ರಾಜ್ಯ ಕೇಂದ್ರ ಕಛೇರಿ ಇಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ, ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮವನ್ನು ಮತ್ತು ಯುವ ದಿನಾಚರಣೆಯ ಅಂಗವಾಗಿ ರಾಜ್ಯ ಸಂಸ್ಥೆ, ಸೇವಾದಳ, ಇಂಡಿಯನ್ ರೆಡ್‌ಕ್ರಾಸ್, ಕಾಲೇಜು ಶಿಕ್ಷಣ ಇಲಾಖೆ, ಜೀರೋ ವೇಸ್ಟ್ ಮ್ಯಾನೇಜ್‌ಮೆಂಟ್, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯುನಿಸೆಫ್, ಬಯೋಕಾನ್, ಇಂಡಿಯನ್ ಯೂಥ್ ಫೆಲೋಷಿಪ್, ಬೆಂಗಳೂರು ಹೋಟೆಲ್ ಅಸೋಸಿಯೇಷನ್ಸ್ ಸಂಘ–ಸಂಸ್ಥೆಗಳ ಪದಾಧಿಕಾರಿಗಳ/ಪ್ರನಿನಿಧಿಗಳೊಂದಿಗೆ ಇತ್ತೀಚಿನ ದಿನಗಳಲ್ಲಿ ಜಗತ್ತಿನೆಲ್ಲೆಡೆ ಬದಲಾಗುತ್ತಿರುವ ತಾಂತ್ರಿಕತೆ ಮತ್ತು ಜೀವನಶೈಲಿಗಳು ನಮ್ಮ ಯುವಕರ ಮೇಲೂ ಪ್ರಭಾವ ಬೀರುತ್ತಿದ್ದು, ಕೆಲವರು ಮಾದಕವ್ಯಸನಿಗಳಾಗಿ ಸಮಾಜಘಾತಕ ಚಟುವಟಿಕೆಗಳಲ್ಲಿ ತೊಡಗುತ್ತಿರುವ ಹಾಗೂ ಯುವಶಕ್ತಿ ಸಬಲೀಕರಣದ ಬಗ್ಗೆಯ ವಿಚಾರಗಳ ಕುರಿತು ಸಭೆಯನ್ನು ನಡೆಸಲಾಯಿತು. ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ರವರು ಎಲ್ಲರನ್ನು ಸ್ವಾಗತಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಜೀವನದ ಶಿಕ್ಷಣ ಕಲಿಸುವ ಅನೇಕ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ. ಅದೇ ರೀತಿ ಅನೇಕ ಸಂಘ–ಸಂಸ್ಥೆಗಳು ಉತ್ತಮ ಸೇವೆ ಮತ್ತು ಮಕ್ಕಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಇಂದಿನ ಯುವ ದಿನಾಚರಣೆ ಅಂಗವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗು ಇತರೆ ಸೇವಾ ಸಂಸ್ಥೆಗಳ ಜೊತೆಗೂಡಿ ಸಮುದಾಯ ಮತ್ತು ಯುವಜನತೆಗಾಗಿ ಒಟ್ಟಿಗೆ ಸೇವೆ ಸಲ್ಲಿಸಬಹುದಾದ ವಿಷಯಗಳ ಕುರಿತು ಚರ್ಚಿಸಲು ಸಭೆ ಸೇರಿದ್ದು, ಎಲ್ಲರೂ ಒಟ್ಟಿಗೆ ಸಲ್ಲಸಿಬಹುದಾದ ಸೇವೆ ಮತ್ತು ಸೇವಾಕ್ಷೇತ್ರಗಳ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ನೀಡಲು ಕೋರಿದರು.

ಶ್ರೀ ಮನೋಜ್ ಸಬಾಸ್ಟಿನ್, ಯುನಿಸೆಫ್ ಸಂಸ್ಥೆಯ ಪ್ರತಿನಿಧಿ, ಶ್ರೀಮತಿ ಸಂಧ್ಯಾ, ಜೀರೊ ವೇಸ್ಟ್ ಮ್ಯಾನೇಜ್‌ಮೆಂಟ್, ಶ್ರೀ ಎಂ.ಕೆ. ಕಮಲ್ ಕುಮಾರ್, ಪ್ರಧಾನ ಕಾರ್ಯದರ್ಶಿ, ಭಾರತ್ ಸೇವಾದಳ, ಶ್ರೀ ಪಿ.ಸಿ.ರಾವ್, ಅಧ್ಯಕ್ಷರು, ಬೆಂಗಳೂರು ಹೋಟೆಲ್ ಅಸೋಸಿಯೇಷನ್ಸ್, ಶ್ರೀ ಶೈಲೇಶ್, ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆ, ಡಾ॥ ಸಿನಿ ಅಲೀನ್ ವಸ್ತ್ರದ್, ಪ್ರೋಗ್ರಾಂ ಆಫೀಸರ್, ಬಯೋಕಾನ್ ಸಂಸ್ಥೆ, ಡಾ॥ ಆರ್. ಶ್ರೀಕಾಂತ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಮತ್ತು ಸಹಾಯಕ ರಾಜ್ಯ ಆಯುಕ್ತರು (ಸ್ಕೌ), ಶ್ರೀಮತಿ ರಜನಿ, ಅಧೀಕ್ಷಕರು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಡಾ॥ ಡಯಾನ, ಇಂಟರ್‌ನ್ಯಾಷನಲ್ ಯೂಥ್ ಫೆಲೋಷಿಪ್ ರವರುಗಳು ಮಾತನಾಡಿ ತಮ್ಮ ತಮ್ಮ ಸಂಸ್ಥೆಗಳಲ್ಲಿ ನಿರ್ವಹಿಸುತ್ತಿರುವ ಕಾರ್ಯಗಳ ಬಗ್ಗೆ ಸಭೆಯಲ್ಲಿ ತಿಳಿಸಿದರು ಮತ್ತು ಎಲ್ಲಾ ಸಂಘ–ಸಂಸ್ಥೆಗಳು ಸೇರಿ ಸಲ್ಲಿಸಬೇಕಾದ ಸೇವಾ ಕಾರ್ಯಗಳ ಕುರಿತು ಸಲಹೆಗಳನ್ನು ನೀಡಿದರು.

ನಂತರ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಮಾತನಾಡಿ, ಎಲ್ಲಾ ಸೇವಾ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಪ್ರಾಯೋಗಿಕವಾಗಿ ಸೇವಾಕಾರ್ಯಕ್ರಮಗಳನ್ನು ಒಂದು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿ, ಸರ್ಕಾರ, ವಿವಿಧ ಸಂಸ್ಥೆಗಳ ಸಹಕಾರಗಳನ್ನು ಪಡೆದು, ಕಾರ್ಯಾನುಷ್ಠಾನ ಮಾಡುವುದು ಸೂಕ್ತವೆಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ಎಲ್ಲಾ ಸೇವಾ ಸಂಸ್ಥೆಗಳು ಒಂದೆಡೆ ಸೇರಿ ಇಂದಿನ ವಿವೇಕಾನಂದ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದ್ದೇವೆ, ಎಲ್ಲಾರೂ ವಿಶ್ವಾಸವಿಟ್ಟು, ಸರ್ಕಾರ, ವಿವಿಧ ಸಂಘ–ಸಂಸ್ಥೆಗಳ

ಪ್ರಾಯೋಜಕತ್ವ ನೀಡುವವರ ಸಹಕಾರದಿಂದ ಒಟ್ಟಿಗೆ ಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳೋಣ, ಸರ್ವಧರ್ಮ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳೋಣ, ಶ್ರೀ ಶ್ರೀಕಾಂತ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಯುವಜನತೆಯ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸೋಣವೆಂದು ತಿಳಿಸಿ, ಈ ಸಮಿತಿ ಇನ್ನೊಮ್ಮೆ ಸಭೆಸೇರುವಂತೆ ಸಲಹೆ ನೀಡಿದರು.

ಶ್ರೀಮತಿ ಸಿ. ಮಂಜುಳ, ರಾಜ್ಯ ಸಂಘಟನಾ ಆಯುಕ್ತರು (ಗೈ) ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಮತ್ತು ವಿವಿಧ ಸೇವಾ ಸಂಸ್ಥೆಯ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.



## ಫೆಬ್ರವರಿ 2024ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1. | ರಾಜ್ಯ ಮಟ್ಟದ ಅಗ್ರಗಾಮಿತ್ವ ಮತ್ತು ಸಾಹಸ ಶಿಬಿರ | 4 ರಿಂದ 7 ಫೆಬ್ರವರಿ 2024 | ಶಾಹಿನ್ ಗ್ರೂಪ್ ಸಂಸ್ಥೆ, ಅಲ್ಲಮ್ ಇಕ್ಬಾಲ್ ಎಜುಕೇಷನ್ ಸೊಸೈಟಿ, ಶಾಹಿನ್ ನಗರ, ಶಹಪುರ ಗೇಟ್, ಬೀದರ್ ಜಿಲ್ಲೆ |
| 2. | ಕಲ್ಯಾಣ ಕರ್ನಾಟಕ ಜಾಂಬೊರೇಟ್ | 8 ರಿಂದ 12 ಫೆಬ್ರವರಿ 2024 | ಶಾಹಿನ್ ಗ್ರೂಪ್ ಸಂಸ್ಥೆ, ಅಲ್ಲಮ್ ಇಕ್ಬಾಲ್ ಎಜುಕೇಷನ್ ಸೊಸೈಟಿ, ಶಾಹಿನ್ ನಗರ, ಶಹಪುರ ಗೇಟ್, ಬೀದರ್ ಜಿಲ್ಲೆ |
| 3. | ರಾಜ್ಯ ಮಟ್ಟದ ಅಗ್ರಗಾಮಿತ್ವ ಶಿಬಿರ | 14 ರಿಂದ 17 ಫೆಬ್ರವರಿ 2024 | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಆವರಣ, ಕೋರ್ಟ್ ಸರ್ಕಲ್, ಧಾರವಾಡ |
| 4. | ಕಡಲ ತೀರ ಚಾರಣ ಶಿಬಿರ | 20 ರಿಂದ 23 ಫೆಬ್ರವರಿ 2024 | ಉಡುಪಿ ಜಿಲ್ಲೆ |
| 5. | ಚಿಂತನಾ/ ಸಂಸ್ಥಾಪಕರ ದಿನಾಚರಣೆ | 22 ಫೆಬ್ರವರಿ 2024 | ಎಲ್ಲಾ ಹಂತಗಳಲ್ಲಿ |
| 6. | ರಾಷ್ಟ್ರೀಯ ಮಟ್ಟದ ಖಆಉಖ ಅಡ್ವೊಕೆಸಿ ವರ್ಕ್‌ಶಾಪ್ | 28 ಫೆಬ್ರವರಿ ರಿಂದ 3 ಮಾರ್ಚ್ 2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ |

– ರಾಜ್ಯ ಕಾರ್ಯದರ್ಶಿ

# ರಾಜ್ಯಪುರಸ್ಕಾರ ರ್‍ಯಾಲಿ

**ಚತುರ್ಥ ಚರಣ ಕಬ್ಸ್, ಹೀರಕ್ ಪಂಕ್ ಬುಲ್‌ಬುಲ್ಸ್, ರಾಜ್ಯಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್**
**ರಾಜ್ಯಪುರಸ್ಕಾರ ರೋವರ್ಸ್ ಮತ್ತು ರೇಂಜರ್ಸ್‌ಗಳ ಪ್ರಮಾಣಪತ್ರ ವಿತರಣಾ ಸಮಾರಂಭ ಮತ್ತು ರಾಜ್ಯ ಪುರಸ್ಕಾರ ರ್‍ಯಾಲಿ**




ರಾಜ್ಯ ಸಂಸ್ಥೆಯ ವತಿಯಿಂದ ಜನವರಿ 19, 2024 ರಂದು 2022–23ನೇ ಸಾಲಿನ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಕ್ ಬುಲ್‌ಬುಲ್ಸ್, ರಾಜ್ಯಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯಪುರಸ್ಕಾರ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಇದರ ಅಂಗವಾಗಿ ಕೇಂದ್ರ ಕಛೇರಿ, ಶಾಂತಿಗೃಹದಲ್ಲಿ ಪೂರ್ವಭಾವಿ ತರಬೇತಿಯನ್ನು ನೀಡಲಾಗಿತ್ತು. ಬೆಳಗ್ಗೆ 9 ಗಂಟೆಗೆ ನೊಂದಾವಣಿ ನಂತರ, 10 ಗಂಟೆಗೆ ಧ್ವಜಾರೋಹಣವನ್ನು ನೆರವೇರಿಸಲಾಯಿತು. ನಂತರ ರಾಜಭವನ ರ್‍ಯಾಲಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಯಿತು.

ನಂತರ ಹಿರಿಯ ಸ್ಕೌಟ್ಸ್/ಗೈಡ್ಸ್ ನಾಯಕ–ಕಿಯರು ಸಮವಸ್ತ್ರ, ಕವಾಯತು ಇತ್ಯಾದಿಗಳನ್ನು ಪರಿಶೀಲಿಸಿದರು. ಜಿಲ್ಲಾವಾರು ಆಯ್ಕೆಯಾಗಿರುವ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಪ್ರಮಾಣ ಪತ್ರಗಳನ್ನು ಸ್ವೀಕರಿಸುವ ಬಗ್ಗೆ ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ (ಸ್ಕೌ), ಶ್ರೀಮತಿ ಶಾಮಲ .ಕೆ.ವಿ, ಎಸ್.ಟಿ.ಸಿ (ಗೈ) ಇವರು ತರಬೇತಿಯನ್ನು ನೀಡಿದರು.

ಮಧ್ಯಾಹ್ನದ ಊಟದ ನಂತರ ಶಿಬಿರಾರ್ಥಿಗಳೆಲ್ಲರೂ ಶಿಸ್ತಾಗಿ ಶಾಂತಿಗೃಹದಿಂದ ರಾಜಭವನಕ್ಕೆ ತೆರಳಿದರು. ಮಧ್ಯಾಹ್ನ 3.30ಕ್ಕೆ ಸರಿಯಾಗಿ ರಾಜಭವನದ ಗಾಜಿನ ಮನೆಯಲ್ಲಿ 1000ಕ್ಕೂ ಹೆಚ್ಚು ಮಕ್ಕಳು, ಶಿಕ್ಷಕರು, ಪದಾಧಿಕಾರಿಗಳು, ಪೋಷಕರುಗಳು ಭಾಗವಹಿಸಿದ್ದರು.

ಪೊಲೀಸ್ ಇಲಾಖೆಯ ವಾದ್ಯವೃಂದದಲ್ಲಿ ರಾಷ್ಟ್ರ ಗೀತೆಯೊಂದಿಗೆ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಧಾನ ಸಮಾರಂಭ ಪ್ರಾರಂಭವಾಯಿತು. ವೇದಿಕೆಯಲ್ಲಿ ಡಾ॥ ಎಂ.ಸಿ. ಸುಧಾಕರ್, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ರಾಜ್ಯ ಸಂಸ್ಥೆ, ಶ್ರೀ ಎನ್.ಎಸ್. ಬೋಸರಾಜು, ಮಾನ್ಯ ಸಚಿವರು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕರ್ನಾಟಕ ಸರ್ಕಾರ, ಶ್ರೀ ರಿತೇಶ್ ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ಶ್ರೀಮತಿ ಸಿಂಧು ಬಿ. ರೂಪೇಶ್, ಭಾ.ಆ.ಸೇ, ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ



ಪೂರ್ವ), ಕರ್ನಾಟಕ ಸರ್ಕಾರ, ಶ್ರೀ ಪಿ.ಜಿ.ಆರ್.ಸಿಂಧ್ಯ, ಮಾನ್ಯ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರು, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು, ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು(ಸ್ಕೌ), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ಗೈ) ವ.ಸಂ, ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈ), ಶ್ರೀ ಟಿ. ಪ್ರಭಾಕರ್, ರಾಜ್ಯ ಖಜಾಂಚಿಗಳು, ಶ್ರೀ ಆದರ್ಶ ಪಾಸ್ವಾನ್, ವಿಶೇಷ ಅಧಿಕಾರಿಗಳು, ರಾಜಭವನ ಮುಂತಾದವರು ಉಪಸ್ಥಿತರಿದ್ದರು.

ನಂತರ ಸ್ಕೌಟ್–ಗೈಡ್ ಪ್ರಾರ್ಥನೆಯೊಂದಿಗೆ ಸಮಾರಂಭವು ಪ್ರಾರಂಭವಾಯಿತು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಅತಿಥಿ ಮಹೋದಯರನ್ನು ಸ್ವಾಗತಿಸಿದರು. ಶ್ರೀಮತಿ ಕಮಲಾಕ್ಷಿ ಹೆಗಡೆ, ಎ.ಎಸ್.ಸಿ (ಗೈ) ಇವರು ಶ್ರೀ ಬಸವರಾಜ್ ಎಸ್. ಹೊರಟ್ಟಿ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು ಇವರು ಕಳುಹಿಸಿರುವ ಸಂದೇಶವನ್ನು ಓದಿದರು.

ನಂತರ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಪ್ರಾಸ್ತಾವಿಕವಾಗಿ ಮಾತನಾಡಿ, ರಾಜ್ಯ ಪುರಸ್ಕಾರ ಪರೀಕ್ಷೆ ಮತ್ತು ಅವಾರ್ಡ್ ಬಗ್ಗೆ ತಿಳಿಸಿದರು. ರಾಜ್ಯಪುರಸ್ಕಾರ ಪ್ರಶಸ್ತಿಯನ್ನು ಸಿ.ಇ.ಟಿ.ಗೆ ಪರಿಗಣಿಸುವಂತೆ ಗೌರವಾನ್ವಿತ ಉನ್ನತ ಶಿಕ್ಷಣ ಸಚಿವರನ್ನು ಕೋರಿದರು.

ಡಾ॥ ಎಂ.ಸಿ. ಸುಧಾಕರ ಇವರು ಮಾತನಾಡಿ, ಸ್ಕೌಟಿಂಗ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳ ಮೂಲಕ ವಿವಿಧ ಸೇವೆಗಳನ್ನು ಮಕ್ಕಳ ಮುಖೇನ ಮಾಡಿಸುತ್ತಿರುವುದರಿಂದ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ಸೇವಾ ಭಾವನೆ, ಕೌಶಲ್ಯಾಭಿವೃದ್ಧಿ ಬೆಳೆಯುತ್ತಿರುವುದು ಶ್ಲಾಘನೀಯ ಹಾಗೂ ಸಂಸ್ಥೆಯ ಬೆಳವಣಿಗೆಗೆ ಸಂಪೂರ್ಣ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಶ್ರೀ ಎನ್.ಎಸ್. ಬೋಸರಾಜು ಇವರು ಮಾತನಾಡಿ, ಕಲ್ಯಾಣ ಕರ್ನಾಟಕ ಜಿಲ್ಲೆಗಳು ಸ್ಕೌಟಿಂಗ್ ಅಭಿವೃದ್ಧಿಗೆ ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿದ್ದು ಅನುದಾನ, ವಿವಿಧ ಕೋಟಾದಡಿ ಕಾಯ್ದಿರಿಸುವಿಕೆ, ಇತ್ಯಾದಿಗಳನ್ನು ನೋಡಿ ರಾಜ್ಯದಲ್ಲಿ ಸ್ಕೌಟಿಂಗ್ ಅನ್ನು ಇನ್ನೂ ಹೆಚ್ಚಿನದಾಗಿ ಬೆಳೆಸುವುದಾಗಿ ತಿಳಿಸಿದರು. ಪ್ರಶಸ್ತಿ ವಿಜೇತ ಮಕ್ಕಳನ್ನು ಅಭಿನಂದಿಸಿದರು.

ಶ್ರೀ ರಿತೇಶ್‌ಕುಮಾರ್ ಸಿಂಗ್ ಇವರು ಮಾತನಾಡಿ, ಸಂಸ್ಥೆಯಿಂದ ಮಕ್ಕಳಿಗೆ ಅತ್ಯಂತ ಉಪಯುಕ್ತ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾರೆ. ಈ ಜೀವನ ಶಿಕ್ಷಣದ ಕಲೆಗಳು ಮಕ್ಕಳಲ್ಲಿ ಸ್ವಾವಲಂಬನೆ, ಧೈರ್ಯ, ಪರೋಪಕಾರ ಇತ್ಯಾದಿ ಗುಣಗಳನ್ನು ಬೆಳೆಸುತ್ತವೆ. ನಮ್ಮ ಇಲಾಖೆಯಿಂದ ಸಂಪೂರ್ಣ ಸಹಕಾರವನ್ನು ನೀಡಲಾಗುವುದು ಎಂದು ತಿಳಿಸಿದರು.

2022–23ನೇ ಸಾಲಿನಲ್ಲಿ ಒಟ್ಟು 6850 ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಪ್ರಶಸ್ತಿಗೆ ಅರ್ಹರಾಗಿದ್ದರು, ಭಾಗವಹಿಸಿದ್ದ ಮಕ್ಕಳಿಗೆ ಮಾನ್ಯ ಸಚಿವರು ಪ್ರಶಸ್ತಿ ಪತ್ರಗಳನ್ನು ವಿತರಿಸಿ ಅಭಿನಂದಿಸಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ರಾಜ್ಯ ಮಟ್ಟದ ಅತ್ಯುನ್ನತ ಪ್ರಶಸ್ತಿಯಾದ ರಾಜ್ಯ ಪುರಸ್ಕಾರ ಪಡೆದಿರುವುದು ಹೆಮ್ಮೆಯ ವಿಷಯ. ಇದರಿಂದ ತಂದೆ–ತಾಯಿಯರು ನಿಜವಾಗಿ ಸಂತೋಷವನ್ನು ಪಡುತ್ತಾರೆ. ಮಕ್ಕಳು ಆದರ್ಶ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಿದರು. ಕರ್ನಾಟಕದ ಸ್ಕೌಟಿಂಗ್ ಬೆಳವಣಿಗೆಗೆ ಕಾರಣಕರ್ತರಾದ ಹಿಂದಿನ ರಾಜ್ಯ ಆಯುಕ್ತರುಗಳು ಹಾಗು ಇತರ ನಾಯಕರುಗಳನ್ನು ಸ್ಮರಿಸಿದರು.

ಶ್ರೀ ಆದರ್ಶ ಪಾಸ್ವಾನ್, ಗೌರವಾನ್ವಿತ ರಾಜ್ಯಪಾಲರ ವಿಶೇಷಾಧಿಕಾರಿಗಳು ಇವರು ಘನತೆವೆತ್ತ ರಾಜ್ಯಪಾಲರ ಪರವಾಗಿ ಅವರ ಸಂದೇಶವನ್ನು ವಾಚಿಸಿದರು ಹಾಗೂ ರಾಜ್ಯಪಾಲರ ಪ್ರಶಸ್ತಿ ಪತ್ರಗಳನ್ನು ಪಡೆದ ಎಲ್ಲಾ ಸ್ಕೌಟ್ಸ್–ಗೈಡ್ಸ್‌ಗಳನ್ನು ಅಭಿನಂದಿಸಿದರು.

ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು(ಗೈ) ಇವರು ಸರ್ವರಿಗೂ ಧನ್ಯವಾದಗಳನ್ನು ಸಮರ್ಪಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು. ಸಮಾರಂಭದಲ್ಲಿ ಡಾ॥ ರಾಣಿ ಮಾಚಯ್ಯ, ಪದ್ಮಶ್ರೀ ಪುರಸ್ಕೃತರು, ಜಿಲ್ಲಾ ಗೈಡ್ ಆಯುಕ್ತರು, ಕೊಡಗು, ಶ್ರೀ ಎನ್. ಶ್ರೀನಿವಾಸನ್, ಎ.ಎಸ್.ಸಿ(ಸ್ಕೌ), ಶ್ರೀಮತಿ ರುತ್ ಮನೋರಮಾ, ಎ.ಎಸ್.ಸಿ(ಗೈ), ಶ್ರೀ ಪಾಟೀಲ್ ಓಕಳೆ, ಎ.ಎಸ್.ಸಿ(ಸ್ಕೌ), ಶ್ರೀ ಪಳನಿ, ಹೆಚ್.ಕ್ಯೂ.ಸಿ, ಶ್ರೀಮತಿ ಕಮಲಾಕ್ಷಿ ಹೆಗಡೆ, ಎ.ಎಸ್.ಸಿ(ಗೈ) ಶ್ರೀಮತಿ ಹೆಲನ್ ಲೋಬೋ ಹಾಗೂ ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಹೆಚ್.ಕ್ಯೂ.ಸಿಗಳು ಜಿಲ್ಲಾ ಕಾರ್ಯದರ್ಶಿಗಳು, ಜಿಲ್ಲಾ ಆಯುಕ್ತರುಗಳು (ಸ್ಕೌಟ್ಸ್ / ಗೈಡ್ಸ್), ಸ್ಕೌಟರ್ಸ್, ಗೈಡರ್ಸ್, ಪೋಷಕರುಗಳು ಭಾಗವಹಿಸಿದ್ದರು.







# 43ನೇ ರಾಜ್ಯ ಮಟ್ಟದ ಕಬ್–ಬುಲ್‌ಬುಲ್ ಉತ್ಸವ

43ನೇ ರಾಜ್ಯ ಮಟ್ಟದ ಕಬ್ಸ್–ಬುಲ್‌ಬುಲ್ಸ್ ಉತ್ಸವವನ್ನು ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಸಹಯೋಗದಲ್ಲಿ ಜನವರಿ 22 ರಿಂದ 26, 2024ರ ವರೆಗೆ ಸ್ಕೌಟ್ಸ್–ಗೈಡ್ಸ್ ಕನ್ನಡ ಭವನ, ಸ್ವರಾಜ್ಯ ಮೈದಾನ, ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜನವರಿ 22, 2024 ರಂದು ಉತ್ಸವದ ಉದ್ಘಾಟನಾ ಸಮಾರಂಭವು ನಡೆಯಿತು. ಕಾರ್ಯಕ್ರಮದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಎಂ. ಮೋಹನ್ ಆಳ್ವರವರು ಮಾತನಾಡಿ, "ನಮ್ಮ ರಾಜ್ಯದಲ್ಲಿ 6 ಲಕ್ಷದಷ್ಟು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿದ್ದಾರೆ, ಪಠ್ಯದೊಂದಿಗೆ ಇನ್ನೊಂದು ಪ್ರತ್ಯೇಕ ಚಟುವಟಿಕೆ ಇದ್ದಾಗ ಮಾತ್ರ ಒಳ್ಳೆಯ ನಾಗರಿಕನಾಗಲು ಸಾಧ್ಯ. 100ಕ್ಕೂ ಮಿಕ್ಕದ ಜಾತಿ ಮತಗಳಿದ್ದರೂ ಎಲ್ಲರನ್ನೂ ಸಮಾನವಾಗಿ ಸ್ವೀಕರಿಸಬೇಕು ಮತ್ತು ದೇಶಕ್ಕೆ ಗೌರವ ನೀಡುವುದನ್ನು ಬಾಲ್ಯದಿಂದಲೇ ಕಲಿಯಬೇಕು. ಈ ಶಿಬಿರದ ಮೂಲಕ ಎಲ್ಲವನ್ನು ಕಲಿಯುತ್ತೀರಿ" ಎಂದು ಭಾಗವಹಿಸಿದ್ದ ಮಕ್ಕಳಿಗೆ ತಿಳಿಸಿದರು.

ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಗಂಗಪ್ಪಗೌಡರವರು ಮಾತನಾಡಿ, "ಸ್ಕೌಟ್ಸ್ ಮತ್ತು ಗೈಡ್ಸ್ ಎಂಬುದು ಮಕ್ಕಳ ನಡವಳಿಕೆಯಲ್ಲಿ ಸೇವಾಭಾವ ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ. ಗಾಂಧೀಜಿ, ವಿವೇಕಾನಂದರವರು ತಾವು ಮಾಡುವ ಕೆಲಸದಲ್ಲಿ ತಾವೇ ಮುಂದೆ ಸಾಗಿ ಸಾಧಿಸಿದಂತೆ, ಇಂದಿನ ಯುವಕರು ಮುಂದೆ ಹೋಗಬೇಕು. ಪುಸ್ತಕದ ಬದನೆಗಿಂತ, ಬೆಳೆಯುವ ಬದನೆಯೇ ಉತ್ತಮ" ಎಂದರು.

ಶ್ರೀ ಅಭಯಚಂದ್ರ ಜೈನ್, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರು ಮಾತನಾಡಿ, "ಭಾರತ ದೇಶದಲ್ಲೇ ಪ್ರಾರಂಭವಾದ ಇತಿಹಾಸವಿದು. ಎಳೆಯ ಪ್ರಾಯದಲ್ಲೆ ಬದುಕು ಕಟ್ಟುವ ಧೈರ್ಯದಿಂದ ಬದುಕಬೇಕೆಂಬ ಚಿಂತನೆಯಿಂದ ಈ ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರವನ್ನು ಆಯೋಜಿಸಲಾಗಿದೆ. ಇಂತಹ ಶಿಬಿರಕ್ಕೆ ಬಂದ ನೀವು ಖಂಡಿತ ಒಳ್ಳೆಯ ಅನುಭವದೊಂದಿಗೆ ಮರಳುತ್ತೀರಿ" ಎಂದು ಮಕ್ಕಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಮೂಡಬಿದಿರೆಯ ಅಳಿಯೂರು ಸರ್ಕಾರಿ ಪ್ರೌಢಶಾಲೆಯ 120 ಮಕ್ಕಳ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಮೂಡಬಿದಿರೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವಿರೂಪಾಕ್ಷಪ್ಪ ಹೆಚ್.ಎಸ್, ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀ ನವೀನ್ ಚಂದ್ರರವರು ಕಾರ್ಯಕ್ರಮವನ್ನು ನಿರೂಪಿಸಿದರು, ಬಂಟ್ವಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಹಮ್ಮದ್ ತುಂಬೆರವರು ಸ್ವಾಗತಿಸಿದರು ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್‌ರವರು ವಂದಿಸಿದರು.

ಈ 5 ದಿನಗಳ ಉತ್ಸವದಲ್ಲಿ ಕಬ್ಸ್–ಬುಲ್‌ಬುಲ್ಸ್‌ಗಳಿಗೆ ಸಾಹಸ ಚಟುವಟಿಕೆಗಳು, ಶಿಬಿರ ಕೌಶಲ್ಯಗಳು, ಮೋಜಿನ ಚಟುವಟಿಕೆಗಳು, ಸಾಂಪ್ರದಾಯಿಕ ಉಡುಗೆ–ತೊಡುಗೆ, ಅಡುಗೆ ತಯಾರಿ, ವಸ್ತು ಪ್ರದರ್ಶನ, ಪ್ರತಿಭಾ ಪ್ರದರ್ಶನ, ಕಲಾ ವೈಭವ, ಆಳ್ವಾಸ್ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ, ಆಳ್ವಾಸ್ ರಂಗ ಅಧ್ಯಯನ ಕೇಂದ್ರದಿಂದ ನಾಯಿಮರಿ ವಿಶೇಷ ನಾಟಕ ಪ್ರದರ್ಶನ, ಕಸದಿಂದ ರಸ, ಚಿತ್ರಕಲೆ, ಗಾಳಿಪಟ ತಯಾರಿ, ಮೌಗ್ಲಿಕತೆ, ತಾರಾಕತೆಗಳ ರೂಪಕ, ಸರ್ವದರ್ಮ ಪ್ರಾಥನೆ ಇತ್ಯಾದಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಕಬ್ಸ್–ಬುಲ್‌ಬುಲ್ಸ್‌ಗಳನ್ನು ಸಾವಿರ ಕಂಬದ ಬಸದಿ, ಕಡ್ಲೆಕೆರೆ ನಿಸರ್ಗಧಾಮ ಹಾಗೂ ಇತರೆ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲಾಯಿತು.



ಉತ್ಸವದ ಸಮಾರೋಪ ಸಮಾರಂಭವನ್ನು ಜನವರಿ 25, 2024 ರಂದು ಸ್ಕೌಟ್ಸ್–ಗೈಡ್ಸ್ ಕನ್ನಡ ಭವನ, ಮೂಡಬಿದಿರೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ, “ಡಾ॥ ಎಂ. ಮೋಹನ್ ಆಳ್ವರವರು ಜಾತಿ ಮತದ ಭೇದ ಭಾವಗಳನ್ನು ದೂರವಿರಿಸಿ, ತಾನು ಬೆಳೆಯುವ ಜೊತೆಗೆ ಸರ್ವರನ್ನು ಬೆಳೆಸಿದವರು. ‘ಜಾಂಬೂರಿ’ಯಂತಹ ಅಂತರರಾಷ್ಟ್ರೀಯ ಕಾರ್ಯಕ್ರಮವನ್ನು ಅದ್ವಿತೀಯ ಎಂಬಂತೆ ನಡೆಸಿದ್ದಾರೆ. ಮೂಡಬಿದಿರೆಯನ್ನು ವಿದ್ಯಾಕಾಶಿ ಮತ್ತು ಸ್ಕೌಟ್ಸ್–ಗೈಡ್ಸ್ ಕಾಶಿಯನ್ನಾಗಿ ಬೆಳೆಸಿದ್ದಾರೆ. ವಿದ್ಯಾರ್ಥಿಗಳು ಈ ತರಬೇತಿಯಿಂದ ಶಿಸ್ತು ಸಂಯಮಗಳನ್ನು ಕಲಿತುಕೊಳ್ಳಬೇಕು” ಎಂದರು.

ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಯವರು ಮಾತನಾಡಿ “ವಿದ್ಯಾರ್ಥಿಗಳು ತಮ್ಮಲ್ಲಿರುವ ವೈವಿಧ್ಯ ಕಲೆಗಳನ್ನು ಪ್ರಸ್ತುತಪಡಿಸುತ್ತಿರಬೇಕು. ತಮ್ಮ ಆಸಕ್ತಿ ವಿಷಯಗಳಲ್ಲಿ ತೊಡಗಿಸಿಕೊಳ್ಳಬೇಕು” ಎಂದರು. ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀಮತಿ ರಾದಾ ವೆಂಕಟೇಶ್ ಸಹಾಯಕ ರಾಜ್ಯ ಆಯುಕ್ತರು (ಗೈಡ್ಸ್) ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು.

ಶ್ರೀ ನವೀನ್ ಚಂದ್ರ ಅಂಬೂರಿ, ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ವಸಂತ್ ದೇವಾಡಿಗ, ಜಿಲ್ಲಾ ಸಹಾಯಕ ಕಾರ್ಯದರ್ಶಿ ಸ್ವಾಗತಿಸಿದರು ಹಾಗೂ ಶ್ರೀ ಪ್ರತೀಮ್ ಕುಮಾರ್, ಜಿಲ್ಲಾ ಸ್ಕೌಟ್ಸ್ ತರಬೇತಿ ಆಯುಕ್ತರು ವಂದಿಸಿದರು.

ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಉತ್ಸವದಲ್ಲಿ ಭಾಗವಹಿಸಿದ ಎಲ್ಲಾ ಜಿಲ್ಲಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರುಗಳಿಗೆ ಪ್ರಮಾಣ ಪತ್ರವನ್ನು ನೀಡಲಾಯಿತು.

ಜನವರಿ 26, 2024 ರಂದು ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ 75ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ರಾಮರಾವ್, ಎಲ್.ಟಿ. (ಕಬ್ಸ್), ಸಿಸ್ಟರ್ ಲೌರಿನಾ ಕುಟ್ಟಿನ, ಎಲ್.ಟಿ. (ಬುಲ್‌ಬುಲ್ಸ್) ನಾಯಕರಾಗಿ ಕಾರ್ಯನಿರ್ವಹಿಸಿದ್ದರು.








## ರಾಜ್ಯ ಕೇಂದ್ರ ಕಛೇರಿಯಲ್ಲಿ

# 75ನೇ ಗಣರಾಜ್ಯೋತ್ಸವ ಆಚರಣೆ

ರಾಜ್ಯ ಸಂಸ್ಥೆಯ ವತಿಯಿಂದ ಜನವರಿ 26 ರಂದು 75ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ರಾಜ್ಯ ಕೇಂದ್ರ ಕಛೇರಿ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಅತ್ಯಂತ ಸಂತೋಷ ಮತ್ತು ದೇಶಭಕ್ತಿಯಿಂದ ಆಚರಿಸಲಾಯಿತು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು, ಧ್ವಜಾರೋಹಣವನ್ನು ನೆರವೇರಿಸಿ, ಶುಭ ಸಂದೇಶವನ್ನು ನೀಡಿದರು. ಸಂದೇಶದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿದರು. ಡಾ॥ ಬಿ.ಆರ್. ಅಂಬೇಡ್ಕರ್ ಸಂವಿಧಾನವನ್ನು ರಚಿಸಿದ ಬಗ್ಗೆ, ಗಣತಂತ್ರ ದಿನದ ವಿಷಯ, ಕರುನಾಡಿನ ದೇಶಭಕ್ತರನ್ನು ಹಾಗೂ ಅವರು ತ್ಯಾಗದ ಬಗ್ಗೆ ತಿಳಿಸಿದರು. ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು. ಕ್ಲೂನಿ ಕಾನ್ವೆಂಟ್‌ನ ಫ್ಲಾಕ್ ಲೀಡರ್ ಶ್ರೀಮತಿ ಮೇರಿ ಫೀಲೋಮಿನ ಅವರ ಶಾಲೆಯ ಬುಲ್‌ಬುಲ್ಸ್‌ಗಳಿಂದ ಗ್ರೀಟಿಂಗ್ ಮೂಲಕ ಅತಿಥಿಗಳನ್ನು ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ಪೋಷಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಮಾಜಿ ಜಂಟಿ ರಾಜ್ಯ ಕಾರ್ಯದರ್ಶಿ ಶ್ರೀ ಎಂ.ಎ. ಚೆಲ್ಲಯ್ಯ, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಜಂಟಿ ರಾಜ್ಯ ಕಾರ್ಯದರ್ಶಿ (ಗೈ) ಡಾ. ಕೃಪಾ ವಿಜಯ್, ಸಹಾಯಕ ರಾಜ್ಯ ಗೈಡ್ ಆಯುಕ್ತೆ ಶ್ರೀಮತಿ ಕಮಲಾಕ್ಷಿ ಹೆಗಡೆ, ಹಿರಿಯ ನಾಯಕಿಯಾದ ಡಾ. ಬಿ.ಎಲ್. ಭಾಗ್ಯಲಕ್ಷ್ಮಿ, ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್, ಸಂಘಟನಾ ಮತ್ತು ತರಬೇತಿ ಆಯುಕ್ತರುಗಳಾದ ಶ್ರೀಮತಿ ಸಿ. ಮಂಜುಳಾ, ಶ್ರೀಮತಿ ಕೆ.ವಿ. ಶಾಮಲ, ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀ ಕೆ.ಹೆಚ್. ಜಯರಾಮಯ್ಯ, ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಯ ಪದಾಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.



ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ದೈ.ಶಿ/ಭಾ.ಸ್ಕೌ.ಗೈ/2023-24 ದಿನಾಂಕ: 04.12.2023.

**ಸುತ್ತೋಲೆ**

ವಿಷಯ: ದಿ ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್ ಸಂಸ್ಥೆಯು ನಡೆಸುವ ತರಬೇತಿ ಶಿಬಿರ ಮತ್ತು ಸಭೆಗಳಲ್ಲಿ ಭಾಗವಹಿಸುವವರಿಗೆ ಅನ್ಯಕಾರ್ಯನಿಮಿತ್ತ ಸೌಲಭ್ಯಒದಗಿಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರ ಕಛೇರಿ ಸುತ್ತೋಲೆ ದಿನಾಂಕ:08.06.2012

2. ರಾಜ್ಯ ಮುಖ್ಯಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/637/2023-24 ದಿನಾಂಕ:23.06.2023.

***************

ರಾಜ್ಯದ ಪ್ರಾಥಮಿಕ ಶಾಲೆ/ಪ್ರೌಢಶಾಲೆ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು-ಶಿಕ್ಷಕಿಯರು, ಮುಖ್ಯೋಪಾಧ್ಯಾಯರುಗಳು, ಮತ್ತು ತಾಲ್ಲೂಕು ಮಟ್ಟದ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್ ಕಾರ್ಯದರ್ಶಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಸಂಸ್ಥೆಯು ವಿವಿಧ ಹಂತಗಳಲ್ಲಿ ನಡೆಸುವ ವಿವಿಧ ಸಭೆ, ಶಿಬಿರ, ಸಂಕಿರಣ, ತರಬೇತಿ, ಕಾರ್ಯಾಗಾರ, ಸಮಾವೇಶ, ಮೇಳಗಳು, ಜಾಂಬೋರೇಟ್ ಮತ್ತು ಜಾಂಬೂರಿ ಹಾಗೂ ಪರೀಕ್ಷಾ ಶಿಬಿರಗಳು ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಧಿಯನ್ನು **"ಅನ್ಯಕಾರ್ಯನಿಮಿತ್ತ(OOD)"**ಎಂದು ಪರಿಗಣಿಸಲು ಕೋರಿರುತ್ತಾರೆ.

ಆದ್ದರಿಂದ ರಾಜ್ಯದ ಪ್ರಾಥಮಿಕ ಶಾಲೆ/ಪ್ರೌಢಶಾಲೆ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು-ಶಿಕ್ಷಕಿಯರು,ಮುಖ್ಯೋಪಾಧ್ಯಾಯರುಗಳು ಮತ್ತು ತಾಲ್ಲೂಕು ಮಟ್ಟದ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್ ಕಾರ್ಯದರ್ಶಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧಿಕಾರಿಗಳು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ನಡೆಸುವ ವಿವಿಧ ಸಭೆ, ಶಿಬಿರ, ಸಂಕಿರಣ, ತರಬೇತಿ, ಕಾರ್ಯಾಗಾರ, ಸಮಾವೇಶ, ಮೇಳಗಳು, ಜಾಂಬೋರೇಟ್ ಮತ್ತು ಜಾಂಬೂರಿಗಳು ಹಾಗೂ ಸ್ಕೌಟ್-ಗೈಡ್ ಪರೀಕ್ಷಾ ಶಿಬಿರಗಳು ಮುಂತಾದ ಕಾರ್ಯಕ್ರಮಗಳಲ್ಲಿ **ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ** ಭಾಗವಹಿಸುವ ಅವಧಿಯನ್ನು **"ಅನ್ಯಕಾರ್ಯನಿಮಿತ್ತ(OOD)"**ಎಂದು ಪರಿಗಣಿಸಲು ಆದೇಶಿಸಲಾಗಿದೆ.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

**ಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ

**ಪ್ರತಿಯನ್ನು:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು, ಇವರಿಗೆ ಮೇಲ್ಕಂಡ ವಿಷಯವನ್ನು ಮಾನ್ಯ ಶಿಕ್ಷಣ ಸಚಿವರ ಅವಗಾಹನೆಗೆ ತರಲು ಕೋರಿದೆ.

**ಮಾಹಿತಿಗಾಗಿ ಸಲ್ಲಿಸಿದೆ:**

1] ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು ರವರಿಗೆ.

2] ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ರವರಿಗೆ.

3] ನಿರ್ದೇಶಕರು (ಪ್ರೌಢ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು

4] ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು

5] ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಛೇರಿ, ನಂ.39, ಶಾಂತಿಗೃಹ ಅರಮನೆ ರಸ್ತೆ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ.

6] ಕಛೇರಿ ಪ್ರತಿ.

# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

ಡಿಸೆಂಬರ್ 29, 2023 ರಂದು ಹುನಗುಂದ ಸ್ಥಳೀಯ ಸಂಸ್ಥೆ ವತಿಯಿಂದ ಮತ್ತು ಎಸ್.ಆರ್. ವಸ್ತ್ರದ ಕಲಾ ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ ಹುನಗುಂದ ವತಿಯಿಂದ ಕರೋನಾ ಜಾಗೃತಿ ಜಾಥಾವನ್ನು ಮಾಡಲಾಯಿತು. ನಂತರ ಹಳ್ಳಿಗಳಿಗೆ ಸೈಕಲ್ ಮೂಲಕ ತಲುಪಿ ಕರೋನಾ ಕುರಿತು ಜಾಗೃತಿಯನ್ನು ಮೂಡಿಸಲಾಯಿತು. ಜಾಥಾವನ್ನು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಅರುಣೋದಯ ದುದ್ದಗಿರವರು ಚಾಲನೆ ನೀಡಿದರು. ಕಾಲೇಜಿನ ಪ್ರಾಚಾರ್ಯರಾದ ಶ್ರೀ ಹುಚ್ಚಪ್ಪ ಬೋಳಿಶೆಟ್ಟರ ಸಂಘಟಕರಾದ ಶ್ರೀ ಪ್ರಮೋದ ಚೌಗುತಿ ಪಿ.ಯು. ಮತ್ತು ಪದವಿ ವಿಭಾಗ ದಳನಾಯಕರುಗಳು, ಕಾಲೇಜಿನ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




## ಬಿ.ಬಿ.ಎಂ.ಪಿ. ಬೆಂಗಳೂರು

The B.B.M.P. District Association of the Bharat Scouts and Guides observed the 161st Swami Vivekananda Birth Day and the National Youth Day on 12th Jan 2024 at the Premises of the State Headquarters Bangalore.

Dhriyan Dehara, Bunny, student from B.B.M.P Nursery School, Doddakanahalli inaugurated the event by lighting the lamp in the presence of the officials from the State Headquarters and the District Headquarters and participants.

Cultural program was organized by the students of B.B.M.P High School Shakthi Ganapathi Nagar. Rashi, BBMP Nursery School, Adugodi spoke about Swami Vivekananda and Sri Yashwanth Rover, Smt., Neelamma Ranger from



B.B.M.P P.U college Magadi Road Spoke about "Save Water-Save Bengalore" Campaign.

Sri P.G.R. Sindhia, State Chief Commissioner The Bharat Scouts and Guides, Karnataka addressed the participants.

Sri K.Gangappa Gowda, State Secretary, Sri M.A Chellaiah, Senior Adult Leader (Scout) also addressed the participants. officials from the Education Department,Unit Leaders, Scouts, Guides, Rovers and Rangers from B.B.M.P High Schools and Junior College Magadi Road, Bunnies students from B.B.M.P Nursery schools, Padarayanapura, Adugodi, J.J.R Nagar, Doddakanahalli attended event.

"Save Water-Save Bangalore" Campaign was also organized A Poster Published by Banglore Water Supply and Sewerage Board on "Lets Start Water Conservation from Home" were distributed to all the participants.

Sri Munishamappa, District Secretary welcomed the Guests and the participants. Sri Ballappa, Subject Inspector of School Proposed the vote of thanks. Sri Manjunatha Coordinator assisted the Program.



## ಬೆಂಗಳೂರು ದಕ್ಷಿಣ

ಡಿಸೆಂಬರ್ 27 ರಿಂದ 30, 2023ರ ವರಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ದಳನಾಯಕರುಗಳಿಗೆ ರಾಜ್ಯ ತರಬೇತಿ ಕೇಂದ್ರ, ಜೇಡಿ ಮೆಟ್ಟಲು, ತೆಲಂಗಾಣ ರಾಜ್ಯ ಇಲ್ಲಿ 20ನೇ ಜಿಲ್ಲಾ ಮಟ್ಟದ ದಳನಾಕರುಗಳ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ದಳನಾಯಕರುಗಳ ಸಮಾವೇಶಕ್ಕೆ ಶ್ರೀ ಪಿ.ಜಿ.ಆರ್ ಸಿಂದ್ಯಾ, ರಾಜ್ಯ ಮುಖ್ಯ ಆಯುಕ್ತರು ಡಿಸೆಂಬರ್ 29, 2023 ರಂದು ಭೇಟಿ ನೀಡಿ ದಳನಾಯಕರುಗಳೊಂದಿಗೆ ಸಂವಾದ ನಡೆಸಿದರು. ಸಮಾವೇಶದಲ್ಲಿ ಶ್ರೀ ಎಂ.ಕೆ. ಖಾನ್ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಮಧುಸೂದನ್ ಜಿಲ್ಲಾ ಕೋಶಾಧಿಕಾರಿಗಳು ಹಾಗೂ ಅಪರ ಅಂತರಾಷ್ಟ್ರೀಯ ಆಯುಕ್ತರು ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಟಿ.ಕೆ. ನಾರಾಯಣಸ್ವಾಮಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಗಾಯತ್ರಿ ಗೌಡ, ಜಿಲ್ಲಾ ತರಬೇತಿ ಆಯುಕ್ತರು(ಗೈ), ದಳನಾಕರುಗಳು ಭಾಗವಹಿಸಿದರು.



* ಜನವರಿ 11 ರಿಂದ 17, 2024ರ ವರಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಜಾಗೃತಿ ಮೂಡಿಸುವ ಜಿಲ್ಲೆಯ ಎಲ್ಲಾ ದಳ ಮಟ್ಟದಲ್ಲಿ ಕಾರ್ಯಕ್ರಮವನ್ನು ಸಂಚಾರ ಪೊಲೀಸ್ ಸಹಕಾರದೊಂದಿಗೆ ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳಿಗೆ ಟ್ರಾಫಿಕ್ ಸಿಗ್ನಲ್ ಬಗ್ಗೆ  ರಸ್ತೆ ಸುರಕ್ಷತಾ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ನಂತರದಲ್ಲಿ ರಸ್ತೆ ಸುರಕ್ಷತಾ ಮತ್ತು ಸಂಚಾರ ನಿಯಮಗಳ ಬಗ್ಗೆ ಭಿತ್ತಿ ಪತ್ರಗಳನ್ನು ಹಿಡಿದು ಸಾರ್ವಜನಿಕರಿಗೆ ಅರಿವು ಮೂಡಿಸಲು ಜಾಥವನ್ನು ಹಮ್ಮಿಕೊಳ್ಳಲಾಯಿತು.




* ಜಿಲ್ಲಾ ಸಂಸ್ಥೆ ಮತ್ತು ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗದ ಸಹಯೋಗದೊಂದಿಗೆ ಜನವರಿ 16, 2024 ರಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಮಗಳ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆರ್.ವಿ. ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮವನ್ನು ಶ್ರೀ ಕೆ ಗಂಗಪ್ಪಗೌಡ,  ರಾಜ್ಯ




ಕಾರ್ಯದರ್ಶಿಗಳು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಮಹದೇವ್ ಟಿ., ಸಹಾಯಕ ಪೊಲೀಸ್ ಆಯುಕ್ತರು ಸಂಚಾರಿ ದಕ್ಷಿಣ ಉಪ ವಿಭಾಗ ಬೆಂಗಳೂರು ನಗರ, ಶ್ರೀ ಶ್ರೀನಿವಾಸ ರೆಡ್ಡಿ ಸಹಾಯಕ ಪೊಲೀಸ್ ಆಯುಕ್ತರು ಸಂಚಾರ ಎಚ್.ಎಸ್.ಆರ್. ಉಪ ವಿಭಾಗ ಬೆಂಗಳೂರು ನಗರ, ನೆಹರುಯುವ ಕೇಂದ್ರ ಮತ್ತು ನಿವ್ಹಾನ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳು, ಬೆಂಗಳೂರು ದಕ್ಷಿಣ ಜಿಲ್ಲೆಯ 481 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳನಾಯಕರುಗಳು ಹಾಗೂ ಚಂದ್ರು.ಪಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಉಪಸ್ಥಿತರಿದ್ದರು.



* ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ನವೆಂಬರ್ 21 ರಿಂದ 26, 2023ರ ವರೆಗೆ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಕೇಂದ್ರ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಪದಕ ತರಬೇತಿ ಶಿಬಿರ ಮತ್ತು ಸರ್ವೈವಲ್ ಕ್ಯಾಂಪ್‌ನ್ನು ಆಯೋಜಿಸಲಾಯಿತ್ತು. ನವೆಂಬರ್ 26, 2023 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಶಿಬಿರದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ರೋವರ್ಸ್–ರೇಂಜರ್ಸ್‌ಗಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಟಿ.ಕೆ. ನಾರಾಯಣಸ್ವಾಮಿ ಶಿಬಿರದ ನಿರ್ದೇಶಕರಾಗಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್. ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಮಧೂಸೂದನ್, ಜಿಲ್ಲಾ ಕೋಶಾಧಿಕಾರಿಗಳು ಹಾಗೂ ಅಪರ ಅಂತರಾಷ್ಟ್ರೀಯ ಆಯುಕ್ತರು, ದಳ ನಾಯಕರುಗಳು ಉಪಸ್ಥಿತರಿದ್ದರು.










## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಜನವರಿ 03 ರಿಂದ 09, 2024ರ ವರೆಗೆ ವಿಡಿಯಾ ಪೂರ್ಣಪ್ರಜ್ಞಾ ಸ್ಕೂಲ್ ನಾಗಸಂದ್ರ ಬೆಂಗಳೂರು ಇಲ್ಲಿ ಮೂಲ ತರಬೇತಿ ಶಿಬಿರ ನಡೆಯಿತು. ವಿಡಿಯಾ ಪೂರ್ಣಪ್ರಜ್ಞಾ ಸ್ಕೂಲ್ ನಾಗಸಂದ್ರ ಇಲ್ಲಿನ ಸಂಸ್ಥೆಯ ಪ್ರಾಂಶುಪಾಲರಾದ ಡಾ. ಶ್ರೀಧರ್ ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದವನ್ನು ವಿಡಿಯಾ ಪೂರ್ಣಪ್ರಜ್ಞಾ ಸ್ಕೂಲ್‌ನ ಲೇಡಿ ಮಾಸ್ಟರ್ ಶ್ರೀಮತಿ ಶೋಭ ಪಿ.ಪಿ. ನೀಡಿದ್ದರು. ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ 27, ಗೈಡ್ಸ್ ವಿಭಾಗದಲ್ಲಿ 19, ಕಬ್ ವಿಭಾಗದಲ್ಲಿ 15, ಬುಲ್‌ಬುಲ್ ವಿಭಾಗದಲ್ಲಿ 10 ಶಿಬಿರಾರ್ಥಿಗಳಿದ್ದು ನಾಯಕರಾಗಿ ಶ್ರೀ ಎಚ್.ವಿ. ಕೃಷ್ಣಪ್ಪ, ಶ್ರೀಮತಿ ಗಾಯತ್ರಿ ಗೌಡ, ಶ್ರೀ ಎಸ್.ಎಸ್. ಹುಸೇನಿ, ಶ್ರೀಮತಿ ಹೆರ್ಖಿಲ್, ಶ್ರೀಮತಿ ಸುಶೀಲ ಮಹಾದೇವ್ ಕಾರ್ಯನಿರ್ವಹಿಸಿದರು. ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ, ಉಡುಪಿಯಿಂದ ಶ್ರೀ ಬಿ. ಆನಂದ ಅಡಿಗ, ಶ್ರೀ ಸುಭಾಸ್, ಶ್ರೀ ರವಿಕುಮಾರ್, ಕಬ್, ಶ್ರೀ ರವಿ, ಶ್ರೀಮತಿ ಚಂದ್ರಕಲಾ, ಶ್ರೀಮತಿ ಜ್ಯೋತಿ ಎಚ್.ಕೆ., ಶ್ರೀಮತಿ ರಶ್ಮಿಲೋಬೋ ಹಾಗೂ ಶ್ರೀ ನಿತಿನ್ ಅಮಿನ್ ಸಹನಾಯಕರಾಗಿ ಸಹಕರಿಸಿದ್ದರು.



* ಜನವರಿ 08, 2024 ರಂದು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ಇವರು ಶಿಬಿರಕ್ಕೆ ಬೇಟಿ ನೀಡಿ ಶಿಬಿರಾರ್ಥಿಗೆ ಶುಭಾಶಯ ಕೋರಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಸನ್ನಕುಮಾರ್ ಶಿಬಿರಕ್ಕೆ ಅತಿಥಿಯಾಗಿ ಆಗಮಿಸಿ ಶಿಬಿರದ ನಾಯಕರಿಗೆ ಹಾಗೂ ಸಹ ನಾಯಕರಿಗೆ ನೆನೆಪಿನ ಕಾಣಿಕೆ ನೀಡಿ ಗೌರವಿಸಿದರು. ಶಿಬಿರಕ್ಕೆ ಸ್ಕೌಟ್ ಆಯುಕ್ತರು ಶ್ರೀ ಹೇಮಂತ್ ಇವರು ಹಾಗೂ ಶ್ರೀ ಮಲ್ಲೇಶ್ವರಮ್ ವಲಯದ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಶ್ರೀಮತಿ ಗಾಯತ್ರಿ ಇವರು ಭೇಟಿ ನೀಡಿದರು.

ಜನವರಿ 08, 2024 ರಂದು ಫ್ಲಾರೆನ್ಸ್ ಆಂಗ್ಲ ಮಾಧ್ಯಮ ಶಾಲೆ ಸಂಜಯನಗರ ಬೆಂಗಳೂರು ಉತ್ತರ ಜಿಲ್ಲೆ ಇವರು ಅಕ್ಕಯ್ಯಮ್ಮನ ಬೆಟ್ಟಕ್ಕೆ ಹೊರಸಂಚಾರ ಮಾಡಿದರು. ಶ್ರೀ ಸತೀಶ್, ಸ್ಕೌಟ್ಸ್ ಮಾಸ್ಟರ್ ಈ ಕಾರ್ಯಕ್ರಮವನ್ನು ಆಯೋಜಿಸಿದರು.

* ಬೆಂಗಳೂರು ಉತ್ತರ ಜಿಲ್ಲೆ ಮಲ್ಲೇಶ್ವರ ಸಂಚಾರಿ ಠಾಣೆ ಮತ್ತು ಸರಕಾರಿ ಮಹಿಳಾ ಪದವಿಪೂರ್ವ ಕಾಲೇಜು 13ನೇ ಕ್ರಾಸ್ ಮಲ್ಲೇಶ್ವರ ಇವರ ಜಂಟಿ ಆಶ್ರಯದಲ್ಲಿ ಜನವರಿ 12, 2024 ರಂದು ರಸ್ತೆ ಸುರಕ್ಷತಾ ಸಪ್ತಾಹ–2024 ಜನಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಜಾಥಾಕ್ಕೆ ಶ್ರೀ ದಿನೇಶ್, ಸಂಚಾರಿ ಇನ್ಸ್ಪೆಕ್ಟರ್, ಮಲ್ಲೇಶ್ವರ ಇವರು ಚಾಲನೆ




ನೀಡಿದರು. ತದ ನಂತರ ಸರಕಾರಿ ಮಹಿಳಾ ಪದವಿಪೂರ್ವ ಕಾಲೇಜು 13ನೇ ಕ್ರಾಸ್ ಮಲ್ಲೇಶ್ವರ ಇಲ್ಲಿ ರೋವರ್–ರೇಂಜರ್, ಸ್ಕೌಟ್ಸ್–ಗೈಡ್ಸ್, ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲ ಮಾಹಿತಿ ನೀಡಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನ ಕುಮಾರ್ ರಸ್ತೆ ಸುರಕ್ಷತಾ ಬಗ್ಗೆ ತಿಳಿದುಕೊಳ್ಳುವುದು ಅತಿ ಅಗತ್ಯ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ರಶ್ಮಿ ಇವರು "ತಮ್ಮ ಬಾಲ್ಯದಲ್ಲಿ ಸ್ಕೌಟಿಂಗ್‌ನ ಅನುಭವ ನೀಡಿದರು. ಹಾಗೂ ರಸ್ತೆಯ ನೀತಿ ನಿಯಮ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯ" ಎಂದರು. ಶ್ರೀಮತಿ ಲೀಲಾ ರೇಂಜರ್ ಲೀಡರ್ ಕಾರ್ಯಕ್ರಮನ್ನು ನಿರೂಪಿಸಿದರು, ಶ್ರೀ ಬಿ.ಕೆ. ಶೇಷಾದ್ರಿ ಇವರು ಧನ್ಯವಾದ ಸಲ್ಲಿಸಿದರು.

* ಜನವರಿ 11, 2024 ರಂದು ರಾಯನ್ ಅಂತರಾಷ್ಟ್ರೀಯ ಶಾಲೆ ಯಲಹಂಕ ಇಲ್ಲಿ ಸ್ಕೌಟ್ಸ್–ಗೈಡ್ಸ್ ಕಬ್–ಬುಲ್‌ಬುಲ್ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಾಯಿತು. ಶಾಲಾ ಪ್ರಾಂಶುಪಾಲರು ಇಂತಹ ಕಾರ್ಯಕ್ರಮದಿಂದ ಮಕ್ಕಳಲ್ಲಿ ರಸ್ತೆ ಸುರಕ್ಷತಾ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುತ್ತದೆ ಎಂದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾದ ಶ್ರೀ ಮೋಹನ್ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.



ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್ ಶಿವಾಜಿನಗರ ಇದರ ವಾರ್ಷಿಕ ಶಿಬಿರವನ್ನು ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ದಿನಾಂಕ ಜನವರಿ 12 ಹಾಗೂ 13 ರಂದು ನಡೆಸಲಾಯಿತು.

* ಜ್ಞಾನ ಜ್ಯೋತಿ ಸ್ಕೂಲ್ ಯಲಹಂಕ ಇಲ್ಲಿನ ಸ್ಕೌಟ್ಸ್–ಗೈಡ್ಸ್ ಘಟಕದಿಂದ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಪ್ರಾತ್ಯಕ್ಷಿತೆ ಮೂಲ ಮಾಹಿತಿ ನೀಡಲಾಯಿತು. ಹಾಗೂ ಜನಜಾಗೃತಿ ಜಾಥಾ ಮಾಡಲಾಯಿತು. ಶಾಲಾ ಮುಖ್ಯ ಶಿಕ್ಷಕರು ಕಾರ್ಯಕ್ರಮಕ್ಕೆ ಶುಭಾಶಯ ಕೋರಿದರು. ಶ್ರೀಮತಿ ಶೀಲಾ ಗೈಡ್ಸ್ ಕ್ಯಾಪ್ಟನ್ ಕಾರ್ಯಕ್ರಮವನ್ನು ಸಂಘಟಿಸಿದರು.

ಮಲ್ಲೇಶ್ವರ ಸ್ಥಳೀಯ ಸಂಸ್ಥೆ ಹಾಗೂ ವಿದ್ಯಾ ಮಂದಿರ ಸ್ಕೂಲ್ ಇವರ ಜಂಟಿ ಆಶ್ರಯದಲ್ಲಿ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ






ಸಿಬ್ಬಂದಿ ಶ್ರೀ ಮಲ್ಲಪ್ಪ ಅಲ್ಕೋಡ್ ಇವರಿಂದ ಮಾಹಿತಿ ನೀಡಲಾಯಿತು. ಹಾಗೂ ಜನಜಾಗೃತಿ ಜಾಥಾ ಮಾಡಲಾಯಿತು. ಜಾಥಾ ಕಾರ್ಯಕ್ರಮಕ್ಕೆ ಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಉಮಾ ಬಿ.ಎಸ್. ಚಾಲನೆ ನೀಡಿದರು. ಶಾಲಾ ಸ್ಕೌಟ್ಸ್ ಮಾಸ್ಟರ್‌ರಾದ ಶ್ರೀ ಚಂದ್ರಶೇಖರ್, ಶ್ರೀಮತಿ ಶಾರದ, ಇವರು ಕಾರ್ಯಕ್ರಮದಲ್ಲಿ ಸಹಕರಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ಸಂಘಟಿಸಿದರು.

* ಜನವರಿ 12 ರಂದು ಬಾಣಸವಾಡಿ ಸ್ಥಳೀಯ ಸಂಸ್ಥೆ ವತಿಯಿಂದ ರಾಷ್ಟ್ರೀಯ ಯುವದಿನವನ್ನು ಆಚರಿಸಲಾಯಿತು. ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಹಾಗೂ ಅವರ ಸಾಹಸ ಬಗ್ಗೆ ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಅಗತಮೇರಿ ಸ್ಥಳೀಯ ಸಂಸ್ಥೆ ಖಜಾಂಚಿ ಶುಭಾಶಯ ಕೋರಿದರು. ಶಾಲಾ ಪ್ರಾಂಶುಪಾಲರು ಶುಭಾಶಯ ಕೋರಿದರು. ಸ್ಕೌಟ್ ಮಾಸ್ಟರ್ ಶ್ರೀ ಸುಬ್ರಮಣ್ಯ ಇವರು ಕಾರ್ಯಕ್ರಮಕ್ಕೆ ಸಹಕರಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವರ್ದಮಾನ್ ಕಳಸೂರ್ ಸಂಘಟಿಸಿದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ ಡಿಸೆಂಬರ್ 17, 2023 ರಂದು ಗಂಟಿಗಾನಹಳ್ಳಿಯಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 18 ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.



## ಬೆಂಗಳೂರು ಪೂರ್ವ

ಡಿಸೆಂಬರ್ 13, 2023ರಂದು ಆನೇಕಲ್‌ನ ಸರ್ಕಾರಿ ಹೊಸ ಮಾಧ್ಯಮಿಕ ಪಾಠ ಶಾಲಾ ಆವರಣದಲ್ಲಿ ಸ್ಥಳೀಯ ಸಂಸ್ಥೆಯ ಸ್ಕೌಟ್, ಗೈಡ್ ವಾರ್ಷಿಕ ಮೇಳವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು,

* ಡಿಸೆಂಬರ್ 16 ರಿಂದ 17, 2023ರ ವರೆಗೆ ಆನೇಕಲ್‌ನ ಸರಸ್ವತಿ ವಿದ್ಯಾಮಂದಿರ ಶಾಲೆಯ ಸ್ಕೌಟ್ಸ್, ಗೈಡ್ಸ್, ಕಬ್ಸ್ ಮತ್ತು ಬುಲ್‌ಬುಲ್‌ಗಳು ನೆರೆಯ ರಾಜ್ಯದ ಗಡಿ ಭಾಗದಲ್ಲಿರುವ ದೇವರಬೆಟ್ಟದಲ್ಲಿ ಎರಡು ದಿನಗಳ ಅರಣ್ಯಚಾರಣ ಮತ್ತು ಪ್ರಕೃತಿ ಅಧ್ಯಯನ ಶಿಬಿರವನ್ನು ಆಯೋಜಿಸಿದ್ದರು. ಸುಮಾರು 230 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಶಿಬಿರದ ನೇತೃತ್ವ ವಹಿಸಿದ್ದರು.

* ಜನವರಿ 11, 2024 ರಂದು ಧನುರ್ಮಾಸ ಅಮಾವಾಸ್ಯೆ ಪ್ರಯುಕ್ತ ಶ್ರೀ ಕಕ್ಕಮಲ್ಲೇಶ್ವರಸ್ವಾಮಿ ದೇವಾಲಯದ ಆಡಳಿತ ಮಂಡಳಿ ವತಿಯಿಂದ 215ನೇ ಜಾತ್ರಾ ಮಹೋತ್ಸವವನ್ನು ಆಯೋಜಿಸಲಾಗಿತ್ತು. ಎಸ್.ಜಿ.ವಿ. ಶ್ರೀ ಮನು ನೇತೃತ್ವದಲ್ಲಿ ಭಗತ್‌ಸಿಂಗ್ ಓಪನ್ ಸ್ಕೌಟ್ ಗ್ರೂಪಿನ ಸ್ಕೌಟ್ಸ್ ಈ ಜಾತ್ರಾ ಮಹೋತ್ಸವದಲ್ಲಿ ಸೇವೆ ಸಲ್ಲಿಸಿದರು.

* ಡಿಸೆಂಬರ್ 29, 2023 ರಂದು ಅತ್ತಿಬೆಲೆಯ ಶ್ರೀ ಶಿಡ್ಲಬಸಪ್ಪ ಕಲ್ಯಾಣ ಮಂಟಪದಲ್ಲಿ ಸ್ಥಳೀಯ ಸಂಸ್ಥೆಯ ಸ್ಕೌಟ್, ಗೈಡ್ ವಾರ್ಷಿಕ ಮೇಳವನ್ನು ಆಯೋಜಿಸಲಾಗಿತ್ತು. ಅತ್ತಿಬೆಲೆ ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ಮಾಲಾರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

* ಜನವರಿ 03, 2024 ರಂದು ಅತ್ತಿಬೆಲೆಯ ಸೆಂಟ್ ಡಾಮಿನಿಕ್ಸ್ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಎಸ್. ಮಂಜುನಾಥ್ ನೇತೃತ್ವದಲ್ಲಿ ಇದೇ ಶಾಲೆಯ ಸ್ಕೌಟ್ಸ್, ಗೈಡ್ಸ್ ಬೆಳಗ್ಗೆ ಶಾಲೆಯಿಂದ ಆದು ಗೊಂಡನಹಳ್ಳಿವರೆಗೆ ಸೈಕಲ್ ಪ್ರವಾಸಕೈಗೊಂಡರು. ಇದೇ ದಿನ ಸಂಜೆ ಶಾಲಾ ಆವರಣದಲ್ಲಿ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ತ್ರಿವೇಣಿ, ಗೈಡ್ ಕ್ಯಾಪ್ಟನ್ ಶ್ರೀಮತಿ ಶಾಂತಕುಮಾರಿ ಮೊದಲಾದವರು ಉಪಸ್ಥಿತರಿದ್ದರು.

* ಜನವರಿ 06, 2024 ರಂದು ಸೂರ್ಯಾಸಿಟಿಯ ಸುರಾನಾ ವಿದ್ಯಾಲಯದ ಸುಮಾರು 40 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಗೈಡ್ ಕ್ಯಾಪ್ಟನ್ ಶ್ರೀಮತಿ ಸೌಮ್ಯ ಎ. ರೆಡ್ಡಿ ಹಾಗೂ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಪವಿತ್ರ. ಎ.ಸಿ.ರವರ ನೇತೃತ್ವದಲ್ಲಿ ಸೂರ್ಯಾಸಿಟಿ ಫೇಸ್-1 ರಿಂದ ಸೂರ್ಯಾಸಿಟಿ ಫೇಸ್-2 ವರೆಗೆ ಸೈಕಲ್ ಹೈಕ್ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ಪೂರೈಸಿದರು. ಪ್ರಾಂಶುಪಾಲರಾದ ಸಂದೀಪ್ ಪೈರವರು ಕಾರ್ಯಕ್ರಮವನ್ನು ಉದ್ಘಾಟಿಸಿರು.

* ಡಿಸೆಂಬರ್ 28, 2023 ರಂದು ದೊಮ್ಮಸಂದ್ರದ ಅರಾ ವಿದ್ಯಾನಿಕೇತನ ಶಾಲಾ ಆವರಣದಲ್ಲಿ ಸ್ಥಳೀಯ ಸಂಸ್ಥೆಯ ಸ್ಕೌಟ್, ಗೈಡ್



ವಾರ್ಷಿಕ ಮೇಳವನ್ನು ಆಯೋಜಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಜೆ.ಎಂ. ಜಯಲಕ್ಷ್ಮಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

* ಜನವರಿ 12, 2024 ರಂದು ಮಂಟಪದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲಾ ಆವರಣದಲ್ಲಿ ಸ್ಥಳೀಯ ಸಂಸ್ಥೆಯ ಸ್ಕೌಟ್, ಗೈಡ್ ವಾರ್ಷಿಕ ಮೇಳ ಹಾಗೂ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

* ಡಿಸೆಂಬರ್ 20, 2023 ರಂದು ಹೆಬ್ಬಗೋಡಿಯ ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಸ್ಥಳೀಯ ಸಂಸ್ಥೆಯ ಸ್ಕೌಟ್, ಗೈಡ್ ವಾರ್ಷಿಕ ಮೇಳ ಆಯೋಜಿಸಲಾಗಿತ್ತು. ಸಹಾಯಕ ಜಿಲ್ಲಾ ಆಯುಕ್ತೆ ಶ್ರೀಮತಿ ಅರ್ಚನಾ ನಾಯಕ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

* ಜನವರಿ 11 ರಿಂದ 17, 2024ರ ವರೆಗೆ ನಡೆದ ಸುರಕ್ಷತಾ ಸಪ್ತಾಹದ ಪ್ರಯುಕ್ತ ಕಮ್ಮಸಂದ್ರದ ರಾಯಲ್ ಪಬ್ಲಿಕ್ ಸ್ಕೂಲ್‌ನ ಸ್ಕೌಟ್ಸ್, ಗೈಡ್ಸ್ ಸೂರ್ಯಾಸಿಟಿ ಪೊಲೀಸರಿಗೆ ನೆರವಾಗುವ ಮೂಲಕ ಇಲ್ಲಿನ ಟ್ರಾಫಿಕ್ ಸಿಗ್ನಲ್‌ಗಳು ಹಾಗೂ ಜನ ದಟ್ಟಣೆ ಇರುವ ಕಡೆ ವಾಹನ ಚಾಲಕರಿಗೆ ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದರು.



## ಚಿಕ್ಕಮಗಳೂರು

ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಮೂಡಿಗೆರೆ ಇವರ ಆಶ್ರಯದೊಂದಿಗೆ ತಾಲೂಕು ಮಟ್ಟದ ಇಂಪಿಸ ಕ್ಯಾಂಪೋರಿ ಜನವರಿ 06 ರಿಂದ 07, 2024ರ ತನಕ ಮೂಡಿಗೆರೆ ತಾಲೂಕಿನ ಎಲ್ಲೈಟ್‌ಮೆಂಟ್ ಶಾಲೆಯಲ್ಲಿ ನಡೆಯಿತು. ಇದರ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎ. ಷಡಕ್ಷರಿ ಅವರು ನೆರವೇರಿಸಿದರು. ಮೂಡಿಗೆರೆ



ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಗ್ಗಲಮಕ್ಕಿ ಗಣೇಶ್ ಅಧ್ಯಕ್ಷತೆಯನ್ನು ವಹಿಸಿದ್ದರು. ತಾಲ್ಲೂಕು ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಶೃಂಗೇರಿ ತಾಲೂಕು ಮಟ್ಟದ ರಸ್ತೆ ಸುರಕ್ಷತಾ ಸಪ್ತಾಹ ಉದ್ಘಾಟನಾ ಕಾರ್ಯಕ್ರಮ ಶೃಂಗೇರಿಯ ಜೇಸೀಸ್ ಶಾಲೆಯಲ್ಲಿ ನಡೆಯಿತು. ಶೃಂಗೇರಿ ಠಾಣೆಯ ಪಿ.ಎಸ್.ಐ. ಜಕ್ಕಣ್ಣ ಸಪ್ತಾಹ ಉದ್ಘಾಟಿಸಿ ಮಕ್ಕಳಿಗೆ ರಸ್ತೆ ಸುರಕ್ಷತಾ ನಿಯಮದ ಕುರಿತು ಸವಿಸ್ತಾರವಾಗಿ ಮಕ್ಕಳಿಗೆ ತಿಳಿಸಿದರು. ಅಧ್ಯಕ್ಷತೆಯನ್ನು ಜೇಸೀಸ್ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಜಿ. ವಿನಯ್ ವಹಿಸಿದ್ದರು. ಶ್ರೀಯುತ ಸುಬ್ರಮಣ್ಯ ಎಸ್.ಎಸ್. ಸ್ವಾಗತಿಸಿದರು. ವಂದನಾರ್ಪಣೆಯನ್ನು ಶ್ರೀಮತಿ ರಾಜೇಶ್ವರಿ ನೆರವೇರಿಸಿದರು.



* ತಾಲ್ಲೂಕು ಸ್ಥಳೀಯ ಸಂಸ್ಥೆ ಮೂಡಿಗೆರೆ ವತಿಯಿಂದ ಮೂಡಿಗೆರೆ ತಾಲೂಕಿನ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳಿಗೆ ಮೂಡಿಗೆರೆ ತಾಲೂಕಿನ ಆರಕ್ಷಕ ಠಾಣೆಯಲ್ಲಿ ರಸ್ತೆ ಅಪಘಾತ ಜಾಗೃತಿ ಅದರ ಅಪರಾಧಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಹಮೀದ್ ಸಾಬ್ಬೆನಹಳ್ಳಿ ಹಾಗೂ ತಾಲೂಕಿನ ಸ್ಕೌಟ್ಸ್ ಮತ್ತು ಗೈಡ್ಸ್ ಕ್ಯಾಪ್ಟನ್ ಹಾಜರಿದ್ದರು ಸುಮಾರು 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಸಂಸ್ಥೆ ಚಿಕ್ಕಮಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ರಸ್ತೆ ಸುರಕ್ಷತಾ ಸಪ್ತಾಹಕ್ಕೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಸ್ಕೌಟ್ ಆಯುಕ್ತರಾದ ಶ್ರೀ ಎ.ಎನ್. ಮಹೇಶ್ ರವರು ಚಾಲನೆ ನೀಡಿದರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ವಿಕ್ರಂ ಹಾಗೂ ಹೆಚ್ಚುವರಿ ಪೊಲೀಸ್‌ವರಿಷ್ಠಾಧಿಕಾರಿಗಳಾದ ಶ್ರೀ ಕೃಷ್ಣಮೂರ್ತಿ ಹಾಗೂ ಜಿಲ್ಲಾ ಸಂಘಟಕರಾದ ಶ್ರೀ ಬಿ.ಎಂ. ಕಿರಣ್ ಕುಮಾರ್ ನಿಹಾಲ್ ಎನ್.ಎಸ್. ಹಾಗೂ ವಿವಿಧ ಶಾಲೆಗಳಿಂದ ಬಂದಂತಹ ಸ್ಕೌಟ್ಸ್ ಮಾಸ್ಟರ್ ಹಾಗೂ ಗೈಡ್ಸ್ ಕ್ಯಾಪ್ಟನ್‌ಗಳು ಉಪಸಿತರಿದ್ದರು




## ಚಿತ್ರದುರ್ಗ

"ಪ್ರತಿ ವರ್ಷವು ಲಕ್ಷಾಂತರ ಜನರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪುತ್ತಿದ್ದು, ಅಪಘಾತ ತಡೆಗಟ್ಟುವಂತಾಹ ರಸ್ತೆ ಸುರಕ್ಷತೆಯ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ಸಪ್ತಾಹದ ಮುಖ್ಯ ಉದ್ದೇಶವಾಗಿದೆ" ಎಂದು ಶ್ರೀ ನರೇಂದ್ರ ಬಾಬು, ಸಂಚಾರಿ ಪೊಲೀಸ್ ಉಪನಿರೀಕ್ಷರು ಹೇಳಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಜಿಲ್ಲಾ ಸಂಸ್ಥೆ, ಚಿತ್ರದುರ್ಗ ಹಾಗೂ ಸರ್ಕಾರಿ ಕಲಾ ಕಾಲೇಜು ಚಿತ್ರದುರ್ಗ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಚಿತ್ರದುರ್ಗ, ಸಾರಿಗೆ ಇಲಾಖೆ ಚಿತ್ರದುರ್ಗ ಇವರುಗಳ ಸಹಯೋಗದೊಂದಿಗೆ ನಡೆದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



* ಜಿಲ್ಲಾ ಸಂಸ್ಥೆಯ ಹೆಚ್‌ಕ್ಯೂಸಿ ಶ್ರೀ ಸತ್ಯನಾರಾಯಣ ನಾಯ್ಡು ಮಾತನಾಡಿ, "ವಾಹನ ಚಾಲಕರು ಮತ್ತು ಪಾದಚಾರಿಗಳು ರಸ್ತೆ ಸುರಕ್ಷತೆಯ ನಿಯಮಗಳನ್ನು ಪಾಲಿಸಿದ್ದಲ್ಲಿ ಅಪಘಾತಗಳನ್ನು ತಡೆಗಟ್ಟಬಹುದು" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ಪರಮೇಶ್ವರಪ್ಪ, ರಾಜ್ಯ ಪರಿಷತ್ ಸದಸ್ಯರಾದ ಶ್ರೀ




ಬಸವರಾಜ್, ಜಿಲ್ಲಾ ಸಹಕಾರ್ಯದರ್ಶಿ ಡಾ. ರಹಮತ್ ಉಲ್ಲಾ, ಜಿಲ್ಲಾ ಸಂಘಟಕರಾದ ಪಾಟೀಲ್ ಜಿ.ಬಿ.ಸಿ., ರೋವರ್ಸ್ ಲೀಡರ್ ಗಂಗಾಧರ್, ರೇಂಜರ್ಸ್ ಲೀಡರ್ ಶ್ರೀಮತಿ ಲೀಲಾವತಿ, ಪೊಲೀಸ್ ಸಿಬ್ಬಂದಿಗಳು ಮತ್ತು ರೋವರ್ಸ್ ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಚಳ್ಳಕೆರೆ ಹಾಗೂ ರೋವರ್ಸ್-ರೇಂಜರ್ಸ್ ಘಟಕ ಹಾಗೂ ಪೊಲೀಸ್ ಇಲಾಖೆ ವತಿಯಿಂದ ನಡೆದ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ದಳ ನಾಯಕರಾದ ಪ್ರೋ, ಜಗನ್ನಾಥ್, ಪ್ರೋ, ಜಮುನಾರಾಣಿ ಮತ್ತು ರೋವರ್ಸ್ ಮತ್ತು ರೆಂಜರ್ಸ್‌ಗಳು ಭಾಗವಹಿಸಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಹೊಸದುರ್ಗ ಹಾಗೂ ರೋವರ್ಸ್-ರೇಂಜರ್ಸ್ ಘಟಕ ಹಾಗೂ ಪೊಲೀಸ್ ಇಲಾಖೆ ವತಿಯಿಂದ ನಡೆದ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ದಳ ನಾಯಕರಾದ ಪ್ರೊ. ನಂದಿನಿ, ಮತ್ತು ರೋವರ್ಸ್ ಮತ್ತು ರೆಂಜರ್ಸ್‌ಗಳು ಭಾಗವಹಿಸಿದ್ದರು.



## ದಾವಣಗೆರೆ

ಡಿಸೆಂಬರ್ 13, 2023 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬುಕ್ ಬೈಂಡರ್ ಪದಕ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಶ್ರೀ ಕೊಟ್ರಯ್ಯ ಸ್ಕೌಟ್ ಮಾಸ್ಟರ್, ಶ್ರೀಮತಿ ಮಂಜುಳ ಗೈಡ್ ಕ್ಯಾಪ್ಟನ್ ಮಾರ್ಗದರ್ಶನ ಮಾಡಿದರು.

* ಡಿಸೆಂಬರ್ 18 ರಿಂದ 20, 2023 ರವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ 2023-2024 ನೇ ಸಾಲಿನ ಜಿಲ್ಲಾಪುರಸ್ಕಾರ ಪರೀಕ್ಷಾ ಶಿಬಿರ, ಕಬ್ಸ್ ಮತ್ತು ಬುಲ್‌ಬುಲ್ಸ್ ಪದಕ ತರಬೇತಿ ಶಿಬಿರ, ರೋವರ್ಸ್ ರೇಂಜರ್ ನಿಪುಣ್ ಪರೀಕ್ಷಾ ಶಿಬಿರ, ರಾಜ್ಯಪುರಸ್ಕಾರ ಪೂರ್ವಭಾವಿ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದ ನಾಯಕರುಗಳಾಗಿ ಸ್ಕೌಟ್ ವಿಭಾಗದ ಶ್ರೀ ಕೊಟ್ರಯ್ಯ.ಎಂ.ವಿ, ಗೈಡ್ ವಿಭಾಗದ ನಾಯಕರಾಗಿ

ಶ್ರೀಮತಿ ವೇದಾವತಿ, ಕಬ್ ವಿಭಾಗದ ನಾಯಕರಾಗಿ ಶ್ರೀ ಸೀನನಾಯ್ಕ್, ಬುಲ್‌ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ಸಿದ್ದಮ್ಮ, ಕಬ್ಸ್ ಬುಲ್‌ಬುಲ್ಸ್ ಪದಕ ತರಬೇತಿ ಶಿಬಿರದ ನಾಯಕರಾಗಿ ಶ್ರೀಮತಿ ರೇಷ್ಮ, ನಿಪುಣ್ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ಸುರೇಶ್ ರೋವರ್ ಸ್ಕೌಟ್ ಲೀಡರ್, ರಾಜ್ಯ ಪುರಸ್ಕಾರ ರೋವರ್ ರೇಂಜರ್ ಪೂರ್ವಭಾವಿ ಪರೀಕ್ಷಾ ಶಿಬಿರದ ರೋವರ್ ವಿಭಾಗದ ನಾಯಕರಾಗಿ ಶ್ರೀ ರಾಜೇಶ್ ಅವಲಕ್ಕಿ ರೋವರ್ ಸ್ಕೌಟ್ ಲೀಡರ್, ರೇಂಜರ್ ವಿಭಾಗದ ನಾಯಕರಾಗಿ ಡಾ॥ ಶಕುಂತಲಾ ಕಾರ್ಯನಿರ್ವಹಿಸಿದರು.



ಡಿಸೆಂಬರ್ 20, 2023 ರಂದು ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಪದಾಧಿಕಾರಿಗಳು ಸ್ಕೌಟರ್ಸ್-ಗೈಡರ್ಸ್‌ಗಳು, ರೋವರ್ ಸ್ಕೌಟ್ ಲೀಡರ್ ರೇಂಜರ್ ಲೀಡರ್ಸ್‌ಗಳು ಭಾಗವಹಿಸಿದ್ದರು.



* ಡಿಸೆಂಬರ್ 28, 2023 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಬಾಪೂಜಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕುಕ್ ಬ್ಯಾಡ್ಜ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು.

* ಜನವರಿ 01 ರಿಂದ 07, 2024ರ ವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ಮತ್ತು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು ಚನ್ನಗಿರಿ ತಾಲ್ಲೂಕಿನ ಕಾಕನೂರು ಶ್ರೀ ವಿಶ್ವಗುರು ಬಸವೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಸ್ಕೌಟ್ ಮಾಸ್ಟರ್ ವಿಭಾಗದ ನಾಯಕರಾಗಿ ಶ್ರೀ



ಶಿವಶಂಕರ್ ಮತ್ತು ಶ್ರೀ ಡಿ.ಎಸ್. ಒಡಕನ್ನನವರ್, ಗೈಡ್ ಕ್ಯಾಪ್ಟನ್ ವಿಭಾಗದ ನಾಯಕರಾಗಿ ಶ್ರೀಮತಿ ಸಾವಿತ್ರಮ್ಮ, ಕಬ್ ವಿಭಾಗದ ನಾಯಕರಾಗಿ ಶ್ರೀ ಕೃಷ್ಣಮೂರ್ತಿ ಮತ್ತು ಫ್ಲಾಕ್ ಲೀಡರ್ ವಿಭಾಗದ ನಾಯಕರಾಗಿ ಶ್ರೀಮತಿ ಸಿದ್ದಮ್ಮ ಕಾರ್ಯನಿರ್ವಹಿಸಿದರು. ಜನವರಿ 07 ರಂದು ಶಿಬಿರದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಜಯಪ್ಪ.ಎಲ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಚನ್ನಗಿರಿ ತಾಲ್ಲೂಕು, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಶಿಬಿರವನ್ನು ಸಂಘಟಿಸಿದರು.

* ಜನವರಿ 11, 2024 ರಂದು ದಕ್ಷಿಣ ಸಂಚಾರ ಪೊಲೀಸ್ ಠಾಣೆ ಮತ್ತು ದಾವಣಗೆರೆ ಜಿಲ್ಲಾ ಸಂಸ್ಥೆ ಸಹಯೋಗದೊಂದಿಗೆ ರಸ್ತೆ ಸುರಕ್ಷತಾ ಸಪ್ತಾಹವನ್ನು ನಗರದ ಗುಂಡಿ ಸರ್ಕಲ್‌ನಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಉಮಾ ಪ್ರಶಾಂತ್ ಐ.ಪಿ.ಎಸ್, ಎಂ.ಡಿ. ವಿಜಯ್ ಕುಮಾರ್ ಪ್ರಭಾರ ಪೋಲೀಸ್ ವರಿಷ್ಠಾಧಿಕಾರಿಗಳು, ಗ್ರಾಮಾಂತರ ಡಿ.ವೈ.ಎಸ್.ಪಿ. ಶ್ರೀ ಬಸವರಾಜ್, ನಗರದ ವಿವಿಧ ಶಾಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, ಸ್ಕೌಟರ್ಸ್ ಗೈಡರ್ಸ್‌ಗಳು ಭಾಗವಹಿಸಿದ್ದರು.




* ಜನವರಿ 12, 2024 ರಂದು ವಿವೇಕಾನಂದ ಜಯಂತಿ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆಯನ್ನು ದಾವಣಗೆರೆ ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆಗಳು, ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, ಕಬ್ಸ್ ಬುಲ್‌ಬುಲ್ಸ್‌ಗಳು ಸ್ಕೌಟರ್ಸ್ ಗೈಡರ್ಸ್‌ಗಳೊಂದಿಗೆ ಆಚರಿಸಿದರು. ಶಿಕ್ಷಕರು ಮಕ್ಕಳಿಗೆ ವಿವೇಕಾನಂದರ ಬಗ್ಗೆ ಮಾಹಿತಿ ನೀಡಿದರು.

## ಗದಗ

ಜನವರಿ 12, 2024 ರಂದು ಗದಗ ಗ್ರಾಮೀಣ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಣಿವಿಯಲ್ಲಿ ಕಿರಣ್ ಬೇಡಿ ಗೈಡ್ ಕಂಪನಿ ಮತ್ತು ಸಂಗೊಳ್ಳಿ ರಾಯಣ್ಣ ಸ್ಕೌಟ್ ದಳದ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು. ಜೊತೆಗೆ ರಾಷ್ಟ್ರ ರಕ್ಷಣೆಗಾಗಿ ವೀರಮರಣ ಹೊಂದಿದ ಕ್ಯಾಪ್ಟನ್ ಎಂ.ಪಿ. ಪ್ರಾಂಜಲ್ ಅವರಿಗೆ ನಮನ ಸಲ್ಲಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ವೇಷಭೂಷಣ ಸ್ಪರ್ಧೆ, ಭಾಷಣ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

* ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವದತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿ ಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವಪ್ರಭ ರೋವರ್ಸ್–ರೇಂಜರ್ಸ್ ಘಟಕ ಹಾಗೂ ಬೆಟಗೇರಿ ಪೊಲೀಸ್ ಠಾಣೆಯ ಸಂಯುಕ್ತ ಆಶ್ರಯದಲ್ಲಿ 'ಅಂತಾರಾಷ್ಟ್ರೀಯ ಮಾದರ ದ್ರವ್ಯ ವಿರೋಧಿ ದಿನಾಚರಣೆ ಹಾಗೂ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಜಾಗೃತಿ ಅಭಿಯಾನ'ವನ್ನು ನಡೆಸಲಾಯಿತು. ಬೆಟಗೇರಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಾದ ಶ್ರೀಮತಿ ನೂರಜಾನ್ ಸಾಬರರವರು ಮಾದಕ ದ್ರವ್ಯಗಳ ಸೇವನೆಯಿಂದ ಯುವ ಪೀಳಿಗೆಯಾವ ರೀತಿ ಹಾಳಾಗುತ್ತಿದೆ, ಕುಟುಂಬಕ್ಕೆ ಒದಗಬಹುದಾದ ಸಮಸ್ಯೆಗಳ ಕುರಿತು ನೈಜ ನಿದರ್ಶನಗಳೊಂದಿಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ಆರ್.ಆರ್. ಕುಲಕರ್ಣಿಯವರು ವಹಿಸಿದ್ದರು. ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಘಟಕದ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎ.ಎಸ್. ಶಿವಕುಮಾರ್ ರವರು ರಸ್ತೆ ಸುರಕ್ಷತಾ ಸಪ್ತಾಹದ ಕುರಿತು ಮಾತನಾಡಿದರು.




* ವಿಶ್ವಪ್ರಭ ರೋವರ್ಸ್–ರೇಂಜರ್ಸ್‌ಗಳು ಪ್ರಯಾಣಿಕರಿಗೆ ಗುಲಾಬಿ ಹೂವುಗಳನ್ನು ನೀಡುವ ಮೂಲಕ ರಸ್ತೆ ನಿಯಮಗಳನ್ನು ಹಾಗೂ ಚಾಲನಾ ನಿಯಮಗಳನ್ನು ಬಳಸುವಂತೆ ವಿನಂತಿ ಮಾಡುವ ಮೂಲಕ ಅಭಿಯಾನ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ರೇಂಜರ್ಸ್ ಲೀಡರ್ ಶ್ರೀಮತಿ ಅಕ್ಷತಾ ಏಳೂರು, ಆರಕ್ಷಕರಾದ ಶ್ರೀ ಕೆ.ಡಿ. ಹರಿವಾಣ, ಶ್ರೀ ಬಸವರಾಜ ಟಿ.ಪಿ. ಶ್ರೀ ಆದಿತ್ಯ ಜೋಶಿ. ಶ್ರೀ ಯಶವಂತ ಕಲ್ಬುರ್ಗಿ ಭಾಗವಹಿಸಿದ್ದರು.

* ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವದತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವಪ್ರಭ ರೋವರ್ಸ್–ರೇಂಜರ್ಸ್ ಘಟಕ ಹಾಗೂ ಗದಗ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ಯುವ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಘಟಕದ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎ.ಎಸ್. ಶಿವಕುಮಾರ್‌ರವರು ವಿವೇಕನಂದ ಜೀವನ ಚರಿತ್ರೆಯನ್ನು ತಿಳಿಸಿ, ಅವರು ಸಂದೇಶಗಳನ್ನು ಎಲ್ಲರಿಗೂ ತಿಳಿಸುವ ಕಾರಣವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿರುವ ಕುರಿತು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ಆರ್.ಆರ್. ಕುಲಕರ್ಣಿಯವರು ವಹಿಸಿದ್ದರು. ವಿಶ್ವಪ್ರಭ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ಗುಂಪು ಚರ್ಚೆ ಮಾಡುವ ಮೂಲಕ ವಿವೇಕಾನಂದರ ಸಂದೇಶಗಳನ್ನು ವಿವರಿಸಿದರು.




## ಹಾಸನ

"ಕಳೆದು ಹೋಗುತ್ತಿರುವ ಮಾನವೀಯ ಸಂಬಂಧಗಳಾದ ಸಂವಹನ ಕೌಶಲ ಸ್ನೇಹ ಹೊಂದಾಣಿಕೆ, ಮನೋಭಾವಗಳನ್ನು ಪುನಃ ಕಟ್ಟಿಕೊಡಲು ಸ್ಕೌಟ್ಸ್–ಗೈಡ್ಸ್ ನಂತಹ ಚಟುವಟಿಕೆಗಳಿಂದ ಮಾತ್ರ ಸಾಧ್ಯ" ಎಂದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಮಂಜುಳಾರವರು ಅಭಿಪ್ರಾಯಪಟ್ಟರು. ಸ್ಥಳೀಯ ಸಂಸ್ಥೆ ಹಾಸನ ಇವರು ಆಯೋಜಿಸಿದ್ದ ಒಂದು ದಿನದ ಸ್ಕೌಟರ್ ಗೈಡರ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ನಂತರ ಮಾತನಾಡಿದ ತಾಲೂಕು ದೈಹಿಕ ಶಿಕ್ಷಣ ಅಧೀಕ್ಷಕರಾದ ಶ್ರೀ ವೇದಣ್ಣರವರು "ಸದೃಢ ಸಮಾಜವನ್ನು ಕಟ್ಟಲು ಪರಿಸರ ಪ್ರೇಮ ಜವಾಬ್ದಾರಿ ನಿರ್ವಹಣೆ ನಾಯಕತ್ವ ಗುಣ ಬೆಳೆಸುವ ಚಟುವಟಿಕೆಗಳನ್ನು ಮಕ್ಕಳಿಗೆ ದಳ ಹಂತದಲ್ಲಿ, ತಾಲೂಕ ಹಂತದಲ್ಲಿ ಆಯೋಜಿಸಿರಿ ಇಲಾಖೆ ವತಿಯಿಂದ ಅದಕ್ಕೆ ಬೇಕಾಗುವ ಸಹಕಾರವನ್ನು



ಕೊಡುವುದಾಗಿ ಭರವಸೆ ನೀಡಿದರು. ಸರ್ಕಾರಿ ಪ್ರಾಥಮಿಕ ಶಾಲೆ ಹೆರಗು ಕಬ್ಸ್ ಮಕ್ಕಳಿ ಪ್ರೌಢಶಾಲೆ ದಾಸರ ಕೊಪ್ಪಲ್ಲಿನ ಸ್ಕೌಟ್ಸ್ ಮಕ್ಕಳಿಗೆ ಸಮವಸ್ತ್ರ ವಿತರಿಸಲಾಯಿತು. ಜಿಲ್ಲಾ ಗೈಡ್ ಕಮಿಷನರಾದ ಶ್ರೀ ಜಯರಾಮ್‌ರವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಬಂದಿರುವ ಎಲ್ಲ ಶಿಕ್ಷಕರು ಘಟಕವನ್ನು ತೆರೆದು ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಪ್ರೇರೇಪಿಸಿದರು.

* ಜನವರಿ 28, 2023ರಂದು ಹಾಸನ ಜಿಲ್ಲಾ ಸಂಸ್ಥೆ, ಬೇಲೂರು ತಾಲೂಕು ಸಂಸ್ಥೆಯ ಅಡಿಯಲ್ಲಿ ಬರುವ ಜೆ.ಎಸ್.ಎಸ್. ಪ್ರೌಢ ಶಾಲೆ ನಾರ್ವೆಯಲ್ಲಿ ಮಲ್ನಾಡ್ ಸ್ಕೌಟ್ ಘಟಕದ ಉದ್ಘಾಟನಾ ಕಾರ್ಯಕ್ರಮ ವನ್ನು ಆಯೋಜನೆ ಮಾಡಿದರು. ಕಾರ್‍ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಸತೀಶ್‌ರವರು ವಹಿಸಿಕೊಂಡಿದ್ದರು. ಗ್ರಾಮ ಪಂಚಾಯತಿ ಸದಸ್ಯರು ಮತ್ತು ಶ್ರೀಮತಿ ಕಾಂಚನ ಮಾಲಾರವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು.




* ಹಾಸನ ಜಿಲ್ಲಾಡಳಿತ ವತಿಯಿಂದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ನವೆಂಬರ್ 02 ರಿಂದ 15, 2023ರ ವರಗೆ ಹಾಸನಾಂಬ ಜಾತ್ರಾ ಮಹೋತ್ಸವದ ಸೇವೆ ಶಿಬಿರದಲ್ಲಿ ಸೇವೆ ಸಲ್ಲಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಆಯೋಜನೆ ಮಾಡಿದರು. ಕಾರ್ಯಕ್ರಮವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ, ಉಪ ವಿಭಾಗಾಧಿಕಾರಿಗಳಾದ ಶ್ರೀ ಮಾರುತಿ, ರಾಜ್ಯ ಸಹ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್ ಶಿಕ್ಷಣ ಸಂಸ್ಥೆ ಪದಾಧಿಕಾರಿಗಳು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು 16 ಜಿಲ್ಲೆಗಳಿಂದ 250ಕ್ಕೂ ಹೆಚ್ಚು ರೋವರ್ಸ್ ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಅರಕಲೂಡು ತಾಲೂಕು ಮಟ್ಟದ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್ ಸಮಾವೇಶ ಹಾಗೂ ಪುನರ್ಶ್ಚೇತನ ತರಬೇತಿ ಶಿಬಿರವನ್ನು ಜನವರಿ 05, 2024 ರಂದು ಎ.ವಿಕೆ. ಅಕಾಡಮಿಯಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ದೇವರಾಜ್‌ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಉಪಸ್ಥಿತರಿದ್ದು ತಾಲ್ಲೂಕು ಹಂತದಲ್ಲಿ ನಡೆಯುವ ಚಟುವಟಿಕೆಗಳಿಗೆ ಬಿ.ಇ.ಓ.ರವರ ಕಛೇರಿಯಿಂದ ಪೂರ್ಣ ಪ್ರಮಾಣದ ಸಹಕಾರ ನೀಡುವುದಾಗಿ ತಿಳಿಸಿದರು. ತಾಲೂಕು ಕಾರ್ಯದರ್ಶಿ ಶ್ರೀ ರಾಮನಾಥ್ ಕಾರ್ಯಕ್ರಮವನ್ನು ಸಂಘಟಿಸಿದರು ತಾಲೂಕು ಖಜಾಂಚಿ ಚಿಕ್ಕೇಗೌಡ ಕಾರ್ಯಕ್ರಮವನ್ನು ನೆರವೇರಿಸಿದರು. 30ಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದರು.



* ಜನವರಿ 12, 2024 ರಂಧು ರಾಷ್ಟ್ರೀಯ ಯುವ ದಿನದ ಪ್ರಯುಕ್ತ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಣವಾರ ಅರಸೀಕೆರೆ ತಾಲೂಕಿನ ಸ್ಕೌಟ್ಸ್ ವಿದ್ಯಾರ್ಥಿಗಳಿಂದ ದಳ ಹಂತದಲ್ಲಿ ಸ್ವಾಮಿ ವಿವೇಕಾನಂದರ 161 ನೇ ಜನ್ಮದಿನವನ್ನು ಆಚರಣೆ ಮಾಡಿ ಈ ದಿನದ ಪ್ರಯುಕ್ತ ಸ್ಕೌಟ್ ವಿದ್ಯಾರ್ಥಿಗಳಿಗೆ ರಸ ಪ್ರಶ್ನೆ ಸ್ಪರ್ಧೆ ಹಾಗೂ ಶಾಲಾ ಆವರಣ ಸ್ವಚ್ಛತಾ ಕಾರ್ಯಕ್ರಮವನ್ನು ಸ್ಕೌಟ್ ಮಾಸ್ಟರ್ ಸತೀಶ್‌ರವರ ನೇತೃತ್ವದಲ್ಲಿ ನಡೆಸಿರುತ್ತಾರೆ.

* ಜನವರಿ 13, 2024 ರಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಸಕಲೇಶಪುರ ತಾಲೂಕು ಸಂಸ್ಥೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ಕಾರ್ಯಕ್ರಮವನ್ನು ಮಾಡಲಾಯಿತು. ಜೆ.ಎಸ್.ಎಸ್. ಪ್ರೌಢ ಶಾಲೆ ನಾರ್ವೇ ಬೇಲೂರು ತಾಲೂಕಿನ ಸ್ಕೌಟ್ ಘಟಕದ ವತಿಯಿಂದ ಜನವರಿ 11, 2024 ರಂದು ನಗರದ ಪ್ರಮುಖ ಬೀದಿಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಜಾಥ ಕಾರ್ಯಕ್ರಮವನ್ನು ಸ್ಕೌಟ್ ಮಾಸ್ಟರ್ ಶ್ರೀ ಉಮೇಶ್, ಮುಖ್ಯೋಪಾಧ್ಯಾಯರುಗಳ ಸಮ್ಮುಖದಲ್ಲಿ ಮಾಡಲಾಯಿತು. 24 ಸ್ಕೌಟ್ ವಿದ್ಯಾರ್ಥಿಗಳು ಹಾಗೂ ಶಾಲಾ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ.

* ಮೌಂಟ್ ಕಾರ್ಮಲ್ ಶಾಲೆ ಬೇಲೂರು ತಾಲೂಕಿನಲ್ಲಿ ಜನವರಿ 13 ರಂದು ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಶಾಲಾ ಮಕ್ಕಳಿಗೆ ರಸ ಪ್ರಶ್ನೆ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಆಯೋಜನೆ ಮಾಡಲಾಗಿತ್ತು.

* ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯ ಕ್ರೈಸ್ಟ್ ಶಾಲೆ ಹಾಸನ ತಾಲೂಕಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಪ್ರಯುಕ್ತ ಸೈಕಲ್ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ನಂತರ ವಿದ್ಯಾನಗರದ ಉದ್ಯಾನವನದಲ್ಲಿ ನಗರ ಪೊಲೀಸ್ ಸಂಚಾರಿ ಇನ್ಸ್‌ಪೆಕ್ಟರ್ ಶ್ರೀಮತಿ ಕುಸುಮ ರವರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಸ್ತೆ ಸುರಕ್ಷತೆಯ ಬಗ್ಗೆ ಹಾಗೂ ನಿಯಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಟ್ರಾಫಿಕ್ ಪೊಲೀಸ್ ಅಧಿಕಾರಿಗಳಾದ ಶ್ರೀ ಧರ್ಮರವರು ರಸ್ತೆ ಸಿಗ್ನಲ್‌ಗಳ ಬಗ್ಗೆ ಮಾಹಿತಿ ನೀಡಿದರು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಯುವ ದಿನದ ಬಗ್ಗೆ ಸ್ವಾಮಿ ವಿವೇಕಾನಂದರರವರ ವಿಚಾರಗಳನ್ನು ತಿಳಿಸಿದರು.

* "ಸ್ಕೌಟ್ಸ್ ಮತ್ತು ಗೈಡ್ಸ್‌ಗಳಲ್ಲಿ ಶಿಸ್ತು, ಸಂಯಮ ಕಲಿಸುವುದರ ಜೊತೆಗೆ ಸೇವಾ ಮನೋಭಾವವನ್ನು ವೃದ್ಧಿಸುತ್ತದೆ" ಎಂದು ಸ್ಥಳೀಯ ಸಂಸ್ಥೆ ಆಲೂರು ತಾಲ್ಲೂಕು ಅಧ್ಯಕ್ಷರು ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳಾದ




ಶ್ರೀ ಎ.ಜೆ. ಕೃಷ್ಣೇಗೌಡ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆ ಹಮ್ಮಿಕೊಂಡಿದ್ದ 2023–24ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು. ನ್ಯಾಯವಾದಿಗಳು ಹಾಗೂ ಹಾಸನ ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಎಂ.ಬಿ. ಗಿರಿಜಾಂಬಿಕ ಮಾತನಾಡಿ ಸೇವೆಯೇ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುಖ್ಯಧ್ಯೇಯವಾಗಿದೆ. ಪಠ್ಯೇತರ ವಿಷಯಗಳಲ್ಲೂ ಯಶಕಂಡಾಗ ಮಾತ್ರ ಸರ್ವಾಂಗೀಣ ಪ್ರಗತಿ ಕಾಣಲು ಸಾಧ್ಯ. ಮಕ್ಕಳನ್ನು ಮಾನಸಿಕವಾಗಿ, ಶಾರೀರಿಕವಾಗಿ ಸದೃಢಗೊಳಿಸುವಲ್ಲಿ ನಮ್ಮ ಸ್ಕೌಟ್ಸ್, ಗೈಡ್ಸ್ ಚಳವಳಿ ಮಹತ್ತರ ಪಾತ್ರ ವಹಿಸುತ್ತಿದೆ" ಎಂದರು. ಹಾಸನದ ಮಿಡ್‌ಟೌನ್ ರೋಟರಿಯ ಅಧ್ಯಕ್ಷೆ ಶ್ರೀಮತಿ ಮಮತಾ ಪಾಟೀಲ್ ಮಾತನಾಡಿ "ಸ್ಕೌಟ್ಸ್ ಮತ್ತು ಗೈಡ್ಸ್‌ಗಳಲ್ಲಿ ಬಾಲ್ಯದಿಂದಲೇ ಸ್ವಯಂ ಶಿಸ್ತನ್ನು ಬೆಳೆಸುತ್ತದೆ. ಧೈರ್ಯಶೀಲತೆಯನ್ನು ಕಲಿಸುತ್ತದೆ", ಎಂದು ತಿಳಿಸಿದರು. ವೇದಿಕೆಯಲ್ಲಿ ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಎಚ್.ಜೆ. ಪೃಥ್ವಿ, ತಾಲ್ಲೂಕು ಸಮನ್ವಯಾಧಿಕಾರಿ ಶ್ರೀ ಬಿ.ಬಿ. ರವಿ, ಶಿಕ್ಷಣ ಸಂಯೋಜಕರಾದ ಶ್ರೀ ತಿಮ್ಮಶೆಟ್ಟಿ, ಶ್ರೀಮತಿ ಮಂಜುಳಾ, ಶ್ರೀ ರುದ್ರೇಶ್, ತಾಲ್ಲೂಕು ಉಪಾಧ್ಯಕ್ಷರಾದ ಶ್ರೀಮತಿ ಸಿ.ಎಸ್.ಪೂರ್ಣಿಮಾ ಮುಂತಾದವರು ಮಾತನಾಡಿದರು.

## ಕಾರವಾರ (ಉ.ಕ.)

ಡಿಸೆಂಬರ್ 23, 2023 ರಂದು ಜೆಸಿ ಶಾಲೆ ಹಟ್ಟಿಕೆರೆ ಅವರ್ಸ ಅಂಕೋಲ ಇಲ್ಲಿ ಒಂದು ದಿನದ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಾಗಾರ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರ, ಮುಖ್ಯ ಶಿಕ್ಷಕರು ಹಾಗೂ ಸ್ಕೌಟ್–ಗೈಡ್ ಶಿಕ್ಷಕರು 40 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



* ಜನವರಿ 4, 2024 ರಂದು ಮಾರ್ತೋಮಾ ಸೆಂಟ್ರಲ್ ಶಾಲೆ ಹೊನ್ನಾವರ ಇಲ್ಲಿ ಸಾವಿತ್ರಿಬಾಯಿ ಫುಲೆ ಇವರ ಜನ್ಮ ದಿನಾಚರಣೆಯನ್ನು ಶಾಲೆಯ ಸ್ಕೌಟ್–ಗೈಡ್ ವಿದ್ಯಾರ್ಥಿಗಳೊಂದಿಗೆ ಶಾಲಾ ಆಡಳಿತ ಮಂಡಳಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ 160 ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಜನವರಿ 8, 2024 ರಂದು ಸ್ಟಿಫನ್ ಸ್ಮಿತ್ ಲಾರ್ಡ್ ಬೇಡನ್ ಪೊವೆಲ್ ಅವರ ಪುಣ್ಯ ಸ್ಮರಣ ಕಾರ್ಯಕ್ರಮವನ್ನು ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು.

* ಜನವರಿ 12, 2024 ರಂದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಯುವ ದಿನಾಚರಣೆಯನ್ನು ಜಿಎಂಎಚ್ ಪಿ.ಎಸ್. ಪುರ ವರ್ಗ ಭಟ್ಕಳ ಇಲ್ಲಿ ಆಚರಿಸಲಾಯಿತು. 30 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಜನವರಿ 12, 2024 ರಂದು ಕಾರವಾರದ ಶ್ರೀ ಸರಸ್ವತಿ ವಿದ್ಯಾ ಮಂದಿರ ಇಲ್ಲಿ ವಿವೇಕಾನಂದ ಜಯಂತಿ ಆಚರಣೆ ಮಾಡಲಾಯಿತು.

* ಜನವರಿ 12, 2024 ರಂದು ನ್ಯೂ ಇಂಗ್ಲಿಷ್ ಶಾಲೆ ಹೊನ್ನಾವರ ಇಲ್ಲಿ ಯುವ ದಿನಾಚರಣೆ ಪ್ರಯುಕ್ತ ವಿವೇಕಾನಂದರ ಜೀವನ ಚರಿತ್ರೆ ಬಗ್ಗೆ ಪ್ರಬಂಧ ಬರೆಯುವುದು, ಅವರ ಭಾವಚಿತ್ರಗಳನ್ನು ಬಿಡಿಸುವುದು, ವಿವೇಕಾನಂದ ರವರ ಬಗ್ಗೆ ಭಾಷಣ ಮಾಡುವುದು, ವಿವೇಕಾನಂದ ಅವರ ಕುರಿತು ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಸ್ಕೌಟ್–ಗೈಡ್‌ಗಳಿಂದ ಮಾಡಿಸಲಾಯಿತು.



* ಜನವರಿ 12, 2024 ರಂದು ಆಲಿ ಪಬ್ಲಿಕ್ ಶಾಲೆಯಲ್ಲಿ ಸ್ವಾಮಿ ವಿವೇಕಾನಂದ ದಿನಾಚರಣೆ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

* ಜನವರಿ 12, 2024 ರಂದು ಹೊನ್ನಾವರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮೂರುಕಟ್ಟೆ ಈ ಶಾಲೆಯ 25ನೇ ವರ್ಷ ವಾರ್ಷಿಕ ಕಾರ್ಯಕ್ರಮದ ಹಾಗೂ ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚರಣೆ ಅಂಗವಾಗಿ ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ವಿದ್ಯಾರ್ಥಿಗಳಿಗೆ ಡೆಸ್ಕ್ ಚೇರ್‌ಗಳನ್ನು ನೀಡಿ ವಿವೇಕಾನಂದರವರು ಕೊಟ್ಟಂತಹ ಮಾರ್ಗದರ್ಶನದಲ್ಲಿ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶ್ರೀಮತಿ ಶಾರದಾ ಹೆಗಡೆ ಎಸ್., ಡಿ.ಎಂ.ಸಿ., ಅಧ್ಯಕ್ಷರು ಉಪಾಧ್ಯಕ್ಷರು ಶಾಲಾ ಸಿಬ್ಬಂದಿ ಹಾಗೂ ಎ.ಎಸ್.ಓ.ಸಿ. ಶ್ರೀ ಕರಿಸಿದ್ದಪ್ಪ ಟಿ. ಉಪಸ್ಥಿತರಿದ್ದರು.

* ಜನವರಿ 12, 2024 ರಂದು ಶ್ರೀ ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚರಣೆ ಅಂಗವಾಗಿ ಶ್ರೀ ಕಾತ್ಯಾಯಿನಿ ಪ್ರೌಢಶಾಲೆ ಅವರ್ಸಾ ಅಂಕೋಲಾ ಈ ಶಾಲೆಯ ಆವರಣದಲ್ಲಿರುವ ವಿವೇಕಾನಂದರ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ವಿದ್ಯಾರ್ಥಿಗಳಿಗೆ ವಿವೇಕಾನಂದರವರ ಜೀವನ ಚರಿತ್ರೆಯ ಬಗ್ಗೆ ವಿಷಯವನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ನಾಗರಾಜ್ ನಾಯಕ್ ಹಾಗೂ ಲಯನ್ಸ್ ಕ್ಲಬ್‌ನ ಸದಸ್ಯರು ಶಾಲಾ ಮುಖ್ಯೋಪಾಧ್ಯಾಯರು ಶಿಕ್ಷಕರು 34 ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 11, 2024 ರಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಕುಮಟಾ ತಾಲೂಕಿನ ಮಿರ್ಜಾನ್ ಜನತಾ ವಿದ್ಯಾಲಯ ಪ್ರೌಢ ಶಾಲೆಯಲ್ಲಿ ಶ್ರೀ ರಾಜ ನಾಯಕ್ ಸ್ಕೌಟ್ ಮಾಸ್ಟರ್ ನೇತೃತ್ವದಲ್ಲಿ ಜಾಗೃತಿ ಜಾಥಾವನ್ನು ನಡೆಸಲಾಯಿತು ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು ಪತ್ರಕರ್ತರು ಮಾಧ್ಯಮ ಮಿತ್ರರು ಮತ್ತು ಹಿರಿಯ ನಾಗರಿಕರು ಪಾಲ್ಗೊಂಡಿದ್ದರು.

* ಜನವರಿ 11, 2024 ರಂದು ನ್ಯೂ ಇಂಗ್ಲೀಷ್ ಶಾಲೆ ಹೊನ್ನಾವರ ಇಲ್ಲಿ ಸ್ಕೌಟ್–ಗೈಡ್ ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾವನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು.



* ಜನವರಿ 12, 2024 ರಂದು ಮಾರ್ಥೋಮ ಶಾಲೆ ಹಾಗೂ ಆಂಗ್ಲ ಮಾಧ್ಯಮ ಸಿ.ಬಿ.ಎಸ್.ಸಿ. ಶಾಲೆ ಮತ್ತು ಸೇಂಟ್ ಥಾಮಸ್ ಶಾಲೆ ವತಿಯಿಂದ ಪೊಲೀಸ್ ಇಲಾಖೆಯ ಶ್ರೀ ಸತೀಶ್ ನಾಯಕ್, ಪಿಎಸ್ಐ ಇವರ ಮಾರ್ಗದರ್ಶನದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ನಡೆಸಲಾಯಿತು.

* ಜನವರಿ 13, 2024 ರಂದು ಮಾರ್ಥೋಮ ಶಾಲೆಯ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ನಗರದ ಪೊಲೀಸ್ ಇಲಾಖೆ ಆವರಣದಲ್ಲಿ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಶಾಲಾ ಆಡಳಿತ ಮಂಡಳಿ ಸ್ಕೌಟ್–ಗೈಡ್ ಶಿಕ್ಷಕರು ಮತ್ತು ನೂರ ಇಪ್ಪತ್ತು ವಿದ್ಯಾರ್ಥಿಗಳಿಂದ ನಡೆಸಲಾಯಿತು.

* ಜನವರಿ 12 ರಂದು ಸ್ವಾಮಿ ವಿವೇಕಾನಂದ ದಿನಾಚರಣೆಯನ್ನು ಎಸ್.ಡಿ.ಎಂ., ಸಿ.ಬಿ.ಎಸ್.ಸಿ. ಶಾಲೆಯ ಸ್ಕೌಟ್–ಗೈಡ್ 64 ವಿದ್ಯಾರ್ಥಿಗಳಿಂದ ಶಾಲಾ ಮುಖ್ಯ ಶಿಕ್ಷಕರು ಶಿಕ್ಷಕ ಶಿಕ್ಷಕಿಯರ ಉಪಸ್ಥಿತಿಯಲ್ಲಿ ಆಚರಣೆ ಮಾಡಿದರು.

* ಜನವರಿ 12, 2024 ರಂದು ಶ್ರೀ ದುರ್ಗಾಪರಮೇಶ್ವರಿ ಪ್ರೌಢಶಾಲೆ ಅಳ್ವೆ ಕೋಡಿ ಇಲ್ಲಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಶಾಲಾ



ಮುಖ್ಯ ಶಿಕ್ಷಕರು ಶಾಲಾ ಸಿಬ್ಬಂದಿ ವರ್ಗ ಹಾಗೂ 34 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಂದ ಆಚರಣೆ ಮಾಡಲಾಯಿತು.

* ಜನವರಿ 14, 2024 ರಂದು ನ್ಯೂ ಇಂಗ್ಲಿಷ್ ಶಾಲೆ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ದ್ವಿಚಕ್ರ ವಾಹನದವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವ ಬಗ್ಗೆ, ಕಾರು ಚಲಾಯಿಸುವವರು ಸೀಟ್ ಬೆಲ್ಟ್ ಕಡ್ಡಾಯವಾಗಿ ಹಾಕುವ ಬಗ್ಗೆ, ಮತ್ತು ಮೊಬೈಲ್ ಬಳಸಿಕೊಂಡು ವಾಹನವನ್ನು ಚಲಾಯಿಸದೆ ಇರುವ ಬಗ್ಗೆ, ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸದೆ ಇರುವ ಬಗ್ಗೆ, ಹೀಗೆ ಕೆಲವು ಅಣುಕು ಕಾರ್ಯಕ್ರಮಗಳನ್ನು ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಮಾಡಿದರು.

* ಜನವರಿ 16, 2024 ರಂದು ಕಾರವಾರ ಬಾಲ ಮಂದಿರ ಪ್ರೌಢ ಶಾಲೆಯಲ್ಲಿ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಶ್ರೀ ಬಿ.ಡಿ. ಫರ್ನಾಂಡಿಸ್, ಎಲ್.ಟಿ. (ಸ್ಕೌ) ಇವರ ನೇತೃತ್ವದಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು. ಈ ಶಿಬಿರದ ನಾಯಕರಾಗಿ ಮನ್ಸೂರ್ ವಾಯ್ ಮುಲ್ಲಾ ಸ್ಕೌಟ್ ವಿಭಾಗಕ್ಕೆ ಶ್ರೀಮತಿ ಶೋಭಾ ವರ್ಣೇಕರ್, ಗೈಡ್ ವಿಭಾಗಕ್ಕೆ ನಾಯಕರಾಗಿದ್ದರು. ಸುಮಾರು 80 ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕೊಡಗು

ಜನವರಿ 17, 2024 ರಂದು ಮಡಿಕೇರಿ ನಗರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಪೋಲಿಸ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕ್ರೆಸೆಂಟ್ ಶಾಲೆಯ ಸಹಯೋಗದೊಂದಿಗೆ "ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ" ಇದರ ಅಂಗವಾಗಿ ಬೃಹತ್ ಜಾಥವನ್ನು ನಡೆಸಲಾಯಿತು. ಈ ಜಾಥಕ್ಕೆ ಮಡಿಕೇರಿ ಸಂಚಾರಿ ದಳದ ಉಪನಿರೀಕ್ಷಕರು ಚಾಲನೆ ನೀಡಿದರು. ಜಾಥದ ನಂತರ ಸಭಾ ಕಾರ್ಯಕ್ರಮವನ್ನು ನಡೆಸಲಾಗಿ ಸಂಚಾರಿ ದಳದ ಉಪನೀರೀಕ್ಷಕರು ವಿಧ್ಯಾರ್ಥಿಗಳಿಗೆ ಸಂಚಾರಿ ನಿಯುಮದ ಬಗ್ಗೆ ಮಕ್ಕಳಿಗೆ ತಿಳಿಸಿ ಕೊಟ್ಟರು ಕಾರ್ಯಕ್ರಮದ ಉದ್ಘಾಟನೆಯನ್ನು ಸಂಚಾರಿ ದಳದ ಉಪನೀರೀಕ್ಷಕರು ಗಿಡಕ್ಕೆ ನೀರು ಹಾಕುದರ ಮೂಲಕ ನೆರವೆರಿಸಿದರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯು ಸಭೆಯ ಅಧ್ಯಕ್ಷತೆಯನ್ನು ವಹಿಸಿದರು. ಮಡಿಕೇರಿ ಕ್ಷೇತ್ರದ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಆಗಮಿಸಿದ ಶಿಕ್ಷಣ ಸಂಯೋಜಕರಾದ ಶ್ರೀ ಹರೀಶ್‌ರವರು ಮಕ್ಕಳಿಗೆ ಸಂಚರಿಸುವಾಗ, ವಾಹನ ಚಾಲನೆ ಮಾಡುವಾಗ ಅನುಸರಿಸಬೇಕಾದ ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಂಚಾರಿ ಪೋಲಿಸ್



ಸಿಬ್ಬಂದಿ ವರ್ಗ ಮತ್ತು ಸಹಕಾರ್ಯದರ್ಶಿ ಶ್ರೀ ಬೊಳ್ಳಾಜಿರ ಬಿ. ಅಯ್ಯಪ್ಪ, ಗೈಡ್ ಅಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಫ್ಲಾಕ್ ಲೀಡರ್ ಡೈಸಿ, ಕ್ರೆಸೆಂಟ್ ಶಾಲೆಯ ಮುಖ್ಯೋಪಾಧ್ಯಯರು, ಸಹಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಯು.ಸಿ. ದಮಯಂತಿಯವರು ಆಯೋಜಿಸಿದ್ದರು.

## ಕೋಲಾರ

ಡಿಸೆಂಬರ್ 24 ರಂದು ಮಾಲೂರು ಸ್ಥಳಿಯ ಸಂಸ್ಥೆಯ ವತಿಯಿಂದ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲಾ ಆವರಣದಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಮಾಲೂರು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಅಶ್ವಥ್ ರೆಡ್ಡಿ ರವರು ಉಧ್ಘಾಟಿಸಿ ಶುಭ ಕೋರಿ ಮಾತನಾಡುತ್ತಾ "ಮಾಲೂರು ತಾಲ್ಲೂಕಿನ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡುವ ಮೂಲಕ, ತಾಲ್ಲೂಕಿನ ಎಲ್ಲಾ ಮಕ್ಕಳಿಗೂ, ಸ್ಕೌಟ್ಸ್-ಗೈಡ್ಸ್‌ಗಳಿಗೂ ಶಿಕ್ಷಣ ದೊರಕುವಂತೆ ಮಾಡಲು ಬೇಕಾದ ಸಹಕಾರವನ್ನು ನೀಡಲು ಸದಾ ಸಿದ್ಧ" ಎಂದರು. ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ರವರು ಮಾತನಾಡಿ "ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಭಾಗವಹಿಸಿ ಉತ್ತೀರ್ಣರಾಗುವ ಮೂಲಕ ತಮ್ಮಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು, ಆದ್ದರಿಂದ ಎಲ್ಲಾ ತಮ್ಮ ಸ್ನೇಹಿತರನ್ನು ಶಿಬಿರಗಳಿಗೆ ಕರೆದುಕೊಂಡು ಬರಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀಯುತ ನಂಜುಂಡಗೌಡ, ಶ್ರೀಯುತ ನಾಗರಾಜ್, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.




* ಡಿಸೆಂಬರ್ 25 ರಂದು ಕೋಲಾರ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಶಶಿಕಾಂತ್ ರವರ ಹುಟ್ಟಿದ ದಿನದ ಅಂಗವಾಗಿ ಕೋಲಾರ ನಗರದ ನಲ್ಲೂರಮ್ಮ ಅನಾಥಾಲಯಕ್ಕೆ ರೋಟರಿ ಕೋಲಾರ ನಂದಿನಿ ಸಂಸ್ಥೆಯ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ.ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀಯುತ ಕೆ.ಆರ್.ಸುರೇಶ್, ಜಿಲ್ಲಾ ಖಚಾಂಚಿ ಶ್ರೀಯುತ ಉಮೇಶ್, ರೋಟರಿ ಕಾರ್ಯದರ್ಶಿ ಬಾಬು.ವಿ,ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಮಧು.ಆರ್, ಮುಂತಾದವರು ಉಪಸ್ಥಿತರಿದ್ದರು.

*ಡಿಸೆಂಬರ್ 28ರಂದು ಕೋಲಾರ ನಗರದ ಹೊರವಲಯದಲ್ಲಿರುವ ಎಸ್.ಡಿ.ಸಿ. ಕಾಲೇಜಿನಲ್ಲಿ ನೂತನ ರೋವರ್-ರೇಂಜರ್ ದಳಗಳನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಉದ್ಘಾಟಿಸಿ ಮಾತನಾಡುತ್ತಾ "ಇನ್ನೂರು ವರ್ಷಗಳನ್ನು ಸಮೀಪಿಸುತ್ತಿರುವ ಸ್ಕೌಟ್ ಗೈಡ್ ಸಂಸ್ಥೆ, ಈ ಕಾಲೇಜಿನಲ್ಲಿ ನೂರಾರು ವರ್ಷಗಳ ಕಾಲ ಕ್ರಿಯಾಶೀಲವಾಗಿ ದಳಗಳು ನಡೆಯಲಿ, ದಳಗಳನ್ನು ಮುಂದುವರೆಸಲು ಬೇಕಾದ ಸಹಕಾರವನ್ನು ನೀಡಲು ಸದಾ ಸಿದ್ದ" ಎಂದು ತಿಳಿಸಿದರು. ಕಾಲೇಜಿನ ಕಾರ್ಯದರ್ಶಿ ಶ್ರೀಮತಿ ಉಷಾ ಗಂಗಾಧರ್ ರವರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳನ್ನು ನಾನು ಕಳೆದ 20 ವರ್ಷಗಳಿಂದ ತುಂಬಾ ಹತ್ತಿರದಿಂದ ಬಲ್ಲೆ. ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ವಿದ್ಯಾರ್ಥಿಗಳು ಸ್ಕೌಟ್ಸ್-ಗೈಡ್ಸ್ ಶಿಕ್ಷಣವನ್ನು ಪಡೆದು ತಮ್ಮ ಜೀವನವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಹಕಾರಿಯಾಗಿದೆ" ಎಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಪುಷ್ಪಲತಾ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ರೋವರ್ಸ್ ರೇಂಜರ್ಸ್‌ಗಳು ಉಪಸ್ಥಿತರಿದ್ದರು.



* ಜನವರಿ 1 ರಿಂದ 3ರ ವರೆಗೆ ಕೋಲಾರ ನಗರದ ಹೊರವಲಯದಲ್ಲಿನ ಎಂ.ಎಸ್.ಜಿ. ಪದವಿ ಪೂರ್ವ ಮತ್ತು ಸ್ಮಾರ್ಟ್ ಪದವಿ ಕಾಲೇಜಿನ ಆವರಣದಲ್ಲಿ ರೋವರ್-ರೇಂಜರ್ ಮೂಟ್ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ರಾಜ್ಯ ಪ್ರಧಾನ ಆಯುಕ್ತರಾದ ಶ್ರೀಯುತ ಪಿ.ಜಿ.ಆರ್. ಸಿಂಧ್ಯಾರವರು ಉದ್ಘಾಟಿಸಿ ಮಾತನಾಡುತ್ತಾ "ಯುವಕರು ಸಮಯಕ್ಕೆ ಹೆಚ್ಚು ಮಹತ್ವ ನೀಡಿದಾಗ ಮಾತ್ರ ಸಮಾಜದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ" ಎಂದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸಹನಾರವರು ಮಾತನಾಡಿ "ಸ್ಕೌಟ್ಸ್-ಗೈಡ್ಸ್ ಶಿಕ್ಷಣದಲ್ಲಿ ಭಾಗವಹಿಸಿದ ಎಲ್ಲರೂ ಅದೃಷ್ಟವಂತರು, ಉಚಿತವಾಗಿ ಶಾಲಾ ಕಾಲೇಜುಗಳಿಗೆ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಪಧಾದಿಕಾರಿಗಳು ಆಗಮಿಸಿ ಶಿಕ್ಷಣ ನೀಡುತ್ತಾ ಸಮಾಜದ ಪರಿವರ್ತನೆಗೆ ಪಣತೊಟ್ಟು ಸಲ್ಲಿಸುತ್ತಿರುವ ಸೇವೆ ಅರ್ಥಪೂರ್ಣವಾದದ್ದು" ಎಂದು ತಿಳಿಸಿದರು. ಜಿಲ್ಲಾ ಮುಖ್ಯ

ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ “ಯುವಕರು ನೂತನವಾದ ಆಲೋಚನೆಗಳನ್ನು ಮಾಡುವ ಮೂಲಕ ಜಗತ್ತಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕು, ಯಾವುದೇ ವಿಷಯಗಳು ಇಂದು ಅತ್ಯಂತ ಸುಲಭವಾಗಿ ಹಾಗೂ ವೇಗವಾಗಿ ಹರಡಲು ಸಾಮಾಜಿಕ ಮಾಧ್ಯಮಗಳ ಬಳಕೆಯಾಗುತ್ತಿದೆ” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ಶ್ರೀ ಸಂದೇಶ್, ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಜನವರಿ 2 ರಂದು ಕೋಲಾರ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ರವರ 78ನೇ ಜನ್ಮ ದಿನ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಸ್ಮಾರ್ಟ್ ಪದವಿ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರವನ್ನು ರೋಟರಿ ಕೋಲಾರ ಸೆಂಟ್ರಲ್ ಕ್ಲಬ್ ಅಧ್ಯಕ್ಷರಾದ ಶ್ರೀ ಪ್ರಕಾಶ್ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸಹನಾ ರವರು ಚಾಲನೆ ನೀಡಿ ಮಾತನಾಡುತ್ತಾ “ಯುವಕರು ಮತ್ತು ಯುವತಿಯರು ಪ್ರತಿ ವರ್ಷ ಕನಿಷ್ಟ 3 ಸಲವಾದರೂ ರಕ್ತದಾನ ಮಾಡುವ ಮೂಲಕ ರಕ್ತದ ಕೊರತೆಯನ್ನು ನೀಗಿಸಬೇಕು ಹಾಗೂ ತುರ್ತು ಸಂದರ್ಭದಲ್ಲಿ ರಕ್ತದಾನದಿಂದ ಅನೇಕ ಜೀವಗಳು ಉಳಿಯಲು ತಾವು ಸಹಕಾರಿಯಾಗಬೇಕು” ಎಂದು ತಿಳಿಸಿದರು. 54 ಯುನಿಟ್ ರಕ್ತವನ್ನು ಆರ್.ಎಲ್. ಜಾಲಪ್ಪ ರಕ್ತನಿಧಿ ಕೇಂದ್ರದವರು ರಕ್ತವನ್ನು ಶಿಬಿರದಲ್ಲಿ ಸಂಗ್ರಹಿಸಿದರು. ಈ ಸಂದಭದಲ್ಲಿ ಕಾಲೇಜಿನ ಕಾರ್ಯದರ್ಶಿ ಶ್ರೀಯುತ ಸಂದೇಶ್, ಜಿಲ್ಲಾ ಪದಾಧಿಕಾರಿಗಳು ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ರೋವರ್ಸ್ ರೇಂಜರ್ಸ್‌ಗಳು ಉಪಸ್ಥಿತರಿದ್ದರು.

* ಜನವರಿ 7 ರಂದು ಬಂಗಾರಪೇಟೆ ಸ್ಥಳೀಯ ಸಂಸ್ಥೆಯ ಜೈನ್ ಇಂಟರ್ ನ್ಯಾಷನಲ್ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾವನ್ನು ಬಿತ್ತಿಪತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ದೈಹಿಕ ಶಿಕ್ಷಕರಾದ ಶ್ರೀಯುತ ಅಶೋಕ್, ಶಿಕ್ಷಕಿ ಶ್ರೀಮತಿ ವಿನುತಾ, ಜಿಲ್ಲಾ ಸಂಘಟನಾ ಶಿಕ್ಷಕ ಶ್ರೀ ವಿ. ಬಾಬು ಮುಂತಾದವರು ಭಾಗವಹಿಸಿದ್ದರು.

* ಜನವರಿ 7ರಂದು ಕೋಲಾರ ಸ್ಥಳೀಯ ಸಂಸ್ಥೆ ವತಿಯಿಂದ ನಗರದ ಎಂ.ಎಸ್.ಜಿ. ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರವನ್ನು ಕಾಲೇಜಿನ ಪ್ರಾಂಶುಪಾಲೆ ಶ್ರೀಮತಿ ಸಹನಾರವರು ಉದ್ಘಾಟಿಸಿ “ವಿದ್ಯಾರ್ಥಿ ದೆಸೆಯಿಂದಲೇ ಜೀವನ ಕೌಶಲಗಳನ್ನು ಕಲಿಯಲು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಕಂಕಣಬದ್ಧವಾಗಿದ್ದು ಇದರ ಪ್ರಯೋಜನವನ್ನು ಎಲ್ಲರೂ ಪಡೆಯಬೇಕು” ಎಂದು ತಿಳಿಸಿದರು. ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ರವರು ಮಾತನಾಡಿ “ಪ್ರತಿದಿನ ಕನಿಷ್ಟ ಒಂದು ಒಳ್ಳೆಯ ಕೆಲಸವನ್ನು ಮಾಡುವ ಮೂಲಕ ನಾವು ಸಮಾಜಕ್ಕೆ ಅರ್ಪಿಸಿಕೊಳ್ಳಬೇಕು” ಎಂದು ತಿಳಿಸಿದರು. ಜಿಲ್ಲಾ ಸಹ ಕಾರ್ಯದರ್ಶಿ ಸ್ಕೌಟ್ ಬಾಬುರವರು ಮಾತನಾಡಿ “ಮನೆಯಲ್ಲಿನ ಹಿರಿಯರಿಗೆ ಮತ್ತು ಕಿರಿಯರಿಗೆ ಸಹಾಯ ಮಾಡುವ ಮೂಲಕ ತಾವು ಸೇವೆಯ ಹಾದಿಯಲ್ಲಿ ಮೊದಲ ಹೆಜ್ಜೆಯನ್ನು ಹಾಕುವಿರಿ” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಹೇಮಾವತಿ, ಶ್ರೀದೇವಿ, ಸಂದೇಶ್, ವಿಶ್ವನಾಥ ಗೌಡ ಮುಂತಾದವರು ಉಪಸ್ಥಿತರಿದ್ದರು.

* ಜನವರಿ 12 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಕೌಟ್ಸ್–ಗೈಡ್ಸ್ ಸಂಸ್ಥೆ, ಆರೋಗ್ಯ ಇಲಾಖೆ, ನೆಹರು ಯುವಕ ಕೇಂದ್ರದ ವತಿಯಿಂದ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಯುವ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಕೆ.ವಿ. ಶಂಕರಪ್ಪನವರು ಭಾಗವಹಿಸಿ ಮಾತನಾಡುತ್ತಾ “ಇಂದಿನ ಯುವಕರು ದೇಶದ ಆದರ್ಶ ನಾಯಕರ ಜೀವನ ಚರಿತ್ರೆಯನ್ನು ಓದುವ ಮೂಲಕ ಅವರ ಚಿಂತನೆಗಳನ್ನು ಮನಗಾಣಬೇಕು” ಎಂದು ತಿಳಿಸಿದರು. ಜಿಲ್ಲಾ ಏಡ್ಸ್ ನಿಯಂತ್ರಾಧಿಕಾರಿಗಳಾದ ಡಾ|| ಪ್ರಸನ್ನ ಕುಮಾರ್ ರವರು ಮಾತನಾಡಿ “ಇಂದು ಮಾರಕ ಕಾಯಿಲೆಗಳಿಗೆ ಯುವಕರು ಬಲಿಯಾಗುತ್ತಿದ್ದು ತಾವು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ತಿಳಿದು ಉತ್ತಮ ನಿರ್ಧಾರಗಳನ್ನು ತೆದುಕೊಂಡು ಉತ್ತಮ ಜೀವನಕ್ಕಾಗಿ ಉತ್ತಮ ಆರೋಗ್ಯ ಆದ್ದರಿಂದ ಜೋಷ್‌ಗಾಗಿ ತಮ್ಮ ಅಮೂಲ್ಯವಾದ ಜೀವನವನ್ನು ಕಳೆದುಕೊಳ್ಳಬೇಡಿ” ಎಂದು ತಿಳಿಸಿದರು. ಕಾಲೇಜಿನ ಪ್ರಭಾರಿ ಪ್ರಾಂಶುಪಾಲರಾದ ಡಾ|| ಮುರಳಿಧರ್‌ರವರು ಮಾತನಾಡಿ “ವಿಶ್ವದ ಅತೀ ಹೆಚ್ಚು ಯುವಶಕ್ತಿ ಇರುವ ದೇಶ ನಮ್ಮ ದೇಶವಾಗಿದ್ದು ನಾವು ಕಾಲಹರಣ ಮಾಡದೇ ನಮ್ಮ ಜವಾಬ್ದಾರಿಗಳನ್ನು ಅರಿತು ನಿಭಾಯಿಸಬೇಕು” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಆರೋಗ್ಯ ಇಲಾಖೆಯ ಹೇಮಲತಾ, ಡಾ|| ರೇವತಿ, ಡಾ|| ಪ್ರಸನ್ನ ಕುಮಾರಿ, ಪ್ರೊ. ಶ್ರೀನಿವಾಸಮೂರ್ತಿ, ಪ್ರೊ. ಮಂಜುನಾಥ್, ಡಾ|| ನಾರಾಯಣಪ್ಪ, ಡಾ|| ನದೀಮ್, ಕಾಲೇಜಿನ ವಿವಿಧ ಸಮಿತಿಗಳ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜನವರಿ 11 ರಂದು ನಗರದ ಪ್ರಮುಖ ಬೀದಿಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ರೋವರ್ಸ್‌ಗಳಿಂದ ಜಾಗೃತಿ ಜಾಥಾ ಕಾರ್ಯವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ನೆಹರು ಯುವಕ ಕೇಂದ್ರ, ಯುವ ಜನ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

* ಜನವರಿ 14 ರಂದು ಜೈನ್ ಇಂಟರ್ ನ್ಯಾಷನಲ್ ಶಾಲೆ ಕೆ.ಜಿ.ಎಫ್. ಸ್ಕೌಟ್ಸ್–ಗೈಡ್ಸ್‌ಗಳಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾವನ್ನು ಬಿತ್ತಿಪತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶೀಲಾ ನಾಯರ್, ಶಾಲಾ ಆಡಳಿತಾಧಿಕಾರಿ ಶ್ರೀಮತಿ ರುಸಿ ಮಾರ್ಗರೇಟ್, ಶ್ರೀ ಸಂತೋಷ್ ಕುಮಾರ್, ಸ್ಕೌಟ್ ಶಿಕ್ಷಕರಾದ ಶ್ರೀ ಸಂಪತ್ ಕುಮಾರ್, ಜಿಲ್ಲಾ ಸಂಘಟನಾ ಶಿಕ್ಷಕ ಶ್ರೀ ವಿ. ಬಾಬು, ಗೈಡ್ ಶಿಕ್ಷಕಿ ಶ್ರೀಮತಿ ಹೇಮಾವತಿ ಮುಂತಾದವರು ಭಾಗವಹಿಸಿದ್ದರು.

## ಮೈಸೂರು

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನಡೆದ ಶಾಲೆಗಳ ಶಿಕ್ಷಕ ಶಿಕ್ಷಕರಿಗೆ ಮೂಲ ತರಬೇತಿ ಶಿಬಿರದ ಉದ್ಘಾಟನೆಯನ್ನು ಶ್ರೀ ವಿಶ್ವನಾಥ್ ಜಿಲ್ಲಾ ಮುಖ್ಯ ಆಯುಕ್ತರು ನೆರವೇರಿಸಿದರು. ಶ್ರೀ ಸಿ.ಜಿ. ಬೆಟ್ಟಸುರ್ ಮಠ್, ಕಾರ್ಯನಿರ್ವಾಹಕ ಕಾರ್ಯದರ್ಶಿಗಳು ಜೆಎಸ್‌ಎಸ್ ಮಹಾ ವಿದ್ಯಾಪೀಠರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀ ರಾಜಶೇಖರ್ ಶಾಲಾ ಶಿಕ್ಷಣ ಇಲಾಖೆ ಜೆಎಸ್‌ಎಸ್ ಮಹಾವಿದ್ಯಾಪೀಠ ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತ ಕೋರಿದರು. ಶ್ರೀ ರೇಣುಕಾಸ್ವಾಮಿ ಜೆಎಸ್‌ಎಸ್ ಮಹಾವಿದ್ಯಾಪೀಠರವರು ವಂದನಾರ್ಪಣೆ ಮಾಡಿದರು. ಈ ಶಿಬಿರದಲ್ಲಿ 50 ಸ್ಕೌಟ್ಸ್ ಮಾಸ್ಟರ್ 45 ಗೈಡ್ಸ್ ಕ್ಯಾಪ್ಟನ್ 10 ಕಬ್ ಮಾಸ್ಟರ್ 9 ಫ್ಲಾಕ್ ಲೀಡರ್‌ರವರು ಭಾಗವಹಿಸಿರುತ್ತಾರೆ.



* ಡಿಸೆಂಬರ್ 5, 2023 ರಂದು ಮೂಲ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮಧ್ಯಾಹ್ನ 3 ಗಂಟೆಗೆ ನೆರವೇರಿತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳು, ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರರವರು ವಹಿಸಿದ್ದರು. ಸಮಾರೋಪ ಭಾಷಣವನ್ನು ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ವಹಿಸಿದ್ದರು. ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳು ಸ್ವಾಗತವನ್ನು ಕೋರಿದರು. ಕಾರ್ಯಕ್ರಮದಲ್ಲಿ ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಂಚಿಗಳು ಶ್ರೀ ಟಿ.ಎಸ್. ರವಿಶಂಕರ್, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು ಶ್ರೀ ಬಿ.ಕೆ. ಬಸವರಾಜು, ಜಂಟಿ ರಾಜ್ಯ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.



* ಡಿಸೆಂಬರ್ 25, 2023 ರಂದು ಜಿಲ್ಲಾ ಸಂಸ್ಥೆಯಲ್ಲಿ ಪ್ರೀಮಿಯರ್ ಮುಕ್ತದಳದ 37ನೇ ವಾರ್ಷಿಕ ಮಹೋತ್ಸವ ಸಮಾರಂಭ ನೆರವೇರಿತು. ಶ್ರೀ ಪಿ.ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸಮಾರಂಭವನ್ನು ಉದ್ಘಾಟನೆ ಮಾಡಿದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪ್ರೀಮಿಯರ್ ಗುಂಪಿನ ಏಳಿಗೆಗಾಗಿ ಕಾರ್ಯನಿರ್ವಹಿಸಿದ ಶ್ರೀ ರಾಮಪ್ರಸಾದ್, ಶ್ರೀಮತಿ ರಾಧಮ್ಮ, ಶ್ರೀಮತಿ ಶಾರದಾರಾಜು ಹಾಗೂ ಹಿರಿಯ ಸ್ಕೌಟರ್ಸ್ ಶ್ರೀಮತಿ ಎಂ.ವಿ. ಅಮರನಾಥ್‌ರವರನ್ನು ಗುಂಪಿನ ವತಿಯಿಂದ ಸನ್ಮಾನಿಸಲಾಯಿತು. ಗುಂಪಿನ ನಾಯಕರಾದ ಶ್ರೀ ಆರ್. ಚಂದ್ರುರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಗುಂಪಿನ ಹಿರಿಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಸ್ಕೌಟ್ ಮತ್ತು ಗೈಡ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* ಡಿಸೆಂಬರ್ 29, 2023 ಜೆ.ಎಸ್.ಎಸ್ ಆಂಗ್ಲ ಮಾಧ್ಯಮ ಶಾಲೆ ಮೇಟಗಳ್ಳಿ, ಮೈಸೂರು ಇಲ್ಲಿ ಕಬ್ ಬುಲ್‌ಬುಲ್ಸ್, ಸ್ಕೌಟ್-ಗೈಡ್ಸ್‌ಗಳ ಉದ್ಘಾಟನೆಯನ್ನು ಶ್ರೀ ಆರ್.ಪಿ. ಚಂದ್ರು, ಜಿಲ್ಲಾ ಸಂಘಟಕರು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಸತೀಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

* ಜೆ.ಎಸ್.ಎಸ್ ಪ್ರೌಢ ಶಾಲೆ ಸರಸ್ವತಿಪುರಂ ಮೈಸೂರು ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಉದ್ಘಾಟನೆಯನ್ನು ಶ್ರೀಆರ್.ಪಿ. ಚಂದ್ರು ಜಿಲ್ಲಾ ಸಂಘಟಕರು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಮಹದೇವಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

* ಜನವರಿ 12, 2024 ರಂದು ಜೆ.ಎಸ್.ಎಸ್ ಪ್ರೌಢ ಶಾಲೆ ಸರಸ್ವತಿಪುರಂ ಮೈಸೂರು ವತಿಯಿಂದ ವಿವೇಕಾನಂದ ಜಯಂತಿ ಪ್ರಯುಕ್ತ ಜಾಥಾವನ್ನು ಆಯೋಜಿಸಲಾಗಿತ್ತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಮಹದೇವಪ್ಪನವರು ಜಾಥಾಗೆ ಚಾಲನೆ ನೀಡಿದರು. ಸ್ಕೌಟ್ಸ್ ಮತ್ತು



ಗೈಡ್ಸ್ ಮಕ್ಕಳು ಸರಸ್ವತಿಪುರಂನ ಮುಖ್ಯ ರಸ್ತೆಗಳಲ್ಲಿ ಜಾಥಾವನ್ನು ನಡೆಸಿದರು. ಶ್ರೀ ಸೂರ್ಯ ಕುಮಾರ್ ಸ್ಕೌಟ್ಸ್ ಮಾಸ್ಟರ್, ಗೈಡ್ ಕ್ಯಾಪ್ಟನ್ ರವರು ಶ್ರೀಮತಿ ಶಶಿಕಲಾ ಹಾಗೂ ಶ್ರೀಮತಿ ಸತ್ಯಪ್ರೇಮಾದೇವಿಯವರು ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು.

* ಕೆ.ಪಿ. ಶಾಲೆ ಗೋಕುಲಂ ಮೂರನೇ ಹಂತ ಮೈಸೂರುನಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

* ಜನವರಿ 14, 2024 ರಂದು ಜಿಲ್ಲಾ ಸಂಸ್ಥೆಯಲ್ಲಿ ಪ್ರೀಮಿಯರ್ ಮುಕ್ತದಳ ಹಾಗೂ ರಜನಿ ಮುಕ್ತದಳದ ವತಿಯಿಂದ ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚರಣೆ ಹಾಗೂ ಯುವ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಸಂಘಟಕರುಗಳಾದ ಶ್ರೀ ಆರ್.ಪಿ. ಚಂದ್ರು ಮತ್ತು ಶ್ರೀ ಕೆ. ರಾಮಪ್ರಸಾದ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸುಮಾರು 60 ಮಂದಿ ಕಬ್–ಬುಲ್‌ಬುಲ್ಸ್, ಸ್ಕೌಟ್ಸ್– ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ಸ್ಕೌಟರ್ಸ್ ಮತ್ತು ಗೈಡರ್ಸ್ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾಯಚೂರು

ಡಿಸೆಂಬರ್ 23, 2023 ರಂದು ರಾಯಚೂರು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಶಾಂತಿ ನಿಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಸಿರವಾರ ನಗರದ ಆರಕ್ಷಕ ಠಾಣೆಯಲ್ಲಿ ಕಬ್ಸ್, ಮತ್ತು ಬುಲ್–ಬುಲ್ಸ್ ಮಕ್ಕಳಿಗೆ ಪುಟಾಣಿ ಪೊಲೀಸ್ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಪೊಲೀಸ್ ಸಿಬ್ಬಂದಿ ವರ್ಗದವರು ಮಕ್ಕಳ ಸುರಕ್ಷತೆ ಹಾಗೂ ಜಾಗೃತಿ ಕುರಿತು ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ಉಮೇಶ್ ಚಂದ್ರಯಾದವ್ ಸಬ್ ಇನ್‌ಷ್ಪೆಕ್ಟರ್, ಶ್ರೀಮತಿ ಅನುರಾಧ ಯು. ಗೈಡ್ಸ್ ಕ್ಯಾಪ್ಟನ್, ಕು. ಕುಸುಮ ಲೇಡಿ ಕಬ್ ಮಾಸ್ಟರ್ ಹಾಗೂ ಸಿಬ್ಬಂದಿ ವರ್ಗದವರು ಮತ್ತು ಕಬ್ಸ್, ಬುಲ್–ಬುಲ್ಸ್ ಮಕ್ಕಳು ಭಾಗವಹಿಸಿದ್ದರು.

* ಜನವರಿ 11, 2024 ರಂದು ರಾಯಚೂರು ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಪೋಲಿಸ್ ಠಾಣೆ ಸಿರವಾರ ಹಾಗೂ ಶಾಂತಿ ನಿಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ಗುರುಚಂದ್ರ ಯಾದವ್ ಪೊಲೀಸ್ ಸಬ್ ಇನ್ಸ್ಪೆಕ್ಟರ್ ರವರು ರಸ್ತೆ ಸುರಕ್ಷತೆಯ ಮುಂಜಾಗ್ರತಾ ಕ್ರಮಗಳನ್ನು ಹಾಗೂ ಮಕ್ಕಳ ಅಪರಾಧ ತಡೆಗಳ ಕುರಿತು ಮಾಹಿತಿಯನ್ನು ನೀಡಿದರು.




ಇದೇ ಸಂದರ್ಭದಲ್ಲಿ ಶ್ರೀಮತಿ ಅನುರಾಧ ಯು., ಪ್ರಾಂಶುಪಾಲರು / ಗೈಡ್ ಕ್ಯಾಪ್ಟನ್, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ. / ಎಸ್.ಎಮ್.ಸಿ., ಶ್ರೀ ಬಾಬು ಮುಖ್ಯ ಗುರುಗಳು, ಕು. ಕುಸುಮ ಫ್ಲಾಕ್ ಲೀಡರ್ ಹಾಗೂ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜನವರಿ 12, 2024 ರಂದು ರಾಯಚೂರು ಜಿಲ್ಲಾ ಸಂಸ್ಥೆ ಹಾಗೂ ರಾಯಚೂರು ಸ್ಥಳೀಯ ಸಂಸ್ಥೆ, ಮಾನ್ವಿ ಹಾಗೂ ವಿದ್ಯಾ ಜ್ಯೋತಿ ಶಾಲೆ ರಾಯಚೂರು, ಶಾಂತಿ ನಿಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಸ್ವಾಮಿ ವಿವೇಕಾನಂದರ 161ನೇ ಜನ್ಮ ದಿನಾಚರಣೆ ಅಂಗವಾಗಿ ಕಾಲ್ನಡಿಗೆ ಜಾಥಾ, ಸೈಕಲ್ ಜಾಥಾ ಹಾಗೂ ನಗರದ ವಿವಿಧ ವೃತ್ತಿಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀಮತಿ ಅನುರಾಧ ಯು., ಪ್ರಾಂಶುಪಾಲರು / ಗೈಡ್ ಕ್ಯಾಪ್ಟನ್, ಕು. ಕುಸುಮ ಪವಾರ್ ಲೇಡಿ ಕಬ್ ಮಾಸ್ಟರ್, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ. / ಎಸ್.ಎಮ್.ಸಿ. ಹಾಗೂ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ಜನವರಿ 12, 2024 ರಂದು ರಾಯಚೂರು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ಹಾಗೂ ಸರ್ಕಾರಿ ಪ್ರೌಢ ಶಾಲೆ ವಿರುಪಾಪುರ, ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಸಿಂಧನೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ 161ನೇ ಜನ್ಮ ದಿನಾಚರಣೆ ಹಾಗೂ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಕಾಲ್ನಡಿಗೆ ಜಾಥಾ ಹಾಗೂ ನಗರದ ವಿವಿಧ



ವೃತ್ತಿಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬೀರಪ್ಪ ಶಂಭೋಜಿ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಸಿಂಧನೂರು / ಸಹಾಯಕ ಆಯುಕ್ತರು ಮುಕ್ತದಳ, ಶ್ರೀಮತಿ ರಾಮದೇವಿ ಶಂಭೋಜಿ ಮುಖ್ಯ ಗುರುಗಳು, ಶ್ರೀಮತಿ ಶ್ವೇತಾ ಗೈಡ್ ಕ್ಯಾಪ್ಟನ್, ಶ್ರೀಮತಿ ಬಸಮ್ಮ ಹೀರೆಮಠ ಗೈಡ್ ಕ್ಯಾಪ್ಟನ್ ಹಾಗೂ ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜನವರಿ 16, 2024 ರಂದು ಜಿಲ್ಲಾ ಪಂಚಾಯತ್ ರಾಯಚೂರು, ಶಾಲಾ ಶಿಕ್ಷಣ ಇಲಾಖೆ ರಾಯಚೂರು ಜಿಲ್ಲಾ ಸಂಸ್ಥೆ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಕರ್ನಾಟಕ ಸರ್ಕಾರ ಸಭಾ ನಾಯಕರು ಹಾಗೂ ಅಧ್ಯಕ್ಷರು, ಜಿಲ್ಲಾ ಸಂಸ್ಥೆ ರಾಯಚೂರು ರವರ ಅಧ್ಯಕ್ಷತೆಯಲ್ಲಿ ರಾಯಚೂರು ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳವರಿಗೆ ಸ್ಕೌಟಿಂಗ್-ಗೈಡಿಂಗ್ ಮಾಹಿತಿ ಕಾರ್ಯಾಗಾರವನ್ನು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಮಾನ್ವಿ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರುರವರು ಎಲ್ಲರನ್ನೂ ಸ್ವಾಗತಿಸಿದರು. ನಂತರ ಮಾನ್ಯ ಸಚಿವರು ದೀಪ ಹಚ್ಚುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಡಾ: ಭರಶೆಟ್ಟಿ ಎಲ್.ಟಿ. (ಸ್ಕೌ) ಬೀದರ್, ಶ್ರೀಮತಿ ಮಲ್ಲೇಶ್ವರಿ ಜೂಜರೇ, ASOC/ ರೇಂಜರಿಂಗ್ ವಿಭಾಗ/ ಕಲ್ಯಾಣ ಕರ್ನಾಟಕ ಉಸ್ತುವಾರಿ ರವರು ಸ್ಕೌಟಿಂಗ್- ಗೈಡಿಂಗ್ ಮಾಹಿತಿಯನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕಾಳಪ್ಪ ಬಡಿಗೇರ ಉಪನಿರ್ದೇಶಕರು (ಆಡಳಿತ), ಶ್ರೀಮತಿ ಆರ್. ಇಂದಿರಾ ಜಿಲ್ಲಾ ಶಿಕ್ಷಣ ಅಧಿಕಾರಿಗಳು ಹಾಗೂ ಉಪಾಧ್ಯಕ್ಷರು, ಶ್ರೀ ದೊಡ್ಡಮನಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾನ್ವಿ, ಶ್ರೀ ಸೋಮಶೇಖರ ಗೌಡ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಿಂಧನೂರು, ಶ್ರೀ ಸುಖದೇವ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೇವದುರ್ಗ, ಶ್ರೀ ಯಂಕಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು, ಶ್ರೀ ಪರಶುರಾಮ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು, ಶ್ರೀ ಬಿ. ಬಲರಾಮ ಕೃಷ್ಣ ಅಧ್ಯಕ್ಷರು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ಶಿವರಾಜ್ ಇತ್ಲಿ ಉಪಾಧ್ಯಕ್ಷರು ಮಸ್ಕಿ ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

## ಶಿರಸಿ

ಜಿಲ್ಲಾ ಸಂಸ್ಥೆ ಶಿರಸಿ ಹಾಗೂ ಸ್ಥಳೀಯ ಸಂಸ್ಥೆ ಶಿರಸಿ ವತಿಯಿಂದ ದ್ವಿತೀಯ ಹಾಗೂ ತೃತೀಯ ಸೋಪಾನ ಪರೀಕ್ಷಾ ಶಿಬಿರ ಶಿರಸಿಯ ಶಾಲ್ಮಲಾ ಶಿಲ್ಪವನದಲ್ಲಿ ಅರಣ್ಯ ಇಲಾಖೆಯ ಸಹಕಾರದೊಂದಿಗೆ ಯಶಸ್ವಿಯಾಗಿ ನೆರವೇರಿತು. ಮಾನ್ಯ ಉಪನಿರ್ದೇಶಕರಾದ ಶ್ರೀ ಪಿ. ಬಸವರಾಜ್, ಮಾನ್ಯ ಡಿ.ಎಫ್.ಓ. ಹಾಗೂ ಮಾನ್ಯ ಸಮನ್ವಯಾಧಿಕಾರಿಗಳಾದ ಶ್ರೀ ದಿನೇಶ್ ಶೇಟ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎಂ. ಭಟ್, ಸ್ಕೌಟ್ ಆಯುಕ್ತರಾದ ಶ್ರೀ ವಿ.ಎಚ್. ಭಟ್ಕಳ್ ಹಾಗೂ ಗೈಡ್ಸ್ ಆಯುಕ್ತರಾದ ಶ್ರೀಮತಿ ಜ್ಯೋತಿ ಭಟ್ ರವರು ಶಿಬಿರಕ್ಕೆ ಭೇಟಿ ನೀಡಿ ಮಾರ್ಗದರ್ಶನ ನೀಡಿದರು. 310 ವಿದ್ಯಾರ್ಥಿಗಳು ಪರೀಕ್ಷಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಶಿರಸಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಎನ್.ಎಸ್. ಭಾಗ್ವತ್ ಹಾಗೂ ಎ.ಎಸ್.ಓ.ಸಿ. ವೀರೇಶ ಕಾರ್ಯಕ್ರಮ ಸಂಘಟಿಸಿದ್ದರು. ಸ್ಕೌಟ್ ಮಾಸ್ಟರ್ ಶ್ರೀ ಕಿರಣ ಫರ್ನಾಂಡಿಸ್ ಹಾಗೂ ಗೈಡ್ ಕ್ಯಾಪ್ಟನ್ ವೀಣಾ ಭಟ್ ಶಿಬಿರದ ನಾಯಕರಾಗಿ ಕಾರ್ಯನಿರ್ವಹಿಸಿದರು. ತಾಲೂಕಿನ ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್‌ಗಳು ಮೌಲ್ಯಮಾಪನದ ವಿವಿಧ ಕರ್ತವ್ಯ ನಿರ್ವಹಿಸಿದ್ದರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಜ್ಯೋತಿ ಭಟ್ ಎಲ್ಲರಿಗೂ ಸಿಹಿ ವಿತರಿಸಿದರು. ಸಂಸ್ಥೆಯ ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್ ಗಳು ಶಿಸ್ತಿನಿಂದ ಸೇವೆ ಸಲ್ಲಿಸಿದರು.

* ಡಿಸೆಂಬರ್ 26, 2023 ರಿಂದ ಜನವರಿ 01, 2024ರ ವರೆಗೆ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರವನ್ನು ಶ್ರೀ ಸಿದ್ದಾರೂಢ ಮಠ ಕೆ.ಕೆ ಹಳ್ಳಿ, ಹಳಿಯಾಳ ತಾಲ್ಲೂಕಿನಲ್ಲಿ ಆಯೋಜಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾ ಭಾಗವಹಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸ್ಕೌಟ್ಸ್ ಶಿಬಿರದ ನಾಯಕರಾಗಿ ಶ್ರೀಮತಿ ಹೇಮಲತಾ ಎಚ್., ಗೈಡ್ಸ್ ವಿಭಾಗದ ನಾಯಕಿಯರಾಗಿ ಶ್ರೀಮತಿ ಪ್ರೇಮಲತಾ ಕಾರ್ಯನಿರ್ವಹಿಸಿದರು. ಸ್ಕೌಟ್ಸ್ ವಿಭಾಗದಲ್ಲಿ 27 ಗೈಡ್ಸ್ ವಿಭಾಗದಲ್ಲಿ 38 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾ ಪದಾಧಿಕಾರಿಗಳ ಉಪಸ್ಥಿತರಿದ್ದರು.



* ಡಿಸೆಂಬರ್ 29, 2023 ರಿಂದ ಜನವರಿ 01, 2024ರ ವರೆಗೆ ರೋವರ್ಸ್ ಮತ್ತು ರೇಂಜರ್ಸ್‌ಗಳ ಜಿಲ್ಲಾ ಮಟ್ಟದ ನಿಪುಣ ಪರೀಕ್ಷಾ ಶಿಬಿರವನ್ನು ಶ್ರೀ ಸಿದ್ದಾರೂಢ ಮಠ ಕೆ.ಕೆ ಹಳ್ಳಿ, ಹಳಿಯಾಳ ತಾಲೂಕಿನಲ್ಲಿ ಆಯೋಜಿಸಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯಾ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು



ಉದ್ಘಾಟಿಸಿದರು. 30 ರೋವರ್ಸ್ 70 ರೇಂಜರ್ಸ್ ವಿದ್ಯಾರ್ಥಿಗಳ ಭಾಗವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾ ಪದಾಧಿಕಾರಿಗಳ ಉಪಸ್ಥಿತರಿದ್ದರು.

* ಜನವರಿ 03, 2024 ರಂದು ಶಿರಸಿ ಜಿಲ್ಲಾ ಸಂಸ್ಥೆ ವತಿಯಿಂದ "ನಮ್ಮ ನಡೆ ಸರಕಾರಿ ಶಾಲೆ ಕಡೆ" ಅಂಗವಾಗಿ 3ನೇ ವಿಶೇಷ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು ಶಿರಸಿ ತಾಲೂಕಿನ ಬೆಳಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಆವರಣದ ಸ್ವಚ್ಚತೆ, ಶಾಲಾ ಕೊಠಡಿ, ಶಾಲಾ ಕಂಪೌಂಡ್‌ಗೆ ಬಣ್ಣವನ್ನು ಹಚ್ಚಲಾಯಿತು. ಈ ಸೇವಾ ಕಾರ್ಯದಲ್ಲಿ ಶಿರಸಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಎಮ್.ಇ.ಎಸ್.ಎಮ್.ಎಮ್. ಕಲಾ ಹಾಗೂ ವಿಜ್ಞಾನ ಮಹಾ ವಿದ್ಯಾಲಯದ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಶಾಲಾ ಎಸ್.ಡಿ.ಎಮ್.ಸಿ. ಅಧ್ಯಕ್ಷರು ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿಯವರು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಕಾರ್ಯಕ್ಕೆ ಅಭಿನಂದಿಸಿದರು.

* ಜನವರಿ 12, 2024 ರಂದು ಶಿರಸಿ ಜಿಲ್ಲಾ ಸಂಸ್ಥೆ ವತಿಯಿಂದ "ನಮ್ಮ ನಡೆ ಸರಕಾರಿ ಶಾಲೆ ಕಡೆ" ಅಂಗವಾಗಿ 4ನೇ ವಿಶೇಷ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಶಿರಸಿ ತಾಲೂಕಿನ ಕಲಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಆವರಣದ ಸ್ವಚ್ಚತೆ, ಶಾಲಾ ಕೊಠಡಿ, ಶಾಲಾ ಕಂಪೌಂಡ್‌ಗೆ ಬಣ್ಣವನ್ನು ಹಚ್ಚಲಾಯಿತು. ಈ ಸೇವಾ ಕಾರ್ಯದಲ್ಲಿ ಶಿರಸಿ ಸರಕಾರಿ ಪ್ರಥಮ ದರ್ಜೆ ಮಹಾ ವಿದ್ಯಾಲಯ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಶಾಲಾ ಎಸ್.ಡಿ.ಎಮ್.ಸಿ. ಅಧ್ಯಕ್ಷರು ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿಯವರು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಕಾರ್ಯಕ್ಕೆ ಅಭಿನಂದಿಸಿದರು.



* ಜನವರಿ 13, 2024 ರಂದು ಶಿರಸಿ ಜಿಲ್ಲಾ ಸಂಸ್ಥೆ ವತಿಯಿಂದ "ನಮ್ಮ ನಡೆ ಸರಕಾರಿ ಶಾಲೆ ಕಡೆ" ಅಂಗವಾಗಿ 4ನೇ ವಿಶೇಷ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಹಳಿಯಾಳ ತಾಲೂಕಿನ ಸಂಕನಕೊಪ್ಪ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಆವರಣದ ಸ್ವಚ್ಚತೆ, ಶಾಲಾ ಕೊಠಡಿ, ಶಾಲಾ ಕಂಪೌಂಡ್‌ಗೆ ಬಣ್ಣವನ್ನು ಹಚ್ಚಲಾಯಿತು. ಈ ಸೇವಾ ಕಾರ್ಯದಲ್ಲಿ ಹಳಿಯಾಳ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ಶಾಲಾ ಎಸ್.ಡಿ.ಎಮ್.ಸಿ. ಅಧ್ಯಕ್ಷರು ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿಯವರು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಕಾರ್ಯಕ್ಕೆ ಅಭಿನಂದಿಸಿದರು.

* ಜನವರಿ 12, 2024 ರಂದು ಶಿರಸಿ ಜಿಲ್ಲಾ ಸಂಸ್ಥೆ ವತಿಯಿಂದ "ನಮ್ಮ ನಡೆ ಸರಕಾರಿ ಶಾಲೆ ಕಡೆ" ಅಂಗವಾಗಿ 6ನೇ ವಿಶೇಷ ಸೇವಾ ಕಾರ್ಯವನ್ನು ಶಿರಸಿ ತಾಲೂಕಿನ ಮಳಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಮ್ಮಿಕೊಳ್ಳಲಾಗಿತ್ತು. ಈ ಸೇವಾ ಕಾರ್ಯದಲ್ಲಿ ಭಾಗವಹಿಸಿದ ಶಿರಸಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಎಮ್.ಇ.ಎಸ್.ಎಮ್.ಎಮ್. ಕಲಾ ಹಾಗೂ ವಿಜ್ಞಾನ ಮಹಾ ವಿದ್ಯಾಲಯದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಶ್ರೀ ಭೀಮಣ್ಣ ಟಿ. ನಾಯ್ಕ ಮಾನ್ಯ ಶಾಸಕರು ಶಿರಸಿ-ಸಿದ್ದಾಪುರ ಕ್ಷೇತ್ರ ಇವರು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಕಾರ್ಯಕ್ಕೆ ಅಭಿನಂದಿಸಿದರು.

* ಜನವರಿ 16, 2024 ರಂದು ಶಿರಸಿ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದಿಂದ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾಕ್ಟರ್ ದಿನೇಶ ಹೆಗಡೆ ಮಹಾಲಕ್ಷ್ಮಿ ಆಸ್ಪತ್ರೆ ಶಿರಸಿ, ಡಾಕ್ಟರ್ ಶಿವರಾಂ ಕೆ.ವಿ. ಗಣೇಶ ನೇತ್ರಾಲಯ ಶಿರಸಿ ಮತ್ತು ಪೋಲಿಸ್ ಇಲಾಖೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಮೇಶ ಮುಚ್ಚಂಡಿ ಹಾಗೂ ಶ್ರೀ ಶಶಾಂಕ ಹೆಗಡೆ ಮುಖ್ಯೋಪಾಧ್ಯಾಯರು ಲಯನ್ಸ್ ಆಂಗ್ಲ ಮಾಧ್ಯಮ ಶಾಲೆ ಶಿರಸಿ, ವಿರೇಶ ಮಾದರ ಎ.ಎಸ್.ಓ.ಸಿ. ಸ್ಕೌಟ್ಸ್ ಮಾಸ್ತರ ರಾಘವೇಂದ್ರ ಹೊಸುರು. ಶ್ರೀಮತಿ ಚೇತನಾ ಪಾವಸ್ಕರ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಶಿವಮೊಗ್ಗ

ಜನವರಿ 16, 2024 ರಂದು ಪೂರ್ವ ಸಂಚಾರ ಪೋಲಿಸ್ ಠಾಣೆ, ಶಿವಮೊಗ್ಗ, ಶಿವಮೊಗ್ಗ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಸ್ವಯಂಕ್ತಾಶ್ರಯದಲ್ಲಿ ಜಿಲ್ಲಾ ಸ್ಕೌಟ್ ಭವನದಲ್ಲಿ ರಾಷ್ಟ್ರೀಯ ಸಪ್ತಾಹದ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಪ್ರದರ್ಶನ ಮತ್ತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. "ಜೀವನದಲ್ಲಿ ಶಿಸ್ತು ಅತಿ ಮುಖ್ಯ ಆ ಶಿಸ್ತನ್ನೇ ಬಂಡವಾಳ ಮಾಡಿಕೊಂಡು ನಮ್ಮ ಜೀವನವನ್ನು ನಾವು ಸಾಗಿಸಬೇಕು ರಸ್ತೆಯಲ್ಲಿ ಓಡಾಡುವಾಗ ಸಂಚಾರ ನಿಯಮವನ್ನು ಪಾಲಿಸಬೇಕು" ಎಂದು ಶಿವಮೊಗ್ಗ ಸಂಚಾರ ವೃತ್ತದ ಸರ್ಕಲ್ ಪೊಲೀಸ್ ಇನ್ಸಪೆಕ್ಟರ್ ಆದ ಶ್ರೀ ಸಂತೋಷ ಕುಮಾರರವರು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಸಂಚಾರ ಪೋಲಿಸ್ ಠಾಣೆಯ ಸಿಬ್ಬಂದಿಗಳಾದ ಶ್ರೀ ಮೌನೇಶರವರು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಶ್ರೀ ಶ್ರೀನಿವಾಸ ರವರು ಪಿ.ಪಿ.ಟಿ. ಮೂಲಕ ನಾವು ನಿಯಮವನ್ನು ಹೇಗೆ ಪಾಲಿಸಬೇಕೆಂದು, ಪಾಲಿಸದೆ ಇದ್ದಲ್ಲಿ



ಆಗುವ ಅಪಘಾತದ ಬಗ್ಗೆ  ಭಾವಚಿತ್ರಗಳ ತುಣುಕುಗಳನ್ನು ತೋರಿಸಿ ವಿವರಿಸಿದರು. ಜಿಲ್ಲಾ ಕಾರ್ಯದರ್ಶಿ ಹೆಚ್. ಪರಮೇಶ್ವರರವರು ಎಲ್ಲರನ್ನು ಸ್ವಾಗತಿಸಿದರು. ವಂದನೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಭಾರತಿ ಡಾಯಸರವರು ನಿರ್ವಹಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಜೇಶರವರು ಕಾರ್ಯಕ್ರಮ ನಿರೂಪಿಸಿದರು. ಈ ಕಾರ್ಯಕ್ರಮಕ್ಕೆ ಪೂರ್ವ ಸಂಚಾರಿ ಠಾಣೆಯ ಪೋಲಿಸ್ ಸಬ್ ಇನ್ಸಪೆಕ್ಟರ್ ಗಳಾದ, ಶ್ರೀ ನವೀನಕುಮಾರ, ಶ್ರೀ ಶಿವಣ್ಣನವರ, ಪಶ್ಚಿಮ ಸಂಚಾರಿ ಠಾಣೆಯ ಪೋಲಿಸ್ ಸಬ್ ಇನ್ಸಪೆಕ್ಟರ್‌ಗಳಾದ, ಶ್ರೀ ತಿರುಮಲೇಶ, ಶ್ರೀಮತಿ ಭಾರತಿ ಪೂರ್ವ ಮತ್ತು ಪಶ್ಚಿಮ ಸಂಚಾರ ಠಾಣೆಯ ಅಧಿಕಾರಿಗಳು ಸಿಬ್ಬಂದಿ ವರ್ಗದವರು. ಹೆಚ್ಚು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಉಪಸ್ಥಿತರಿದ್ದರು.

## ಉಡುಪಿ

ಕಬ್ ಮಾಸ್ಟರ್, ಫ್ಲಾಕ್ ಲೀಡರ್ ತರಬೇತಿ ಹೊಂದಿರುವಂತಹ... ಗಾಂಧಿ ಶತಾಬ್ದಿ ಶಾಲೆ ಮಲ್ಪೆಯಲ್ಲಿ... ಒಂದರಿಂದ ಮೂರನೇ ತರಗತಿಯ ವಿದ್ಯಾರ್ಥಿಗಳ ಪೋಷಕರಿಗೆ ಮಾಹಿತಿ ಶಿಬಿರ ನಡೆಸಲಾಯಿತು.

* ಮುಂದಿನ ದಿನಗಳಲ್ಲಿ ಸ್ಕೌಟ್ ಗೈಡ್ಸ್ ತರಬೇತಿಗೆ ಶಿಕ್ಷಕರನ್ನು ಕಳಿಸಿ. ಇಲ್ಲದಿದ್ದರೆ ಉಳಿದ ಮಕ್ಕಳಿಗೆ ಅವಕಾಶ ತಪ್ಪುತ್ತದೆ ಎಂದು ಶಾಲಾ ಆಡಳಿತ ಮಂಡಳಿಯವರಿಗೆ ಸಲಹೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಹಾಯಕ ಸಂಘಟನ ಆಯುಕ್ತರು ಭಾಗವಹಿಸಿ ಸೂಕ್ತ ಮಾಹಿತಿಯನ್ನು ನೀಡಿದರು.

* ಡಿಸೆಂಬರ್ 09, 2023 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 66 ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ




ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ 25 ರೋವರ್ಸ್ ರೇಂಜರ್ಸ್ ಗಳು ಭಾಗವಹಿಸಿದ್ದರು.

* ಡಿಸೆಂಬರ್ 14, 2023 ರಂದು ಕ್ರೈಸ್ಟ್ ಕಿಂಗ್ ಶಾಲೆಯ ಕಬ್ಸ್-ಬುಲ್‌ಬುಲ್ ಹಾಗೂ ಪ್ರಾಥಮಿಕ, ಪ್ರೌಢ ವಿಭಾಗದ ಸ್ಕೌಟ್ಸ್- ಗೈಡ್ಸ್ ವಿದ್ಯಾರ್ಥಿಗಳಿಗಾಗಿ ಹಲವಾರು ಚಟುವಟಿಕೆಯನ್ನು ಏರ್ಪಡಿಸಲಾಗಿತ್ತು. ವಿವಿಧ ಹಣ್ಣಿನ ಮರಗಳ ತೋಟ ನಂದನ ವನಕ್ಕೆ ಭೇಟಿ ನೀಡಲಾಯಿತು. ಅಲ್ಲಿನ ಮಾಲಕರಾದ ಪ್ರಭಾಕರ್ ಕಾಮತ್‌ರವರು ತೋಟವನ್ನು ತೋರಿಸಿ ಮಕ್ಕಳಿಗಾಗಿ ತಿಂಡಿ ಹಾಗೂ ಪಾನೀಯವನ್ನು ನೀಡಿದರು.



* ಉಡುಪಿ ವಲಯದ ಒಂದು ದಿನದ ಪುನಶ್ಚೇತನ ಶಿಬಿರ ಡಿಸೆಂಬರ್ 15 ರಂದು ಉಚ್ಚಿಲ ಮಹಾಲಕ್ಷ್ಮಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಿತು. ಹೊಸದಾಗಿ ಉಡುಪಿ ವಲಯಕ್ಕೆ ಬಂದಿರುವಂತಹ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿರುವ ಡಾ. ಎಲ್ಲಮ್ಮ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಉಡುಪಿ ವಲಯದ ಪ್ರತಿಯೊಂದು ಶಾಲೆಯಲ್ಲಿ ಕಡ್ಡಾಯವಾಗಿ ಒಂದು ಸ್ಕೌಟ್ಸ್ ಗೈಡ್ಸ್ ದಳ ಇರಬೇಕು. ಹಾಗೂ ತರಬೇತಿ ಹೊಂದದೆ ಇರುವ ಶಾಲೆಗಳಲ್ಲಿ ಮುಂದೆ ನಡೆಯುವ ಪ್ರಾಥಮಿಕ ತರಬೇತಿಯಲ್ಲಿ ಕಡ್ಡಾಯವಾಗಿ ಶಿಕ್ಷಕರ ನೇಮಿಸಬೇಕಾಗಿ ಮುಖ್ಯೋಪಾಧ್ಯಾಯರಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಉಡುಪಿ ವಲಯದ ಹೊಸದಾಗಿ ಬಂದಿರುವ ದೈಹಿಕ ಶಿಕ್ಷಣಾಧಿಕಾರಿಯಾಗಿರುವ ಚಂದ್ರಶೇಖರ್ ಸುವರ್ಣ, ಸಂಪನ್ಮೂಲ ವ್ಯಕ್ತಿ ಶ್ರೀ ಪ್ರತಿಮ್ ಕುಮಾರ್ ಲೀಡರ್ ಟ್ರೈನರ್, ಯುವಜನ ಕ್ರೀಡಾಧಿಕಾರಿಯಾಗಿರುವ ಶ್ರೀ ರಿತೇಶ್ ಕುಮಾರ್ ಶೆಟ್ಟಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಅನಿತಾ ಮೆಂಡಾನ್ಸ, ಉಪಾಧ್ಯಕ್ಷರಾಗಿರುವ ಶ್ರೀ ಮಧುಕರ್ ಹಾಗೂ ಜಿಲ್ಲಾ ಕಾರ್ಯದರ್ಶಿಯಾಗಿ ಶ್ರೀ ಆನಂದ್ ಬಿ. ಅಡಿಗ ಉಪಸ್ಥಿತರಿದ್ದರು.  ರಾಜ್ಯ ಸಹಾಯಕ ಸಂಘಟನಾ ಆಯುಕ್ತಯಾಗಿರುವ ಶ್ರೀಮತಿ ಸುಮನ್ ಶೇಖರ್ ಕಾರ್ಯಕ್ರಮ ನಿರೂಪಣೆ ಮಾಡಿ ಕಾರ್ಯಕ್ರಮವನ್ನು ಸಂಘಟಿಸಿದ್ದರು.

* ಡಿಸೆಂಬರ್ 20, 2023 ರಂದು ಕಾಪು ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷೆಯು ದಂಡ ತೀರ್ಥ ಆಂಗ್ಲ ಮಾಧ್ಯಮ ಶಾಲೆ ಕಾಪು ಇಲ್ಲಿ ನಡೆಯಿತು. ಈ ಕಾರ್ಯಕ್ರಮವನ್ನು ಶಾಲೆಯ ಆಡಳಿತ ಅಧಿಕಾರಿ ಹಾಗೂ ಸ್ಥಳೀಯ ಸಂಸ್ಥೆಯ ಗೌರವಾಧ್ಯಕ್ಷರಾಗಿರುವ ಡಾಕ್ಟರ್ ಪ್ರಶಾಂತ್ ಶೆಟ್ಟಿ ಹಾಗೂ ನಿವೃತ್ತ ಪ್ರಾಂಶುಪಾಲರಾಗಿರುವ ಅಲ್ಬನ್ ರೋಡ್ರಿಗಸ್ ಉದ್ಘಾಟನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟರು.ಈ ಕಾರ್ಯಕ್ರಮದಲ್ಲಿ ದಂಡ ತೀರ್ಥ ಆಂಗ್ಲ ಮಾಧ್ಯಮ ಶಾಲೆಯ ಹಿರಿಯ ಮತ್ತು ಕಿರಿಯ ಶಾಲೆ ಮುಖ್ಯೋಪಾಧ್ಯಾಯರು,

ಯುವಜನ ಕ್ರೀಡಾಧಿಕಾರಿ ಹಾಗೂ ಜಿಲ್ಲಾ ಸಹಾಯಕ ಸಂಘಟನ ಆಯುಕ್ತರು ಶ್ರೀ ರಿತೇಶ್ ಕುಮಾರ್ ಶೆಟ್ಟಿ, ಉಪಾಧ್ಯಕ್ಷರಾಗಿರುವ ಶ್ರೀ ಮಧುಕರ್, ಜಿಲ್ಲಾ ಸಂಸ್ಥೆ ಕಾರ್ಯದರ್ಶಿ ಶ್ರೀ ಆನಂದ್ ಅಡಿಗ ಉಪಸ್ಥಿತರಿದ್ದರು.

* ಡಿಸೆಂಬರ್ 26 ಮತ್ತು 27, 2023 ರಂದು ಡಾ. ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಅಲೆ ಊರು ಮಣಿಪಾಲ ಇಲ್ಲಿ. ನಡೆದ ಸೇವಾ ಶಿಬಿರದಲ್ಲಿ ಸರಕಾರಿ ಪದವಿಪೂರ್ವ ಕಾಲೇಜು ಬೈಂದೂರು ಇಲ್ಲಿನ 35 ರೋವರ್ಸ್ ಭಾಗವಹಿಸಿದ್ದರು.

* ಡಿಸೆಂಬರ್ 30, 2023 ರಂದು 'ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ' ಪ್ರಥಮ ಪ್ರಯಾಣವು ಉಡುಪಿಯಲ್ಲಿ ಅದ್ದೂರಿಯಾಗಿ ಸ್ವಾಗತದೊಂದಿಗೆ ಕೊಂಕಣ ರೈಲ್ವೆ ಅಧಿಕಾರಿಗಳು ಆಯೋಜಿಸಿದ್ದು. ಈ ಒಂದು ಸಮಾರಂಭವು ಮಾನ್ಯ ಶಾಸಕರಾದ ಶ್ರೀ ಎಸ್. ಪಾರ್ಕ್ ಸುವರ್ಣ, ಶ್ರೀ ಸುರೇಶ್ ಕುಮಾರ್ ಗುರ್ಮೆ, ಶ್ರೀ ಸುನಿಲ್ ಕುಮಾರ್, ಶ್ರೀಮತಿ ಶೋಭಾ ಕರಂದ್ಲಾಜೆ ಮುಂತಾದ ಜನಪ್ರತಿನಿಧಿಗಳು ಅತಿಥಿ ಗಣ್ಯ ಸಮ್ಮುಖದಲ್ಲಿ ನಡೆಯಿತು. ಇಂದ್ರಾಳಿ ರೈಲ್ವೆ ನಿಲ್ದಾಣದ ಸ್ವಚ್ಛ ಭಾರತ್ ಕಾರ್ಯಕ್ರಮದಲ್ಲಿ ಸತತವಾಗಿ ಭಾಗವಹಿಸಿ, ಸದಾ ಉಡುಪಿ ಜಿಲ್ಲೆಯ ಎಲ್ಲಾ ಕಾರ್ಯಕ್ರಮಗಳಿಗೆ ಸಹಕರಿಸುವ 35 ರೋವರ್‌ಗಳು ಉಡುಪಿಯಿಂದ ಮಡಗಾವ್‌ನವರೆ ಉಚಿತವಾಗಿ ಪ್ರಯಾಣ ಮಾಡಲು ರೈಲ್ವೆ ಅಧಿಕಾರಿಯಾಗಿರುವ ಶ್ರೀ ಎಸ್.ಕೆ. ಭಟ್ ಅವಕಾಶ ಮಾಡಿಕೊಟ್ಟಿರುತ್ತಾರೆ. ನಮ್ಮ ರೋವರ್, ರೇಂಜರ್ಸ್ ಒಂದು ಸಂತಸ ಸಂಭ್ರಮದ ದಿನವನ್ನು ಸಂಭ್ರಮಿಸಿದರು. ಈ ಒಂದು ಪ್ರಯಾಣದ ವೇಳೆಯಲ್ಲಿ, ಮಂಗಳೂರು ಜಿಲ್ಲೆಯ ಜನಪ್ರತಿನಿಧಿಗಳು ರೈಲ್ವೆ ಅಧಿಕಾರಿಯವರು, ರೈಲ್ವೆ ಇಲಾಖೆ ಸಿಬ್ಬಂದಿಗಳು ಉಡುಪಿ ಜಿಲ್ಲೆಯ ರೋವರ್ ರೇಂಜರ್ಸ್‌ರವನ್ನು ಮಾತನಾಡಿಸಿ, ಹುರಿದುಂಬಿಸಿ ಶುಭ ಹಾರೈಸಿದರು

* ಜನವರಿ 12, 2024 ಸ್ವಾಮಿ ವಿವೇಕಾನಂದರ ಜನ್ಮದ ದಿನದ ಪ್ರಯುಕ್ತ ನಡೆದ "ರಾಷ್ಟ್ರೀಯ ಯುವ ದಿನಾಚರಣೆ" ಕಾರ್ಯಕ್ರಮವನ್ನು ನೆಹರು ಯುವ ಕೇಂದ್ರ, ಪೂರ್ಣಪ್ರಜ್ಞ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅವರ ಸಹಯೋಗದಲ್ಲಿ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾಗಿರುವ ಶ್ರೀ ಆನಂದ್ ಬಿ. ಅಡಿಗ ಉದ್ಘಾಟಿಸಿದರು.... ಹಾಗೂ ರಸ್ತೆ ಸುರಕ್ಷತಾ ಸಪ್ತಾಹವನ್ನು ಸ್ಕೌಟ್ ಗೈಡ್ಸ್ ವಿದ್ಯಾರ್ಥಿಗಳಿಗೆ ಟಿ-ಶರ್ಟ್ ಹಾಗೂ ಕ್ಯಾಪ್ ಕೊಡುವುದರ ಮೂಲಕ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ವಿದ್ಯೋದಯ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ದಳನಾಯಕಿಯರು, ಕಡಿಯಾಳಿ ಮುಕ್ತ ದಳದ ರೋವರ್ಸ್ ರೆಂಜರ್ಸ್, ಆರ್.ಎಸ್.ಎಲ್. ವಿತೀಶ್ ಕಾಂಚನ್ ಉಪಸ್ಥಿತರಿದ್ದು. ರಾಜ್ಯಸಹಾಯಕ ಸಂಘಟನಾ ಆಯುಕ್ತೆ ಆಗಿರುವ ಶ್ರೀಮತಿ ಸುಮನ್ ಶೇಖರ್ ಕಾರ್ಯಕ್ರಮವನ್ನು ಸಂಘಟಿಸಿದ್ದರು.

* ಜನವರಿ 13, 2024 ರಂದು ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ. ಸಂಚಾರ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಆಗಿರುವ ಶ್ರೀ ಪ್ರಕಾಶ್ ಇವರ ಮಾರ್ಗದರ್ಶನದಲ್ಲಿ ಜಾಥ, ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿ ನಿಯಮಗಳ ಬಗ್ಗೆ, ಕಾನೂನು ಬಗ್ಗೆ ಹಾಗೂ ಪ್ರಾಯೋಗಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ಅಡಿಷನಲ್ ಎಸ್ಪಿ ಯಾಗಿರುವ ಶ್ರೀ ಪಿ.ಎನ್. ಹೆಗಡೆ, ಸರ್ಕಲ್ ಇನ್ಸ್ಪೆಕ್ಟರ್ ಆಗಿರುವ ಶ್ರೀ ಮಂಜುನಾಥ್, ಸಬ್ ಇನ್ಸ್ಪೆಕ್ಟರ್ ಶ್ರೀ ಪ್ರಕಾಶ್, ಎ.ಎಸ್.ಐ. ಶ್ರೀ ಸುಧಾಕರ್, ಎ.ಎಸ್.ಐ. ಶ್ರೀ ಚಂದ್ರಶೇಖರ್, ಶ್ರೀ ಹೆಚ್.ಸಿ. ದಾಮೋದರ್, ಶ್ರೀ ಹೆಚ್.ಸಿ. ಗೌರಮ್ಮ ಹಾಗೂ ಇತರ ಪೋಲಿಸ್ ಅಧಿಕಾರಿಗಳು ಉಪಸ್ಥಿತರಿದ್ದು 150 ಕ್ಕಿಂತ ಹೆಚ್ಚು ಸ್ಕೌಟ್ ಗೈಡ್ಸ್ ರೋವರ್ಸ್ ರೆಂಜರ್ಸ್‌ಗಳಿಗೆ ಒಳ್ಳೆಯ ಮಾರ್ಗದರ್ಶನ, ತರಬೇತಿಯ, ಸಲಹೆ ಸೂಚನೆಯನ್ನು ನೀಡಿದರು.

## ಬೆಂಗಳೂರು ಗ್ರಾಮಾಂತರ

ಡಿಸೆಂಬರ್ 04, 2023ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದ ನಳಂದ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾದೀಶರಾದ ಗೌರವಾನ್ವಿತ ಶ್ರೀ ಸಂತೋಷ್ ಹೆಗ್ಗಡೆ ಅವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಭಾಗವಹಿಸಿ ಈ ಶಾಲೆಯನ್ನು ಶೇಕಡ 100 ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಶಾಲೆಯನ್ನಾಗಿ ಘೋಷಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.

ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಶ್ರೀ ಶ್ರೀನಿವಾಸ್ ಪ್ರಸಾದ್, ಎ.ಡಿ.ಸಿ ಶ್ರೀ ವೆಂಕಟರಾಜು, ನಳಂದ ಶಾಲೆಯ ಕಾರ್ಯದರ್ಶಿ ಶ್ರೀಮತಿ ನಿರ್ಮಲ, ಮುಖ್ಯ ಶಿಕ್ಷಕ ಶ್ರೀಮತಿ ಸುನಿತಾ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.




## ವಿಜಯಪುರ

ಜಿಲ್ಲಾ ಸಂಸ್ಥೆ ವಿಜಯಪುರ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪುರ ಹಾಗೂ ಸಂಚಾರಿ ಪೊಲೀಸ್ ಠಾಣೆ ವಿಜಯಪುರ ರವರ ಸಹಯೋಗದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ 2024 ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪುರ ಇಲ್ಲಿ ಜನವರಿ 10, 2024 ರಂದು ಆಯೋಜಿಸಲಾದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ 2024 ಕಾರ್ಯಕ್ರಮವನ್ನು ಉದ್ಘಾಟಿಸಿ ಪಿಎಸ್‌ಐ ಶ್ರೀ ಮಂಜುನಾಥ್ ಪಾಟೀಲ್ ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ರೇಂಜರ್ ಲೀಡರ್ ಡಾ.






ಉಷಾದೇವಿ ಹಿರೇಮಠ್ ಸಂಚಾರಿ ನಿಯಮಗಳನ್ನು ಸುರಕ್ಷಿತ ಪ್ರಯಾಣ ನಡೆಸಲು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜು ವಿಜಯಪುರ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿಜಯಪುರ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ವಿಜಯಪುರ, ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ ವಿಜಯಪುರ, ಎಸ್.ಎಸ್. ಪ್ರೌಢಶಾಲೆ ವಿಜಯಪುರ, ಕೆ.ಪಿ.ಎಸ್. ನಾಗಠಾಣ, ಶ್ರೀ ಮಲ್ಲಿಕಾರ್ಜುನ್ ಪ್ರೌಢಶಾಲೆ ಮುಳವಾಡ, ಶ್ರೀ ಕಿರಣ್ ಓಪನ್ ಗ್ರೂಪ್ಸ್ ವಿಜಯಪುರ, 180 ಸ್ಕೌಟ್/ಗೈಡ್ ಮತ್ತು ರೋವರ್/ರೇಂಜರ್ ಮಕ್ಕಳು ಭಾಗವಹಿಸಿದ್ದರು. ಸಂಚಾರಿ ನಿಯಮಗಳ ಕುರಿತು ಶ್ರೀ ಮಂಜುನಾಥ ಪಾಟೀಲ್ ಪಿ.ಎಸ್.ಐ.ರವರ ತಂಡದವರಿಂದ ಮಕ್ಕಳಿಗೆ ತಿಳಿಸಲಾಯಿತು. ಹಾಗೂ ಪ್ರಾಯೋಗಿಕವಾಗಿ ಮಕ್ಕಳಿಂದ ಸಂಚಾರಿ ನಿಯಮಗಳನ್ನು ಪ್ರದರ್ಶಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿದ್ಯಾವತಿ ಅಂಕಲಗಿರವರು ಮಾತನಾಡಿ ಸಂಚಾರಿ ನಿಯಮದ ಕಾನೂನುಗಳ ಕುರಿತು ಕಾನೂನು ಅರಿವು ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯರಾದ ಡಾ. ರಾಬಿಯ ಮಿರ್ದೆರವರು ಮಾತನಾಡಿ ಎಲ್ಲಾ ಮಕ್ಕಳಿಗೂ ಶುಭ ಹಾರೈಸಿ ಸಂಚಾರಿ ನಿಯಮಗಳ ಬಗ್ಗೆ ಅರಿವು ಮೂಡಿಸಲು ತಿಳಿಸಿದರು. ಇದೇ ಸಂದರ್ಭದಲ್ಲಿ ರೇಂಜರ್ ಲೀಡರ್ ಶ್ರೀಮತಿ ಛಾಯಾದೇವಿ ದ್ಯಾಪುರ್, ಸ್ಕೌಟ್ ಮಾಸ್ಟರ್ ಶ್ರೀ ಜೆ.ಐ. ಇಂಗಳೇಶ್ವರ್, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಶ್ರೀಶೈಲ್ ಸೋಲಾಪುರ್ ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಸಂಘಟಕರಾದ ಶ್ರೀ ರಾಜಶೇಖರ್ ಖೇಡಗಿ ನಿರೂಪಣೆ ಮಾಡಿದರು. ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಡಾ. ಅನಿಲ್ ನಾಯಕ್‌ರವರು ಎಲ್ಲರನ್ನು ಸ್ವಾಗತಿಸಿದರು. ಜಿಲ್ಲಾ ಯುವ ಸಮಿತಿಯ ಉಪಾಧ್ಯಕ್ಷರಾದ ಕುಮಾರಿ ಶೋಭಾ ಕಬಾಡೆ ರವರು ಕಾರ್ಯಕ್ರಮವನ್ನು ವಂದಿಸಿದರು.

## ಅಭಿನಂದನೆಗಳು



ಡಾ॥ ವೀರಭದ್ರ ಮಜ್ಜಿಗೆ ತಂ॥ ವೀರೇಶ ಮಜ್ಜಿಗೆ ಕಬ್ ವಿದ್ಯಾರ್ಥಿ ಲಿಟಲ್ ಶಾಲೆ, ಲಿಂಗಸುಗೂರು ಜಿ: ರಾಯಚೂರು ಈ ಕಬ್ ವಿದ್ಯಾರ್ಥಿಯು 65,000 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ 5 ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾನೆ. 10 ನಿಮಿಷದಲ್ಲಿ 310 ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. ಅದಕ್ಕಾಗಿ ಲಂಡನ್‌ನವರು ಇವನ ಪ್ರತಿಭೆಯನ್ನು ಗುರುತಿಸಿ ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿಯನ್ನು ನೀಡಿದ್ದಾರೆ ಮತ್ತು ಇಂಡಿಯನ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಭಾಗವಹಿಸಿ ಕಡಿಮೆ ಸಮಯದಲ್ಲಿ ಪ್ರಪಂಚಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಬಗ್ಗೆ ಜ್ಞಾನವನ್ನು ಹೊಂದಿದ್ದು ನಿರರ್ಗಳವಾಗಿ ಪ್ರಶ್ನೋತ್ತರಗಳನ್ನು ಹೇಳುತ್ತಾನೆ.

**ಈ ಕಬ್ ವಿದ್ಯಾರ್ಥಿಯು ಪಡೆದ 05 ಪ್ರಶಸ್ತಿಗಳ ವಿವರ:**

1) 2022ರಲ್ಲಿ ಇಂಡಿಯನ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಅಮೆರಿಕ.

2) 2022ರಲ್ಲಿ ಅಬ್ದುಲ್ ಕಲಾಂ ಗೋಲ್ಡನ್ ಬುಕ್ ಆಫ್ ರೆಕಾರ್ಡ್ಸ್ ಅವಾರ್ಡ್ಸ್–ಚೆನ್ನೈ.

3) 2023 ರಲ್ಲಿ ವರ್ಲ್ಡ್ ವೈಡ್ ಬುಕ್ ಆಫ್ ರೆಕಾರ್ಡ್ಸ್ ಲಂಡನ್.

4) 2023ರಲ್ಲಿ ಇಂಡಿಯಾ ವರ್ಲ್ಡ್ ರೆಕಾರ್ಡ್ಸ್ ಜಾರ್ಖಂಡ್.

5) 2023ರಲ್ಲಿ ಡಾಕ್ಟರೇಟ್ ಅವಾರ್ಡ್ ಜಾರ್ಖಂಡ್.

ಈ ಮೇಲಿನ ಪ್ರಶಸ್ತಿಗಳನ್ನು ಡಾಕ್ಟರ್ ವೀರಭದ್ರ ಮಜ್ಜಿಗೆ ಈ ವಿದ್ಯಾರ್ಥಿಗೆ ನೀಡಿ ಗೌರವಿಸಿರುತ್ತಾರೆ.



# ಕಸ ವಿಂಗಡಿಸಿ ಕೊಡಿ

# ನಗರವನ್ನು ಸ್ವಚ್ಛವಾಗಿಡಿ




**ಜನಸಂಖ್ಯೆ ಇಷ್ಟೊಂದು ವೇಗವಾಗಿ ಬೆಳೆಯುತ್ತಿರುವ ಈಗಿನ ಕಾಲಘಟ್ಟದಲ್ಲಿ 'ಕಸ ನಿರ್ವಹಣೆ' ನಿಜಕ್ಕೂ ದೊಡ್ಡ ಸವಾಲು. ಹೀಗಿರುವಾಗ ಕಸ ನಿರ್ವಹಣೆ ಎಲ್ಲರ ಸಾಮಾಜಿಕ ಜವಾಬ್ದಾರಿಯೂ ಹೌದು. ಕಸ ವಿಂಗಡಣೆಯ ಮೂಲಕ ಕಸ ನಿರ್ವಹಣೆಯ ಸವಾಲನ್ನು ಎದುರಿಸಲು ನಮ್ಮೊಂದಿಗೆ ಸಹಕರಿಸಿ. ನಿಮ್ಮ ನಗರ ಸ್ವಚ್ಛವಾಗಿರಬೇಕಲ್ಲವೇ? ಎಲ್ಲ ಸ್ವಸ್ಥ ಮನಸುಗಳೂ ಈ ಕಾರ್ಯದಲ್ಲಿ ತೊಡಗಿಕೊಂಡು, ಬಿಬಿಎಂಪಿ ಜತೆ ಸಹಕರಿಸಲು ಕೋರುತ್ತೇವೆ.**

## ಕಸ ವಿಂಗಡಣೆ ಕಡ್ಡಾಯ

- ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯವನ್ನು ಬೇರ್ಪಡಿಸಿ.
- ಪ್ರತಿ ದಿನ ಹಸಿತ್ಯಾಜ್ಯವನ್ನು ನಿಗದಿತ ಸಮಯದೊಳಗೆ ಸಂಬಂಧಿತ ತ್ಯಾಜ್ಯ ಸಂಗ್ರಹಕಾರರಿಗೆ ನೀಡಬೇಕು.
- ಒಣತ್ಯಾಜ್ಯವನ್ನು ವಾರಕ್ಕೆರಡು ಬಾರಿ ತ್ಯಾಜ್ಯ ಸಂಗ್ರಹಕಾರರಿಗೆ ನೀಡಬೇಕು.
- ನೈರ್ಮಲ್ಯ ತ್ಯಾಜ್ಯವನ್ನು ಕಾಗದದಲ್ಲಿ ಸುತ್ತಿ ಕೆಂಪು ಬಣ್ಣದ 'X' ಚಿಹ್ನೆಯನ್ನು ಹಾಕಿ ಪ್ರತಿದಿನ ಹಸಿತ್ಯಾಜ್ಯದ ಜೊತೆಗೆ ನೀಡಬೇಕು.
- ಉದ್ಯಾನವನದ ತ್ಯಾಜ್ಯವನ್ನು ಅಧಿಕೃತ ವ್ಯಕ್ತಿಗಳು ವಾರದ ನಿಗದಿತ ದಿನಗಳಲ್ಲಿ ಸಂಗ್ರಹಿಸುವರು.
- ಭಗ್ನಾವಶೇಷಗಳು ಮತ್ತು ಅನುಪಯುಕ್ತ ತ್ಯಾಜ್ಯವನ್ನು ಸೂಚಿತ ಪರಿತ್ಯಕ್ತ ಕ್ವಾರಿಗಳಲ್ಲೇ ವಿಲೇವಾರಿ ಮಾಡುವುದು.
- ಗೃಹ ಬಳಕೆ ಅಪಾಯಕಾರಿ ತ್ಯಾಜ್ಯವನ್ನು ಸೂಚಿತ ದಿನಗಳಲ್ಲಿ ತ್ರೈಮಾಸಿಕವಾಗಿ ಅಥವಾ ಮುಂಚಿತವಾಗಿ ಸಂಗ್ರಹಿಸಲಾಗುವುದು.

## ಸಗಟು ಉತ್ಪಾದಕರು

- ಹಸಿತ್ಯಾಜ್ಯವನ್ನು ಉತ್ಪನ್ನ ಸ್ಥಾನದಲ್ಲೇ ಗೊಬ್ಬರೀಕರಿಸಬೇಕು ಅಥವಾ ಬಯೋ ಮೆಥನೈಸೇಷನ್ ತಂತ್ರಜ್ಞಾನ ಉಪಯೋಗಿಸಿ ಸಂಸ್ಕರಿಸಬೇಕು ಅಥವಾ ಖಾಸಗಿ ಗೊಬ್ಬರೀಕರಿಸುವವರಿಗೆ ತಮ್ಮ ವೆಚ್ಚದಲ್ಲಿ ನೀಡಬೇಕು.
- ಒಣತ್ಯಾಜ್ಯವನ್ನು ಹತ್ತಿರದ ಅಧಿಕೃತ ಒಣತ್ಯಾಜ್ಯ ಸಂಗ್ರಹಕಾರರಿಗೆ ನೀಡಬೇಕು.
- ನೈರ್ಮಲ್ಯ ತ್ಯಾಜ್ಯವನ್ನು ಬೇರೆಯಾಗಿ ಸಂಗ್ರಹಿಸಿ ಹತ್ತಿರದ ಬಯೋ-ಮೆಡಿಕಲ್ ತ್ಯಾಜ್ಯ ಸಂಗ್ರಹಣ ಕೇಂದ್ರಕ್ಕೆ ನೀಡಬೇಕು.
- ಭಗ್ನಾವಶೇಷಗಳು / ಅನುಪಯುಕ್ತ ತ್ಯಾಜ್ಯವನ್ನು ಸೂಚಿತ ಪರಿತ್ಯಕ್ತ ಕ್ವಾರಿಗಳಲ್ಲೇ ವಿಲೇವಾರಿ ಮಾಡುವುದು.

ತ್ಯಾಜ್ಯವನ್ನು ಬೀದಿಗಳು, ಸಾರ್ವಜನಿಕ ಸ್ಥಳಗಳು ಅಥವಾ ಖಾಲಿ ನಿವೇಶನಗಳಲ್ಲಿ ಹಾಕುವಂತಿಲ್ಲ. ಉಲ್ಲಂಘಿಸಿದಲ್ಲಿ, ದಂಡ ತೆರಬೇಕಾಗುವುದು.

ಆಡಳಿತಗಾರರು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಮುಖ್ಯ ಆಯುಕ್ತರು



ಜನವರಿ 26, 2024 ರಂದು ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ದಿನಾಚರಣೆಯ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಶ್ರೀ ಆದಿಚುಂಚನಗಿರಿ ಪ್ರೌಢಶಾಲೆಯ ಸ್ಕೌಟ್ಸ್ ತಂಡಕ್ಕೆ ಮಾನ್ಯ ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೆ.ಎನ್. ರಾಜಣ್ಣರವರು ಪಾರಿತೋಷಕ ಮತ್ತು ಪ್ರಮಾಣ ಪತ್ರವನ್ನು ನೀಡಿ ಗೌರವಿಸಿದರು. ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ, ಮಾನ್ಯ ಶಾಸಕರಾದ ಶ್ರೀ ಸ್ವರೂಪ್, ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಮೊಹಮ್ಮದ್ ಸುಜಿತಾ, ಸಿ.ಇ.ಒ, ಶ್ರೀಮತಿ ಪೂರ್ಣಿಮಾ ಇತರರು ಚಿತ್ರದಲ್ಲಿದ್ದಾರೆ.

ಜನವರಿ 26, 2024 ರಂದು ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ರೇಂಜರ್ ತಂಡಕ್ಕೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ|| ಜಿ. ಪರಮೇಶ್ವರ್ ಅವರು ಪ್ರಶಸ್ತಿ ಪತ್ರ ನೀಡಿ ಗೌರವಿಸಿದರು.





ಜನವರಿ 26, 2024 ರಂದು ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪಥಸಂಚಲನದಲ್ಲಿ ಭಾಗವಹಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳಿಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವರಾಜ ತಂಗಡಗಿ ರವರು ಬಹುಮಾನ ನೀಡಿ ಗೌರವಿಸಿದರು. ಮಾನ್ಯ ಶಾಸಕರಾದ ಶ್ರೀ ರಾಘವೇಂದ್ರ ಹಿಟ್ನಾಳ್, ಮಾನ್ಯ ಸಂಸದರಾದ ಶ್ರೀ ಸಂಗಣ್ಣ ಕರಡಿ ಮತ್ತು M.L.C. ಶ್ರೀಮತಿ ಹೇಮಲತಾ ನಾಯಕ್, ಜಿಲ್ಲಾಧಿಕಾರಿ ಶ್ರೀ ನಲೀನ್ ಅತುಲ್, ಸಿ.ಇ.ಒ. ಶ್ರೀ ರಾಹುಲ್ ರತ್ನಂ ಪಾಂಡೆ, ಜಿಲ್ಲಾ ಪೊಲೀಸ್ ಅಧಿಕಾರಿ ಶ್ರೀಮತಿ ಯಶೋದ ವಂಟಗುಡಿ ಹಾಗು ಅಪರ ಜಿಲ್ಲಾಧಿಕಾರಿ ಶ್ರೀಮತಿ ಸಾವಿತ್ರಿ ಕಡಿ, ಉಪಸ್ಥಿತರಿದ್ದರು.

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)

SHAHEEN
GROUP OF INSTITUTIONS

35 Years Of Excellence

# ADMISSIONS OPEN

## COURSES OFFERED

- **PUC (Science)** Integrated with NEET/JEE
- **NEET Long Term** Repeaters Batch
- **PUC (Arts)** Integrated with UPSC/CLAT
- **PUC (Commerce)** Integrated with CA Foundation
- **B.A, B.Sc, B.Com BBA & BCA** Integrated with UPSC
- **Pre Cum Mains UPSC for Graduates** One Year Exclusive UPSC Course
- **MSc (Maths)**

www.shaheengroup.org | Toll Free: 1800 121 6235
Head Office: Shaheen Nagar, BIDAR - 585403.



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26